ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 23
ಜೂನ್ 03, 2012

ಪುಟ 16 ರೂ. 5/-



Blog :janashakthi.wordpress.com e-mail : js_weekly@yahoo.com

ಮೊಳಗಿತು ಭೂಮಿ ಹೋರಾಟದ ರಣ ಕಹಳೆ





ಯುಪಿಎ 2 ಸರ್ಕಾರಕ್ಕೆ ಮೂರು ವರ್ಷ

ಸಂಭ್ರಮ ಪಡಲು ಜನತೆಗೇನಿದೆ?

ಪೆಟ್ರೋಲ್ ಬೆಲೆ ಏರಿಕೆ: ಕಂಗೆಟ್ಟ ಜನತೆಗೆ ಮತ್ತೆ ಮತ್ತೆ ಬರೆ



'ಕಪ್ಪು' ಹಣದ ಮೇಲೆ 'ಶ್ವೇತ' ವಸ್ತ್ರ

ತಪ್ಪದ ಕಿತ್ತಾಟ ಕಾಟ

ಪೆಟ್ರೋಲ್ ಬೆಲೆ ಏರಿಕೆ : ಕಂಗೆಟ್ಟ ಜನತೆಗೆ ಮತ್ತೆ ಬರೆ

ಮೇ 31 ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಎಡಪಕ್ಷಗಳ ಕರೆ

ಮೇ 23ರಂದು ನವದೆಹಲಿಯಲ್ಲಿ ಎಡಪಕ್ಷಗಳ ಸಭೆ ಸೇರಿದ್ದು ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ.

ಪೆಟ್ರೋಲಿಯಂ ದರ ಏರಿಕೆ ವಿರುದ್ಧ

ಮೇ 23ರ ಮಧ್ಯರಾತ್ರಿಯಿಂದ ಅನ್ವಯವಾಗುವಂತೆ ಪೆಟ್ರೋಲ್ ಬೆಲೆಯಲ್ಲಿ 7.5 ರೂಪಾಯಿ ಏರಿಕೆ ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಎಡ ಪಕ್ಷಗಳ ಸಭೆ ತೀವ್ರವಾಗಿ ಖಂಡಿಸಿದೆ. ಜೊತೆಗೆ ಡೀಸಲ್ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಪ್ರಸ್ತಾಪವನ್ನೂ ಸಭೆ ಖಂಡಿಸಿದೆ.

ದೇಶಾದ್ಯಂತದ ಜನತೆ ಬೆಲೆ ಏರಿಕೆಯಿಂದ ತತ್ತರಿಸಿರುವಾಗ ಪೆಟ್ರೋಲ್ ದರದಲ್ಲಿ ಕಂಡರಿಯದಂತೆ ಏರಿಸುವ ಮೂಲಕ ಕೇಂದ್ರ ಸರ್ಕಾರ ಮತ್ತೊಂದು ಮರ್ಮಾಘಾತ ನೀಡಿದೆ. ತಕ್ಷಣ ಏರಿಸಿದ ಬೆಲೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಮತ್ತು ಇತರ ಪೆಟ್ರೋಲಿಯಂ ದರ ಏರಿಕೆಯ ಪ್ರಸ್ತಾಪವನ್ನೂ ಕೈಬಿಡಬೇಕು ಎಂದು ಸಭೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ದಾಖಲೆ ಪ್ರಮಾಣದಲ್ಲಿ ಮಾಡಲಾದ ಈ ಬೆಲೆ ಏರಿಕೆ ವಿರುದ್ಧ ತಕ್ಷಣದಿಂದಲೇ ಎಲ್ಲ ಎಡ ಪಕ್ಷಗಳ ಸ್ಥಳೀಯ ಘಟಕಗಳು ವಿವಿಧ ಹಂತಗಳಲ್ಲಿ ಪ್ರತಿಭಟನೆ ನಡೆಸಿ ಜನರನ್ನು ಹೋರಾಟಕ್ಕೆ ಅಣಿನೆರಸಬೇಕೆಂದು ಸಭೆ ಒಕ್ಕೊರಳಿನಿಂದ ಕರೆ ನೀಡಿದೆ.

ಮೇ 31, 2012 ಅ.ಭಾ. ಪ್ರತಿಭಟನಾ ದಿನಾಚರಣೆ

ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ ಮೇ 31, 2012 ರಂದು ದೇಶವ್ಯಾಪಿಯಾಗಿ ಹರತಾಳ, ಪ್ರತಿಭಟನಾ ಪ್ರದರ್ಶನ, ಮುತ್ತಿಗೆ, ರಸ್ತಾ ರೋಕೋಗಳನ್ನು, ರ್‍ಯಾಲಿಗಳನ್ನು ನಡೆಸಬೇಕೆಂದು ನಾಲ್ಕು ಎಡಪಕ್ಷಗಳು ಕರೆನೀಡಿವೆ.



ಆಹಾರ ಭದ್ರತೆಗಾಗಿ ಹೋರಾಟ

ಆಹಾರ ಭದ್ರತೆ ಕಾಯಿದೆಗೆ ಸಂಬಂಧಿಸಿದಂತೆ ಎಡ ಪಕ್ಷಗಳು ನಡೆಸಬೇಕಾದ ಹೋರಾಟದ ಸ್ವರೂಪವನ್ನು ಈಗಾಗಲೇ ನಿರ್ಧರಿಸಿವೆ. ಸಾರ್ವತ್ರಿಕ ಸಾರ್ವಜನಿಕ (ಪಡಿತರ)ವಿತರಣ ವ್ಯವಸ್ಥೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ನಿರ್ಣಾಯಕ ಹೋರಾಟವನ್ನು ಕೈಗೊಳ್ಳಲು ಎಡಪಕ್ಷಗಳ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಲಾಯಿತು. ಈಗ ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವ ಆಹಾರ ಭದ್ರತಾ ಕಾಯಿದೆಯಲ್ಲಿ ಎಲ್ಲ ನಾಗರಿಕರಿಗೂ ಆಹಾರ ಭದ್ರತೆಯನ್ನು ಖಾತ್ರಿಗೊಳಿಸುವ ಕ್ರಮಗಳನ್ನು ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಜನಪರ ಆಹಾರ ಭದ್ರತಾ ಕಾಯಿದೆಗೆ ಒತ್ತಾಯಿಸಿ ಜುಲೈ ತಿಂಗಳಿನಾದ್ಯಂತ ಎಲ್ಲ ರಾಜ್ಯಗಳಲ್ಲೂ ಎಡಪಕ್ಷಗಳ ಎಲ್ಲ ಘಟಕಗಳು ತಳಮಟ್ಟದಿಂದ ವಿವಿಧ ಹಂತಗಳಲ್ಲಿ ಹೋರಾಟ ರೂಪಿಸಬೇಕೆಂದು ಕರೆ ನೀಡಲಾಯಿತು. ಇದರ ಮುಂದಿನ ಭಾಗವಾಗಿ 2012ರ ಜುಲೈ 30ರಿಂದ ಆಗಸ್ಟ್ 3ರ ವರೆಗೆ ಮಳೆಗಾಲದ ಅಧಿವೇಶನದ ಸಂದರ್ಭದಲ್ಲಿ ಸಂಸತ್ತಿನ ಮುಂದೆ ನಿರಂತರ ಎಡಪಕ್ಷಗಳ ನಾಯಕರ ಧರಣಿ ನಡೆಸಲು ಸಭೆ ನಿರ್ಧರಿಸಿತು. ಈ ಧರಣಿಯಲ್ಲಿ ಎಡಪಕ್ಷಗಳ ರಾಷ್ಟ್ರೀಯ ನಾಯಕರೂ ಭಾಗವಹಿಸಲಿದ್ದು, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಿದೆ.

ರಾಷ್ಟ್ರಪತಿ ಚುನಾವಣೆ

ರಾಷ್ಟ್ರಪತಿ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ವಿಶಾಲ ತಳಹದಿಯಲ್ಲಿ ಸರ್ವ ಸಮ್ಮತ ವ್ಯಕ್ತಿಯನ್ನು ಆಯ್ಕೆ ಮಾಡಬೇಕು ಎಂಬ ಅಭಿಪ್ರಾಯವನ್ನು ಎಡಪಕ್ಷಗಳ ಸಭೆಯಲ್ಲಿ ಪುನರುಚ್ಚರಿಸಲಾಯಿತು.

ಎಡಪಕ್ಷಗಳ ಈ ಮಹತ್ವದ ಸಭೆಯಲ್ಲಿ ಎಡಪಕ್ಷಗಳ ಕಾರ್ಯದರ್ಶಿಗಳಾದ ಪ್ರಕಾಶ್ ಕಾರಟ್, ಸುಧಾಕರ ರೆಡ್ಡಿ, ದೇಬಬ್ರತ ಬಿಸ್ವಾಸ್ ಮತ್ತು ಟಿ.ಜೆ. ಚಂದ್ರಚೂಡನ್ ಅವರಲ್ಲದೆ ಎ.ಬಿ. ಬರ್ಧನ್, ಸೀತಾರಾಮ ಯೆಚೂರಿ, ಎಸ್. ರಾಮಚಂದ್ರನ್ ಪಿಳ್ಳೆ, ಡಿ. ರಾಜಾ, ಅಬನಿ ರಾಯ್ ಮತ್ತು ಜಿ ದೇವರಾಜನ್ ಭಾಗವಹಿಸಿದ್ದರು.

ಬೆಂಗಳೂರು ಪದವೀಧರರ ಕ್ಷೇತ್ರ ವಿಧಾನ ಪರಿಷತ್ ಚುನಾವಣೆ 2012

ಕೆ.ಎಸ್. ಲಕ್ಷ್ಮಿಯವರನ್ನು ಬೆಂಬಲಿಸಲು ಮನವಿ

ಬೆಂಗಳೂರು ಪದವೀಧರರ ಕ್ಷೇತ್ರ ವಿಧಾನ ಪರಿಷತ್ ಚುನಾವಣೆ 2012 ಜೂನ್ 10ರಂದು ನಡೆಯುತ್ತಿದೆ. ಮತದಾರರಾಗಿ ನೊಂದಾಯಿಸಿ ಕೊಂಡಿರುವ ತಮಗೆ ಪ್ರಥಮತಃ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ರಾಜ್ಯದ ಬಹುದೊಡ್ಡ ಸಂಖ್ಯೆಯ ಪದವೀಧರರನ್ನು ಹೊಂದಿರುವ 'ಬೆಂಗಳೂರು ಕ್ಷೇತ್ರದ ಮತದಾರರಾದ ತಮ್ಮ ಪ್ರಥಮ ಪ್ರಾಶಸ್ತ್ಯದ ಮತವು ರಾಜ್ಯದ ನೀತಿ ನಿರೂಪಣೆ, ಶಾಸನ ರಚನಾ ಸಭೆಯಾದ ವಿಧಾನ ಪರಿಷತ್ತು ಘನತೆಗೆ ಗೌರವಕ್ಕೆ ದೊಡ್ಡ ಕೊಡುಗೆ ನೀಡಲಿದೆ. ಒಂದರ ನಂತರ ಒಂದರಂತೆ ಅನಾವರಣಗೊಳ್ಳುತ್ತಿರುವ ಬೃಹತ್ ಭ್ರಷ್ಟಾಚಾರದ ಹಗರಣಗಳು, ಗಣಿಲೂಟಿ, ಭೂದಂಧೆ–ಮಾಫಿಯಾ ಹಿಡಿತ ಸ್ವಜನ ಪಕ್ಷಪಾತವು, ತತ್ವಹೀನ ಸಮಯಸಾಧಕತನ, ಒಬ್ಬರ ನಂತರ ಮತ್ತೊಬ್ಬರಂತೆ ಜೈಲಿಗೆ ಸೇರುತ್ತಿರುವುದು, ಸಾರ್ವಜನಿಕ ಜೀವನ ಹಾಗು ರಾಜಕಾರಣದ ನೈತಿಕ ಅಧಃಪತನವು ಇಡೀ ರಾಜಕಾರಣದ ಕುರಿತು ಅಸಹ್ಯ ಪಡುವಂತೆ ಮಾಡಿದೆ.

ಯೋಜನಾ ರಹಿತ ನಗರಾಭಿವೃದ್ಧಿಯು ತಂದೊಡ್ಡಿರುವ ಕುಡಿಯುವ ನೀರಿನ ಕೊರತೆ, ಅಸಮರ್ಪಕ ಸಾರಿಗೆ ವ್ಯವಸ್ಥೆ, ದಿನ ನಿತ್ಯದ ಟ್ರಾಫಿಕ್ ಜಾಮ್ ಕಿರಿಕಿರಿ, ದುಬಾರಿಯಾಗುತ್ತಿರುವ ಸಾರಿಗೆ ವೆಚ್ಚಗಳು ಹೆಚ್ಚುತ್ತಿರುವ ಕೊಲೆ, ಸುಲಿಗೆ, ಅಪರಾಧ ಪ್ರಕರಣಗಳು ಸರ್ವರನ್ನು ಭಾಧಿಸಿವೆ. ಬೆಂಗಳೂರು ಸುತ್ತಮುತ್ತ ವಾಸಿಸುವ ಜನತೆ ಸ್ವಂತಕ್ಕೊಂದು ನಿವೇಶನ, ಮನೆ ಹೊಂದುವುದು ಅಸಾಧ್ಯವಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ, ದುಬಾರಿಯಾಗುತ್ತಿರುವ ಮನೆ ಬಾಡಿಗೆಗಳು; ಕಟ್ಟಡ ನಿರ್ಮಾಣ ಸಾಮಾಗ್ರಿಗಳ ಬೆಲೆಗಳು ಪರಿಸ್ಥಿತಿಯನ್ನು ತೀವ್ರಗೊಳಿಸುತ್ತಿವೆ. ಬೆಲೆ ಏರಿಕೆಗೆ ಕಾರಣವಾಗಿರುವ ಪೆಟ್ರೋಲ್, ಡಿಸೇಲ್ ದರಗಳಲ್ಲಿನ ಕೇಂದ್ರ–ರಾಜ್ಯ ಸರ್ಕಾರಗಳ ತೆರಿಗೆ ಬಾಬ್ತು ಶೇಕಡ 50ರಷ್ಟಿದೆ. ಕೇಂದ್ರ–ರಾಜ್ಯ ಸರ್ಕಾರಗಳ ನವ ಉದಾರವಾದಿ ಆರ್ಥಿಕ ನೀತಿಗಳ ಫಲವಾಗಿ ಉದ್ಭವಿಸಿರುವ ರೈತ, ಕಾರ್ಮಿಕರ ಸಂಘಟನೆಗಳು, ಜಗತ್ತಿನಾದ್ಯಂತ ಪ್ರತಿಧ್ವನಿಸಿರುವ ಆರ್ಥಿಕ ಹಿಂಜರಿತ, ಬಿಕ್ಕಟ್ಟಿನ ಪರಿಣಾಮಗಳು ರಾಜ್ಯದ ಪದವೀಧರರು, ಶಿಕ್ಷಿತ ಸಮುದಾಯವನ್ನು ಭಾದಿಸಿವೆ. ನವ ಉದಾರವಾದಿ ಆರ್ಥಿಕ ನೀತಿಗಳ ಅಂದಾನುಕರಣೆಯು ಸರ್ಕಾರಗಳು ಉದ್ಯೋಗ ಕಡಿತ, ವೆಚ್ಚ ಕಡಿತಕ್ಕೆ ಮುಂದಾಗಿ ತನ್ನ ಸಾಮಾಜಿಕ ಹೊಣೆಗಾರಿಕೆಗಳಿಂದ ಹಿಂದೆ ಸರಿಯುವಂತೆ ಮಾಡಿದೆ. ನಿವೃತ್ತಿ ಜೀವನದ ಪಿಂಚಣಿಗೂ ಕನ್ನ ಹಾಕುವ ಪಿಂಚಣಿ ಖಾಸಗೀಕರಣಕ್ಕೆ ಎಡೆಮಾಡಿವೆ.



ದಿನನಿತ್ಯ ಅಪಮೌಲ್ಯಗೊಳ್ಳುತ್ತಿರುವ ರೂಪಾಯಿ, ಏರಿಳಿತ ಕಾಣುತ್ತಿರುವ ಮುಕ್ತ ಮಾರುಕಟ್ಟೆ ಆರ್ಥಿಕತೆಯಲ್ಲಿ ದಿವಾಳಿಕೋರತನವನ್ನು ವ್ಯಾಪಿಸುತ್ತಿವೆ. ಸಾರ್ವಜನಿಕ ಒಡೆತನದ ಉದ್ದಿಮೆಗಳು, ಬ್ಯಾಂಕ್, ವಿಮಾ ರಂಗ, ಭವಿಷ್ಯ ನಿಧಿ, ಖಾಸಗೀಕರಣಕ್ಕೆ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಯ ನವ ಉದಾರವಾದಿ ಆರ್ಥಿಕ ನೀತಿಗಳು ಒತ್ತಾಸೆಯಾಗಿವೆ. ಈ ಆರ್ಥಿಕ ನೀತಿಗಳು ಜನತೆಯ ಉದ್ಯೋಗ, ಶಿಕ್ಷಣ ಬದುಕಿನ ಮೇಲೆ ನಡೆಸಿರುವ ದಾಳಿಗಳು ಸೃಜಿಸುತ್ತಿರುವ ಸಾಂಸ್ಕೃತಿಕ ಪಲ್ಲಟಗಳು, ಅದರ ಉಪ ಉತ್ಪನ್ನಗಳಾಗಿ ಹೊರ ಹೊಮ್ಮಿರುವ ಕೋಮು, ಜಾತಿ ಕೇಂದ್ರಿತ ರಾಜಕಾರಣ ಕುರಿತು ಶಿಕ್ಷಿತ ಸಮುದಾಯವು ಎಚ್ಚರಕೆಯ ಪ್ರತಿಸ್ಪಂಧನೆಯನ್ನು ನೀಡಬೇಕಿದೆ.

ಜಗತ್ತಿನ ಪ್ರಬಲ ದೇಶಗಳಲ್ಲಿ ಬಲಪಂಥೀಯ ನವ ಉದಾರವಾದಿ ಆರ್ಥಿಕ ನೀತಿಗಳ ದಿಕ್ಕು ಬದಲಿಸುವ ನಿಟ್ಟಿನಲ್ಲಿ ಎಡಪಂಥೀಯ ವ್ಯಕ್ತಿಗಳು, ಶಕ್ತಿಗಳನ್ನು ತಮ್ಮ ತಮ್ಮ ದೇಶಗಳಲ್ಲಿ ಅಧಿಕಾರಕ್ಕೆ ತರುತ್ತಿರುವ ಬೆಳವಣಿಗೆಯನ್ನು ತಾವುಗಳು ಗಮನಿಸಿದ್ದೀರೆಂದು ಭಾವಿಸುತ್ತೇವೆ.

ಈ ಸನ್ನಿವೇಶದಲ್ಲಿ ಮುಂಬರುವ ವಿಧಾನ ಪರಿಷತ್ ಚುನಾವಣೆಯಲ್ಲಿ, ಹಗರಣಗಳಿಂದಾಗಿ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕಾಗಿ ಬಂದ ಅಥವ ಭೂದಂಧೆಯಲ್ಲಿ ತೊಡಗಿರುವ ಅಥವ ತತ್ವಹೀನ ಸಿದ್ಧಾಂತ ರಹಿತ ಸಮಯ ಸಾಧಕರು ತಮ್ಮನ್ನು ಪ್ರತಿನಿಧಿಸಬೇಕೆ? ಅಥವ ಎರಡು ಬಾರಿ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಆಯ್ಕೆಯಾಗಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಂಸ್ಥೆಗಳಿಗೆ ವಿ.ವಿ ಮತ್ತು ಸರ್ಕಾರದಿಂದ ಸಿಗಬೇಕಿದ್ದ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದವರು ತಮ್ಮನ್ನು ಪ್ರತಿನಿಧಿಸ ಬೇಕೆ? ಎಂಬುದನ್ನು ಪ್ರಜ್ಞಾವಂತ ಪದವೀಧರ ಮತದಾರರು ನಿರ್ಧರಿಸಬೇಕಿದೆ.

ಈ ನಿಟ್ಟಿನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು, ಭಾರತ ಕಮ್ಯೂನಿಸ್ಟ್ ಪಕ್ಷ, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ) ಮತ್ತಿತರೆ ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು, ಶಕ್ತಿಗಳು ಜೊತೆಗೂಡಿ ಎಡ ಪರ್ಯಾಯದ ಅಭ್ಯರ್ಥಿಯಾಗಿ ಕೆ.ಎಸ್.ಲಕ್ಷ್ಮಿರವರನ್ನು ಮುಂಬರುವ ವಿಧಾನ ಪರಿಷತ್ ಚುನಾವಣೆಯ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಪ್ರಜ್ಞಾವಂತ ಪದವೀಧರರಾದ ತಾವುಗಳು ಕೆ.ಎಸ್.ಲಕ್ಷ್ಮಿರವರಿಗೆ ತಮ್ಮ ಪ್ರಥಮ ಪ್ರಾಶಸ್ತ್ಯದ ಮತನೀಡಿ ಜಯಶೀಲರನ್ನಾಗಿಸಬೇಕಾಗಿ ಮನವಿ ಮಾಡುತ್ತೇವೆ.

ಪುಟ 5 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ವಿನಾಶಕಾರಿ ವಿಶ್ವ ಬಂಡವಾಳಗಾರರ ಸಮಾವೇಶ ಪ್ರತಿರೋಧಿಸಬೇಕು

ರಾಜ್ಯದ ರೈತರ ತೀವ್ರ ವಿರೋಧದ ನಡುವೆಯೂ ಅವರ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಂಡು ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸುವುದನ್ನು ರಾಜ್ಯದ ಬಿಜೆಪಿ ಸರ್ಕಾರ ಮುಂದುವರೆಸುತ್ತಿದೆ. ಹೂಡಿಕೆದಾರರಿಗೆ ಅಗತ್ಯವಾದ ಭೂಮಿ, ನೀರು ಹಾಗೂ ವಿದ್ಯುತ್ ಕೊರತೆ ಆಗದಂತೆ ಪೂರೈಸುವ ಭರವಸೆ ನೀಡಿ ಹೂಡಿಕೆದಾರರನ್ನು ಆಮಂತ್ರಿಸಲಾಗುತ್ತಿದೆ. 2010ರಲ್ಲಿ ವಿಶ್ವ ಹೂಡಿಕೆದಾರರ ಸಮಾವೇಶ, 2011ರಲ್ಲಿ ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲಾಗಿದೆ. ಈಗ ಬರುವ ಜೂನ್ 6ರಿಂದ 8ರ ವರೆಗೆ ಬೆಂಗಳೂರಿನಲ್ಲಿ 2ನೇ ವಿಶ್ವ ಹೂಡಿಕೆದಾತರ ಸಮಾವೇಶವನ್ನು ನಡೆಸಲಾಗುತ್ತಿದೆ. ಹೂಡಿಕೆದಾರರಿಗೆಂದು 1 ಲಕ್ಷ ಎಕರೆ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಗುರುತಿಸಲಾಗಿದ್ದು ಈಗಾಗಲೇ 40 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿ 'ಭೂ ಬ್ಯಾಂಕಿ'ಗೆ ಜಮಾ ಮಾಡಲಾಗಿದೆ. ಸರ್ಕಾರದ ಈ ಕ್ರಮ ಪಾರದರ್ಶಕವಾಗಿಲ್ಲ. ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ರೈತರಿಂದ ಸ್ವಾಧೀನ ಪಡಿಸಿ ರಿಯಲ್ ಎಸ್ಟೇಟ್ ದಂಧೆಕೋರರಿಗೆ ನೀಡುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಕೈಗಾರೀಕರಣ ಆಗುವುದು ಅಗತ್ಯವಿದೆ. ಹೆಚ್ಚೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಕೈಗಾರೀಕರಣ ಆಗಬೇಕಾಗಿದೆ. ಆದರೆ ಕೈಗಾರಿಕೆಗಳಿಗೆ ರೈತರು ಕಷ್ಟ ಪಟ್ಟು ಅಭಿವೃದ್ಧಿ ಪಡಿಸಿದ ಕೃಷಿ ಭೂಮಿಯನ್ನು ನೀಡುವ ಅಗತ್ಯವಿಲ್ಲ. ನೀರಾವರಿ ಪ್ರದೇಶದ ಭೂಮಿಯನ್ನು ಕೈಗಾರಿಕೆಗಳಿಗೆ ಕೊಡಬಾರದು. ಸರ್ಕಾರದ ವಶದಲ್ಲಿರುವ ಬಂಜರು ಭೂಮಿಯನ್ನು ಕೈಗಾರಿಕೆಗಳಿಗೆ ಒದಗಿಸಬೇಕು. ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಅನಿವಾರ್ಯವಾದರೆ ರೈತರ ಒಪ್ಪಿಗೆ ಪಡೆದು, ಗರಿಷ್ಟ ಪರಿಹಾರ ನೀಡಿ, ಮುಂದೆ ಅಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳ ಲಾಭದಲ್ಲಿ ಒಂದು ಭಾಗವನ್ನು ಭೂಮಿಯನ್ನು ಕಳೆದುಕೊಂಡ ರೈತರ ಕುಟುಂಬಗಳಿಗೆ ನೀಡುವ ಷರತ್ತಿನೊಂದಿಗೆ ರೈತರ ಭೂಮಿಯನ್ನು ಪಡೆಯಬಹುದು. ರೈತರು ನೀಡಿದ ಭೂಮಿಯಲ್ಲಿ ಗೇಣಿದಾರರಾಗಿ ಹಾಗೂ ಕೂಲಿಕಾರರಾಗಿ ದುಡಿಯುತ್ತಿದ್ದವರಿಗೂ, ಸರ್ಕಾರಿ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದವರಿಗೂ ಸೂಕ್ತ ಪರಿಹಾರ ನೀಡಬೇಕು. ಈ ಯಾವುದೇ ಕ್ರಮಗಳನ್ನು ಕೈಗೊಳ್ಳದೆ ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಂಡು ಕಂಪನಿಗಳಿಗೆ ಹಸ್ತಾಂತರಿಸುವುದನ್ನು ಬಲವಾಗಿ ವಿರೋಧಿಸಬೇಕಾಗಿದೆ.

ರಾಜ್ಯ ಸರ್ಕಾರ ರೈತರ ಭೂಮಿಯನ್ನು ಕಂಪೆನಿಗಳಿಗೆ ಹಸ್ತಾಂತರಿಸಲು ಹೊರಟಿರುವುದು ಅದರ ಉದಾರೀಕರಣದ ನೀತಿಗಳ ಕಾರಣದಿಂದ ಎಂಬುದನ್ನು ಮರೆಯುವಂತಿಲ್ಲ. ಕಂಪೆನಿಗಳ ಅನುಕೂಲಕ್ಕಾಗಿ ಸರ್ಕಾರ ರಾಜ್ಯ ಭೂ ಸುಧಾರಣೆಗಳ ಕಾಯ್ದೆ 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಹೊರಟಿದೆ. ಈ ತಿದ್ದುಪಡಿಗಳನ್ನು ರಾಜ್ಯ ವಿಧಾನಸಭೆ ಅನುಮೋದಿಸಿದರೆ "ಬೇಸಾಯ" ಎಂಬ ಪರಿಭಾಷೆಯ ವ್ಯಾಪ್ತಿಗೆ ಬೇಸಾಯ ಆಧಾರಿತ ಕೈಗಾರಿಕೆಗಳನ್ನೂ ಸೇರಿಸಲಾಗುವುದು ಮಾತ್ರವಲ್ಲ ರೈತರ ಕೃಷಿ ಭೂಮಿಯನ್ನು ದೀರ್ಘಾವಧಿ ಗೇಣಿ ಆಧಾರದ ಮೇಲೆ ಕೃಷಿ ವಾಣಿಜ್ಯದಲ್ಲಿ ತೊಡಗಿರುವ ಕಂಪೆನಿಗಳಿಗೆ ನೀಡಲು ಅವಕಾಶ ದೊರೆಯಲಿದೆ. ಇದರಿಂದಾಗಿ ಕರ್ನಾಟಕದಲ್ಲಿ ಕಂಪನಿ ಬೇಸಾಯ ಆರಂಭವಾಗಲಿದೆ. ಮುಂದೆ ರೈತರೇ ತಮ್ಮ ಭೂಮಿಯಲ್ಲಿ ಕಂಪೆನಿಯ ಕೂಲಿ ಆಳುಗಳಾಗಿ ಕೆಲಸ ಮಾಡಬೇಕಾಗುತ್ತದೆ. ಕೃಷಿಯ ಕಂಪೆನೀಕರಣದಿಂದ ಕೃಷಿಯು ತೀವ್ರ ಯಾಂತ್ರೀಕರಣಕ್ಕೆ ಒಳಗಾಗಲಿದ್ದು ರೈತರಿಗಾಗಲಿ, ಕೃಷಿ ಕೂಲಿಕಾರರಿಗಾಗಲಿ ಕೆಲಸದ ಅವಕಾಶಗಳನ್ನು ಸಹ ಒದಗಿಸಲಾರದು. ಆದ್ದರಿಂದ ಭೂ ಸುಧಾರಣೆಗಳ ಕಾಯ್ದೆಯನ್ನು ಕಂಪೆನಿಗಳ ಪರವಾಗಿ ತಿದ್ದುಪಡಿಮಾಡುವ ಸರ್ಕಾರದ ಉದ್ದೇಶವನ್ನು ಬಲವಾಗಿ ವಿರೋಧಿಸಿ ಹಿಮ್ಮೆಟ್ಟಿಸಬೇಕಾಗಿದೆ.

ರಾಜ್ಯದ ಕೃಷಿ ಹಾಗೂ ಕೃಷಿಕರ ಮೇಲೆ ಗಂಭೀರ ಪರಿಣಾಮ ಬೀರಲಿರುವ ಈ ಪ್ರಶ್ನೆಗಳ ಬಗ್ಗೆ ಬೆಂಗಳೂರಿನಲ್ಲಿ "ಮಹಾ ಧರಣಿ"ಯನ್ನು ನಡೆಸಿ ರೈತ, ಕೂಲಿಕಾರರ ಸಂಘಗಳು ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ್ದವು. ಆದರೆ ಮನವಿ ಸ್ವೀಕರಿಸಿ ಸಹಾನುಭೂತಿ ಹೇಳಿದ ಸರಕಾರ ಜನತೆಯ ಆಗ್ರಹವನ್ನು ನಿರ್ಲಕ್ಷಿಸಿದೆ. ರಾಜ್ಯದ ಜನತೆಯ ಹಿತಗಳಿಗಿಂತ ಬಂಡವಾಳಗಾರರ ಹಿತವೇ ಮುಖ್ಯವೆಂದು ಈ ಮೂಲಕ ಘೋಷಿಸಿದೆ. ಇದು ಅಕ್ಷಮ್ಯ. ಆದ್ದರಿಂದ ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳು, ವಿಶೇಷವಾಗಿ ದುಡಿಯುವ ಜನತೆ ಸರಕಾರದ ಧಾಳಿಯ ವಿರುದ್ಧ ಪ್ರಬಲ ಪ್ರತಿರೋಧ ಒಡ್ಡಬೇಕು.

ತಪ್ಪದ ಕಿತ್ತಾಟ–ಕಾಟ

'ನಾವೀಗ ಎಲ್ಲರೂ ಒಂದಾಗಿದ್ದೇವೆ, ಏನೇ ಬರಲಿ ಒಗ್ಗಟ್ಟಾಗಿ ಎದುರಿಸುತ್ತೇವೆ'ಎಂದು ಹೇಳಿದವರ್ಯಾರೂ ಸದ್ಯ ಒಬ್ಬರ ಮುಖ ಒಬ್ಬರು ನೋಡುವ ಸ್ಥಿತಿಯಲ್ಲಿಲ್ಲ. ಸಿಬಿಐ ನ ಕುಣಿಕೆಯಿಂದ ತಪ್ಪಿಸಿಕೊಳ್ಳುವುದು ಹೇಗೆಂದು ಡಾ.ಯಡ್ಯೂರಪ್ಪ ಬಿಲ ತೋಡುತ್ತಿದ್ದರೆ, ವಿರೋಧಿ ಬಣದ ಅನಂತ್ಕುಮಾರ್ ,ಈಶ್ವರಪ್ಪ,ಸದಾನಂದಗೌಡ ನವ ಯೌವ್ವನ ಪಡೆದವರಂತೆ ಅತ್ಯಂತ ಹುರುಪಿನಿಂದ 'ಪಕ್ಷ' ಕಟ್ಟಲು ಓಡಾಡುತ್ತಿದ್ದಾರೆ!. ಯಡ್ಯೂರಪ್ಪನವರ ಸ್ಥಿತಿಯಲ್ಲಿ ತಾನೇನಾದರೂ ಇದ್ದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ ಎಂಬ ಈಶ್ವರಪ್ಪನವರ ಮಾತುಗಳು ಅನುಕಂಪವಾಗಿರದೇ ಆತ್ಮಹತ್ಯೆಗೆ ಪ್ರಚೋದಿಸುವಂತಿವೆ ಎಂದು ಯಡೂರಪ್ಪ ಪ್ರತಿಕ್ರಿಯಿಸುವಷ್ಟು ಹಂತ ತಲುಪಿವೆ. ಈಗಲೂ ದಿನ, ದಿನವೂ ಒಂದಿಲ್ಲೊಂದು ಅಕ್ರಮ, ಹಗರಣಗಳ ಹೊಸ ಮೊಕದ್ದಮೆಗಳು ಯಡ್ಯೂರಪ್ಪನವರ ಮೇಲೆ ಲೋಕಾಯುಕ್ತದಲ್ಲಿ ದಾಖಲಾಗುತ್ತಿವೆ!. 'ಒಂದಾಗಿ ನಿಂತ' ಪ್ರತಿಯೊಬ್ಬರ ನಡೆ, ನುಡಿಗಳು ಅವರ ನಡುವಿನ ಅಂತರವನ್ನು ಇನ್ನಷ್ಟು, ಇನ್ನಷ್ಟೂ ದೂರಗೊಳಿಸುತ್ತಿವೆ.



ಸ್ವಾರ್ಥಿಗಳ ಸಂಗಮದಲ್ಲಿ

'ಇನ್ನು ನನ್ನ ದಾರಿ ನನಗೆ' ಎಂದೇ ಹೇಳಿದ ಯಡ್ಯೂರಪ್ಪ ಮಲ್ಲೇಶ್ವರದಲ್ಲಿ ಹೊಸ ಕಛೇರಿಯನ್ನು ಆರಂಭಿಸಿದ್ದಾರೆ. ಜನ ಸಂಪರ್ಕಕ್ಕೆ ಇದು ಬೇಕು' ಎಂದು ಹೇಳುವಾಗಲೇ ಅಧಿಕೃತ ಕಛೇರಿಯಲ್ಲಿ ಕುಳಿತರೆ ಮುಜುಗರವಾಗುವುದೆಂದು ಹೇಳಿದ್ದರಲ್ಲ... ಅದೀಗ ಬಹುತೇಕ ಅವರ ನಿತ್ಯದ ಸ್ವಂತದ ಕಛೇರಿಯಾಗಿ, ಪ್ರತ್ಯೇಕ ಅಸ್ತಿತ್ವ ಕಂಡುಕೊಳ್ಳುತ್ತಿದೆ. ಅಲ್ಲಿ ವಾಜಪೇಯಿ ಬಿಟ್ಟರೆ ಬೇರಾವ ಬಿಜೆಪಿ ,ಆರೆಸ್ಸೆಸ್ ನಾಯಕರ ಫೋಟೋಗಳಿಲ್ಲ. ಬದಲಾಗಿ ಸೋನಿಯಾ ಜೊತೆಗಿರುವ ಫೋಟೋ ಮೇಲೇರಿದೆ! ಪಕ್ಷದ ರಾಜ್ಯ ನಾಯಕರು, ಹೈಕಮಾಂಡ್‌ನ ಕೆಲ ಪ್ರಮುಖರ ಮುಖ ನಿವಾಳಿಸಿಯಾಗಿದೆ. ಸದ್ಯ ಬಾಂಬೆಯಲ್ಲಿ ನಡೆಯುತ್ತಿರುವ ಕಾರ್ಯಕಾರಿಣಿ ಸಭೆಗೆ ಬಹಿಷ್ಕಾರ ಹಾಕಿ ಮೊದಲ ಬಾರಿ ಗೈರು ಹಾಜರಾಗಿದ್ದಾರೆ ಯಡ್ಯೂರಪ್ಪ. ಕಳೆದ ವಾರ ದಿಢೀರನೇ ಹಾರಿ ಬಂದ ಅರುಣ್ ಜೇಟ್ಲಿ, ಪ್ರಧಾನರು ತಮಗೆ ಏನಾದರೂ ನೆರವು ಒದಗಿಸಿಯಾರು ಎಂಬ ಕಿಂಚಿತ್ತು ನಿರೀಕ್ಷೆಯನ್ನೇ ಬಿಟ್ಟಂತಿದೆ. ಹೀಗಾಗಿ ಯಡ್ಯೂರಪ್ಪ ಬಿಜೆಪಿಯೊಳಗಿದ್ದೂ ಇಲ್ಲದ ಸ್ಥಿತಿ. ಒತ್ತಡದ ತಂತ್ರವೀಗ ಹೊರ ನಡೆವ ಸೂಚನೆಗೆ ಇಂಬು ನೀಡುತ್ತಿದೆ. ಆದರೆ ನೀತಿ, ನಿಯತ್ತು ಎಲ್ಲಾ ಬಿಟ್ಟ ಬಿಜೆಪಿಯಲ್ಲಿ ಯಾರು, ಯಾವಾಗ ತಿರುಗು–ಮುರುಗು ಆಗಲಾರರು ಎಂದು ಹೇಳಲಾಗುವುದಿಲ್ಲ.


ಗಾಳ ಹಾಕಿ ಕಾಯುತ್ತಿರುವವರು!

ಈ ಸ್ಥಿತಿಯಲ್ಲಿ ಯಡ್ಯೂರಪ್ಪನವರ ಮುಂದಿನ ಹೆಜ್ಜೆ ಏನೆಂಬುದು ಇನ್ನೂ ಸ್ಪಷ್ಟವಾಗಬೇಕಿದೆ. ಈ ಸನ್ನಿವೇಶವನ್ನು ಬಳಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನ ಇಲ್ಲದಿಲ್ಲ. ಸಿಬಿಐ ಬಲೆಯಲ್ಲಿರುವ ಯಡ್ಯೂರಪ್ಪ, ಇನ್ನೊಂದೆಡೆ ಜನಾರ್ಧನರೆಡ್ಡಿ ಇಬ್ಬರನ್ನೂ ಬಳಸಿ ಸರಕಾರ ಪತನಗೊಳ್ಳುವಂತೆ ಮಾಡುವ ಸುದ್ದಿ ಈಗೀಗ ಹೆಚ್ಚು ಚಾಲನೆ ಪಡೆದುಕೊಳ್ಳುತ್ತಿದೆ. ಅದರರ್ಥ ಇವರನ್ನು ಪ್ರಾದೇಶಿಕ ಶಕ್ತಿಯಾಗಿ ಉಳಿಸುವ ಯಾವ ಇರಾದೆಯೂ ಇಲ್ಲ. ಹೀಗೆ ಕೇಂದ್ರದ ಕಾಂಗ್ರೆಸ್ ಪಕ್ಷ , ಅದರ ಸರಕಾರವು ಅಕ್ರಮ, ಹಗರಣಗಳನ್ನು ಮಟ್ಟ ಹಾಕಿ ದೇಶದ ಹಿತಾಸಕ್ತಿ ಕಾಯುವ ಬದಲು ಸಿಬಿಐಯನ್ನು ಸಂಕುಚಿತ ಸ್ವಹಿತಾಸಕ್ತಿಗೆ ಬಳಸುವ ರಾಜಕೀಯ ದುಷ್ಟತನ ತೋರಲಿದೆ. ಅದಕ್ಕೆ ಜನರ ಪ್ರಶ್ನೆಗಳಾಗಲಿ, ಬಿಜೆಪಿಯ ವೈಫಲ್ಯಗಳಾಗಲೀ ಪ್ರಶ್ನೆಗಳಲ್ಲ. ಇಂತಹ ಸನ್ನಿವೇಶದಲ್ಲಿ ಅದು ಸಾರಿರುವ ಜನಾಂದೋಲನವೆಂಬುದು 'ರೋಡ್ ಶೋ' ಅಲ್ಲದೇ ಇನ್ನೇನು?.

ಇದು ಕೇವಲ ಅಪಘಾತವಲ್ಲ, ಅಪರಾಧ

ಮೊನ್ನೆ ಮಧ್ಯ ರಾತ್ರಿ ಹಂಪಿ ಎಕ್ಸ್‌ಪ್ರೆಸ್ ಆಂಧ್ರ ಪ್ರದೇಶದಲ್ಲಿ ಚಲಿಸುತ್ತಿರುವಾಗ ಆದ ಅಪಘಾತದಲ್ಲಿ

–ಪುಟ 4 ಕ್ಕೆ



ಕೃಪೆ : ಧಿ ಹಿಂದೂ

ಹಾಸನ : ಬಗರ್ ಹುಕುಂ ಸಾಗುವಳಿದಾರರ ಯಶಸ್ವಿ ಸಮಾವೇಶ

ಹಾಸನದಲ್ಲಿ ಮೊದಲಬಾರಿಗೆ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಬಗರ್‌ಹುಕುಂ ಸಾಗುವಳಿದಾರರ ಸಮಾವೇಶದ ಮೂಲಕ ಚಾಲನೆ ಸಿಕ್ಕಿದೆ. ಮೇ 15 ರಂದು ಹಾಸನದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬಗರ್ ಹುಕುಂ ಸಾಗುವಳಿದಾರರ ಹಾಸನ ತಾಲ್ಲೂಕು ಸಮಾವೇಶವನ್ನು ಸಂಘಟಿಸಲಾಗಿತ್ತು. ಈ ಸಮಾವೇಶ ಉದ್ಘಾಟನೆ ಮಾಡಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ಮಾರುತಿ ಮಾನ್ಪಡೆಯವರು




ಕಂಪನಿ ಕೃಷಿಗಾಗಿ, ಬೃಹತ್ ಕಂಪನಿಗಳು ಭೂಮಿ ಪಡೆಯಲು ಅನುವಾಗುವಂತೆ ಮೂಲ ಭೂ ಸುಧಾರಣಾ ಅಧಿನಿಯಮ 1961ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿರುವ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾದ ವಿಧೇಯಕವನ್ನು ಕೂಡಲೇ ವಾಪಾಸ್ಸು ಪಡೆಯಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಹಲವು ವರ್ಷಗಳಿಂದ ಸಾಗುವಳಿ ನಡೆಸುತ್ತಿರುವ ರೈತರು ಆ ಭೂಮಿಗೆ ಹಕ್ಕು ಪತ್ರವನ್ನು ನೀಡಬೇಕು. ಹಾಸನ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೂಡಲೆ ರಚಿಸಿ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂದು ಒತ್ತಾಯಿಸಿ ಸಮಾವೇಶದ ಬಳಿಯಿಂದ ಜಿಲ್ಲಾಧಿಕಾರಿ ಕಛೇರಿಯವರೆಗೆ ರೈತರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಅರ್ಜಿಗಳೊಂದಿಗೆ ಮನವಿಪತ್ರವನ್ನು ಸಲ್ಲಿಸಲಾಯಿತು.

ಸಮಾವೇಶದಲ್ಲಿ 400 ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು. ಹಾಸನ ತಾಲ್ಲೂಕಿನ ಬಗರ್‌ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಸಂಚಾಲನಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಸಂಚಾಲಕರಾಗಿ ಎಚ್.ಆರ್.ನವೀನ್‌ಕುಮಾರ್ ಸಹಸಂಚಾಲಕರಾಗಿ ಗೊನ್ನೇಗೌಡ, ಸ್ವಣ್ಣಿಂಗಯ್ಯ ರವರನ್ನು ಮತ್ತು ಒಟ್ಟು 25 ಸದಸ್ಯರುಳ್ಳ ಸಮಿತಿಯನ್ನು ಆಯ್ಕೆಮಾಡಲಾಯಿತು.

– ಎಚ್.ಆರ್.ನವೀನ್‌ಕುಮಾರ್

ಅಗಲಿದ ಸಂಗಾತಿ ರಸಿನೇಶ್ ರವರಿಗೆ ಶ್ರದ್ಧಾಂಜಲಿ



ಯುವ ಸಂಗಾತಿ ರಸಿನೇಶ್ (25) ರವರು ದಿ: 30.04.2012ರಂದು ಅಪಘಾತಕ್ಕೀಡಾಗಿ ಮರಣ ಹೊಂದಿದರು. ಮೂಲತಃ ಹೈದರಾಬಾದ್‌ನವರಾಗಿದ್ದ ಅವರು ಅಲ್ಲಿ ಇಂಜಿನೀಯರಿಂಗ್ ವ್ಯಾಸಂಗ ಮಾಡುವಾಗಲೇ ಸ್ವತಂತ್ರ ತಂತ್ರಾಂಶದ ತತ್ವ ಮತ್ತು ತಂತ್ರಜ್ಞಾನದೆಡೆಗೆ ಆಕರ್ಷಿತರಾಗಿ ಸ್ವತಂತ್ರ ತಂತ್ರಾಂಶ ಆಂದೋಲನದಲ್ಲಿ ತೊಡಗಿಸಿಕೊಂಡಿದ್ದರು. ಬೆಂಗಳೂರಿನ ವಿಪ್ರೋ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ಮೇಲೆ ಸ್ವತಂತ್ರ ತಂತ್ರಾಂಶ ಆಂದೋಲನ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸ್ವತಂತ್ರ ತಂತ್ರಾಂಶ ಆಂದೋಲನ ಸ್ಥಾಪಿತಗೊಂಡ ಆರಂಭಿಕ ದಿನಗಳಲ್ಲಿ ಅದರ ಚಟುವಟಿಕೆಗಳನ್ನು ಬೆಂಗಳೂರಿನ ವಿವಿಧ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ವಿಸ್ತರಿಸಲು, ಇಂಜಿನೀಯರಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಾ ಸಂಘಟನಾ ಚಟುವಟಿಕೆಗಳು ಬೆಳೆಯುವಲ್ಲಿ ಅತೀವವಾಗಿ ಶ್ರಮಿಸಿದ್ದು ಸಂಘಟನೆಗೆ ಬುನಾದಿ ಹಾಕಿದ್ದರು.

ನಂತರ ಕಳೆದೆರಡು ವರ್ಷಗಳ ಕಾಲ ಲಂಡನ್‌ನಲ್ಲಿದ್ದ ಅವರು ತಂತ್ರಾಂಶ ಆಂದೋಲನ ಚಟುವಟಿಕೆಗೆ ಬೆಂಗಳೂರಿನಲ್ಲಿ ಹೆಚ್ಚಿನ ಸಮಯ ನೀಡಲೋಸುಗ ಲಂಡನ್ ತ್ಯಜಿಸಿ ಬೆಂಗಳೂರಿನಲ್ಲಿ ಬಂದು ನೆಲೆಸಿದ್ದರು. ವಿದ್ಯಾರ್ಥಿಗಳ ನಡುವೆ ಜನಪ್ರಿಯರಾಗಿದ್ದರಲ್ಲದೆ, ಸಾಮಾಜಿಕ ಕಳಕಳಿಯಲ್ಲೂ ಮುಂದಿದ್ದರು. 3 ತಿಂಗಳ ಹಿಂದೆಯಷ್ಟೆ ಮದುವೆಯಾಗಿದ್ದ ಕ್ರಿಯಾಶೀಲ ಸಂಗಾತಿಯ ಮರಣ ಅವರ ಕುಟುಂಬಕ್ಕೆ ತುಂಬಲಾರದ ನಷ್ಟವಷ್ಟೆ ಅಲ್ಲ, ಕರ್ನಾಟಕದ ಸ್ವತಂತ್ರ ತಂತ್ರಾಂಶ ಚಳುವಳಿಗೆ ಬಲು ದೊಡ್ಡ ಹಿನ್ನಡೆಯೂ ಕೂಡ.

ಸಂಗಾತಿ ರಸಿನೇಶ್‌ರವರಿಗೆ ದಿ: 20.05.2012ರಂದು ಸೂರಿ ಭವನದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಸಭೆಯಲ್ಲಿ ಹಿರಿಯ ಸಂಗಾತಿಗಳಾದ ವಿಜಕ್, ಪ್ರಸನ್ನಕುಮಾರ್, ಪ್ರಕಾಶ್, ಮಾರುತಿ ಮಾನ್ಪಡೆ ಮತ್ತು ಇತರರು ಭಾಗವಹಿಸಿದ್ದರು.

ಮೇ 28 : ವಿಠಲ ಮಲೆಕುಡಿಯ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ

ವಿಠ್ಠಲ್ ಮಲೆ ಕುಡಿಯ ಮತ್ತು ಅವರ ತಂದೆಯನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಹಾಗೂ ಅವರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ಹಿಂಪಡೆಯಬೇಕೆಂದು "ಸಂರಕ್ಷಣ ಸಮಿತಿ"ಯನ್ನು ರಚಿಸಲಾಗಿದ್ದು, ಈ ಸಮಿತಿಯ ನೇತೃತ್ವದಲ್ಲಿ ರಾಜ್ಯಸರ್ಕಾರವನ್ನು ಜನ ಬೆಂಬಲದೊಂದಿಗೆ ಒತ್ತಾಯಿಸಲಾಗುತ್ತಿದ್ದು ಮೇ 28, 2012 ರಂದು ಟೌನ್‌ಹಾಲ್ ಎದುರು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಯಲ್ಲಿ ಆದಿವಾಸಿ ಹಕ್ಕುಗಳ ರಾಷ್ಟ್ರೀಯ ವೇದಿಕೆ ಮುಖಂಡರು ಹಾಗೂ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಬೃಂದಾ ಕಾರಟ್ ರವರು, ಆದಿವಾಸಿ ಹಕ್ಕುಗಳ ರಾಷ್ಟ್ರೀಯ ವೇದಿಕೆಯ ಅಧ್ಯಕ್ಷರು ಹಾಗೂ ಸಂಸತ್ ಸದಸ್ಯರಾದ ಬಾಜೂಬಾನ್ ರೀಯಾನ್ ರವರು ಹಾಗೂ ಪ್ರಗತಿಪರ ಚಿಂತಕರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI), ಭಾರತ ವಿದ್ಯಾರ್ಥಿ ಫೆಡರೇಷನ್(SFI), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIJMS) ಮುಂತಾದ ಪ್ರಗತಿಪರ ಸಂಘಟನೆಗಳು ಪಾಲುಗೊಳ್ಳಲಿದೆ. ಇಂತಹ ಮಾನವ ಹಕ್ಕುಗಳ ಉಳಿವಿಗಾಗಿ ನಡೆಯುವ ಹಾಗೂ ಆದಿವಾಸಿಗಳ ರಕ್ಷಣೆಗಾಗಿ ನಡೆಯುತ್ತಿರುವ ಈ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಮನವಿ.

ತಪ್ಪದ ಕಿತ್ತಾಟ–ಕಾಟ

ಪುಟ 3 ರಿಂದ

ಸುಮಾರು 25 ಜನರು ಪ್ರಾಣ ಕಳೆದು ಕೊಂಡರು. ಎರಡಿನಂತೆ ಸತ್ತವರಿಗೆ ಇಂತಿಷ್ಟು ಪರಿಹಾರ ನೀಡುವುದಾಗಿ ಕೇಂದ್ರ ರಾಜ್ಯ ಸರಕಾರಗಳು ಘೋಷಿಸಿದವು. ಅಲ್ಲಿಗೆ ಅವರ ಪಾಲಿನ ಕರ್ತವ್ಯ ಮುಗಿದಂತೆಯೆಂದೇ ಕೈ ತೊಳೆದುಕೊಳ್ಳುವುದು, ಒಂದು ವಿಚಾರಣಾ ಸಮಿತಿ ನೇಮಿಸುವುದು, ನಂತರ ಮರೆಯುವುದು ಯಥಾ ರೂಢಿಯಾಗಿ ಬಿಟ್ಟಿದೆ. ಇತ್ತೀಚಿನ ವರುಷಗಳಲ್ಲಂತೂ ರೈಲ್ವೆ ಅಪಘಾತಗಳು ಗಣನೀಯವಾಗಿ ಹೆಚ್ಚುತ್ತಲೇ ಇವೆ. ಇದು ಉದಾರೀಕರಣದ ದಿನಗಳಲ್ಲಿ ಎಂಬುದು ಗಮನಾರ್ಹ. ಪ್ರತಿ ಘಟನೆಗಳ ಕುರಿತ ವಿಚಾರಣಾ ವರದಿಯನ್ನು ಕೇಂದ್ರ ಸರಕಾರ, ಇಲಾಖೆ ನಿರ್ಲಕ್ಷಿಸುವ ಪರಿ ನೋಡಿದರೆ ಅದರತ್ತ ಕಣ್ಣೆತ್ತಿ ನೋಡುವ ಗೋಜಿಗೂ ಹೋಗಿಲ್ಲದಿರುವುದು ಸ್ಪಷ್ಟವಾಗುತ್ತದೆ. ಅವಧಿ ಮುಗಿದರೂ ಹಳಿಗಳ ನವೀಕರಣ ಇಲ್ಲದಿರುವುದು, ರೈಲ್ವೆ ನಿರ್ವಹಣೆ, ಉಸ್ತುವಾರಿ ಇತ್ಯಾದಿ ಆಯಕಟ್ಟಿನ ಕೆಲಸಗಳಿಗೆ ನೌಕರರ ತೀವ್ರ ಕೊರತೆ ಮತ್ತು ಕೆಲಸದ ವಿಪರೀತ ಒತ್ತಡ ಇತ್ಯಾದಿ ಪ್ರಮುಖ ಕಾರಣವಿದೆ. ಇವೆಲ್ಲಾ ಗೊತ್ತಿದ್ದೂ ನಿರ್ಲಕ್ಷಿಸಲಾಗುತ್ತಿದೆ, ಜನರನ್ನು ಅಪಾಯದಂಚಲ್ಲೇ ನಿಲ್ಲಿಸಿದೆ.

ಸಾವಿನ ರುವಾರಿಗಳು

ಮೊನ್ನಿನ ಹಂಪಿ ಎಕ್ಸ್‌ಪ್ರೆಸ್‌ನಲ್ಲಿ ಸತ್ತವರೆಲ್ಲಾ ಬಳ್ಳಾರಿ, ಕೊಪ್ಪಳ ಜಿಲ್ಲೆಯವರು. ಮುಖ್ಯವಾಗಿ ಎಲ್ಲರೂ ಕೂಲಿ ಕೆಲಸ ಹುಡುಕಿಕೊಂಡು ಹೊರಟವರು. ಹೀಗಾಗಿ ಇಡೀ ಕುಟುಂಬಗಳೇ ಪ್ರಾಣ ಕಳೆದುಕೊಂಡು ಬಿಟ್ಟಿವೆ, ಮಕ್ಕಳೂ ಅಸುನೀಗಿವೆ. ನಾವಿಲ್ಲಿ ಯೋಚಿಸಬೇಕಾದ್ದು ಇವರೆಲ್ಲಾ ಬರ ಪೀಡಿತ ಪ್ರದೇಶದವರು ಎಂಬುದು. ಒಂದು ವೇಳೆ ಇವರಿಗೆಲ್ಲಾ ಅಲ್ಲಿ ಕೂಲಿ ಕೆಲಸ ಸಿಕ್ಕಿದ್ದಲ್ಲಿ ಹೀಗೆ ಕೂಸು ಕುನ್ನಿಗಳನ್ನು ಕಟ್ಟಿಕೊಂಡು ಕಾಣದೂರಿಗೆ ವಲಸೆ ಹೋಗುವ, ಹೀಗೆ ಸಾಯುವ ಪ್ರಮೇಯವೇ ಇರುತ್ತಿರಲಿಲ್ಲ. ಅಂದರೆ ಸರಕಾರ ಬರದ ಕಾಮಗಾರಿ ಆರಂಭಿಸಲೇ ಇಲ್ಲ, ಸಾವಿರಾರು ಕೋಟಿ ರೂಪಾಯಿಗಳ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನಗೊಳಿಸಿ ಉದ್ಯೋಗ ನೀಡಲಿಲ್ಲ. ಹೀಗಾಗಿ ಈ ಎಲ್ಲಾ ಸಾವಿನ ಹೊಣೆಯನ್ನು ರಾಜ್ಯ–ಕೇಂದ್ರ ಸರಕಾರಗಳೇ ಹೊತ್ತುಕೊಳ್ಳಬೇಕು. ಅಪರಾಧಿಗಳೇ ಇವು.

ಆದರೆ ದುರಂತವೆಂದರೆ ಬಿಜೆಪಿ, ಕಾಂಗ್ರೆಸ್ ಸರಕಾರಗಳು ಗ್ರಾಮೀಣ ಜನರನ್ನು ಒಕ್ಕಲೆಬ್ಬಿಸುತ್ತಿವೆ, ವಿಶ್ವ ಬಂಡವಾಳವನ್ನು ಹೂಡಿ ನೆಲಕ್ಕೆ ಕೈಯೂರಿ ಜೀವದಾಸರೆ ಪಡೆದವರನ್ನು ದಿಕ್ಕೆಡಿಗಳನ್ನಾಗಿಸಿ ಓಡಿಸಲಾಗುತ್ತಿದೆ. ಇವಕ್ಕೆ ಬೇಕಾಗಿರುವುದು ಬಂಡವಾಳ, ಬಡಜನರ ಭೂಮಿ, ಹೊರತು ಜನರ ಜೀವನ, ಬದುಕು–ಪ್ರಾಣವಲ್ಲ. ಬಂಡವಾಳ ಹರಿದು ಬಂದರೆ ಪರಿಹಾರ ಕೊಡಬಹುದಲ್ಲ ಎಂಬ ಅಭಿವೃದ್ಧಿ ಹರಿಕಾರರ ಚಿಂತನೆಯೇ ಅಮಾನವಿಯದ್ದು. ಇಂತಹವರಲ್ಲಿ ಮಾನ, ಮಾನವೀಯತೆ ಹುಡುಕುವುದಾದರೂ ಹೇಗೆ ?

ಸಹ ಪಂಕ್ತಿ ಬೋಜನ-ಅಂತರ್ಜಾತೀಯ ವಿವಾಹಕ್ಕೆ ವಿರೋಧ

ಪೇಜಾವರ ಶ್ರೀ ಗಳ ಧೋರಣೆಗೆ ಸಿಪಿಐ(ಎಂ) ಖಂಡನೆ

"ಅನ್ಯ ಜಾತಿಯವರಲ್ಲಿ ಮಧ್ಯ, ಮಾಂಸ ಆಹಾರ ಪದ್ಧತಿ ಇರುತ್ತದೆ, ಸಹ ಪಂಕ್ತಿಯಲ್ಲಿ ಅಂತಹವರೊಡನೆ ಭೋಜನ ಮಾಡಿದರೆ ಸ್ನೇಹ ಬೆಳೆದು ಸಾತ್ವಿಕ ಆಹಾರ ಸೇವಿಸುವವರು ಮಾಂಸ ಸೇವನೆಗೆ ಇಳಿಯಬಹುದು ಹೀಗಾಗಿ ನಾನು ಸಹಪಂಕ್ತಿ ಭೋಜನವನ್ನು ವಿರೋಧಿಸುತ್ತೇನೆ" ಎಂದಿರುವ, ಅಂತರ್ಜಾತೀಯ ವಿವಾಹಗಳಿಗೆ ವಿರೋಧ ವ್ಯಕ್ತಪಡಿಸಿರುವ ಉಡುಪಿಯ ಪೇಜಾವರ .ಮಠದ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರ ಹೇಳಿಕೆಯನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅತ್ಯಂತ ತೀವ್ರವಾಗಿ ಖಂಡಿಸುತ್ತದೆ.

ಈ ಹೇಳಿಕೆ ಮತ್ತು ಅದನ್ನು ಸಮರ್ಥಿಸಿಕೊಳ್ಳುತ್ತಿರುವ ರೀತಿ ಅತ್ಯಂತ ಮಾನವ ವಿರೋಧಿಯಾಗಿದೆ. ಅಮಾನವೀಯ, ಸಂವಿಧಾನ ವಿರೋಧಿ ಪಂಕ್ತಿಭೇದವನ್ನು ಸಮರ್ಥಿಸಿಕೊಳ್ಳುವ, ಜಾತಿಭೇಧದ ವಿಷ ಬೀಜವನ್ನು ಬಿತ್ತಿ ಬೆಳೆಸುವ, ಇಡೀ ಸಮಾಜವನ್ನೇ ವಿಷಮಯಗೊಳಿಸುವ ಕೃತ್ಯವಿದಾಗಿದೆಯೆಂದು ಖಂಡಿಸಿದೆ.

ಪೇಜಾವರರ ಇಂತಹ ಹೇಳಿಕೆ ಹೊಸದೇನಲ್ಲ. ಪಂಕ್ತಿಭೇಧದ ತೀವ್ರ ತಾರತಮ್ಯ ವ್ಯವಸ್ಥೆ ವಿರುದ್ಧ ರಾಜ್ಯದಾದ್ಯಂತ ತೀವ್ರ ಪ್ರತಿಭಟನೆಗಳು ವ್ಯಕ್ತವಾಗಿವೆ. ಸಿಪಿಐ(ಎಂ) ಪಕ್ಷವು ಪಂಕ್ತಿಬೇಧ, ಜಾತಿಭೇದ ವಿರೋಧಿಸಿ ಉಡುಪಿಯ ಅಷ್ಟ ಮಠಗಳ ಎದುರು ರಾಜ್ಯ ಮಟ್ಟದ ತೀವ್ರ, ಪ್ರತಿಭಟನೆ ನಡೆಸಿದೆ. ಇದೇ ಪೇಜಾವರರು ಹರಪನಹಳ್ಳಿಯಲ್ಲಿ ಅಂತಹುದೇ ಹೇಳಿಕೆ ನೀಡಿದ್ದಾಗಲೂ ಸಿಪಿಐ(ಎಂ) ಪ್ರತಿಭಟಿಸಿದೆ. ಸಂವಿಧಾನ ಬದ್ಧ ಹಕ್ಕಿನ ಬಗ್ಗೆ, ಸಮಾನತೆಯ ಆಶಯಗಳ ಈ ಪ್ರತಿಕ್ರಿಯೆಗಳನ್ನು ಗೌರವಿಸದೇ ಪೇಜಾವರ ಶ್ರೀಗಳು ಜಾತಿ ಅಸಮಾನತೆ, ವೈಷಮ್ಯಗಳನ್ನೇ ಎತ್ತಿ ಹಿಡಿಯುತ್ತಾ, ಅದನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿರುವುದು ಅತ್ಯಂತ ವಿಷಾದನೀಯ . ಅದೇ ಹೊತ್ತಿನಲ್ಲಿ ಹೇಳಿಕೆಗಳನ್ನು ತಿರುಚಿ, ನುಣಿಚಿಕೊಳ್ಳುವ ಪ್ರವೃತ್ತಿ ತೋರುವುದು ಹಳೆಯ ಚಾಳಿಯಾಗಿದೆ. ಇದು ಅವರು ಭಾರತದ ಸಂವಿಧಾನವನ್ನು ಗೌರವಿಸುವ ಬದಲಾಗಿ ಜಾತಿ-ವರ್ಗ-ವೈಷಮ್ಯಗಳ ಮನುಸ್ಮೃತಿಯನ್ನು ಜಾರಿಗೆ ತರುವ ಹುನ್ನಾರವಾಗಿದೆ.

ವಿವಿಧ ಜನಾಂಗಗಳಲ್ಲಿ ಶತ ಶತಮಾನಗಳಿಂದ ಇರುವ ಆಹಾರ ಪದ್ಧತಿಯನ್ನು ಅವಹೇಳನ ಮಾಡುವ ಮೂಲಕ ಉಚ್ಚ-ನೀಚವೆಂಬ ತಾರತಮ್ಯವನ್ನು ಮಾಡುವ ಕುಯುಕ್ತಿಯು ಇಂತಹ ನಿಲುವುಗಳಲ್ಲಿದೆ. ಜೊತೆಗೆ ಅಂತರ್ಜಾತೀಯ ವಿವಾಹಗಳನ್ನು ವಿರೋಧಿಸುವ ಮೂಲಕ ಗೊಡ್ಡು, ಜಾತಿ ಸಂಪ್ರದಾಯಗಳನ್ನು ರಕ್ಷಿಸುವುದು, ಆ ಮೂಲಕ ಜಾತಿ ವ್ಯವಸ್ಥೆ ಬಲಪಡಿಸುವ ಕೃತ್ಯವಾಗಿದೆ.

ಮೇ 24,2012 ರಂದು ಬೆಂಗಳೂರಿನ ಮಾಧ್ಯಮ ಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಹೇಳಿಕೆ

ಪೇಜಾವರರು ತಮ್ಮ ಹೇಳಿಕೆಗೆ ಬಸವಣ್ಣನವರನ್ನೂ ದುರ್ಬಳಕೆ ಮಾಡಿಕೊಳ್ಳಲು ಯತ್ನಿಸಿದ್ದಾರೆ. ವೈದಿಕಶಾಹಿ, ಜಾತಿ ತಾರತಮ್ಯಗಳ ವಿರುದ್ಧ ಸಮಾನತೆಯ ಆಶಯಗಳಿಗಾಗಿ ದುಡಿದ 12ನೇ ಶತಮಾನದ ಶರಣ ಚಳುವಳಿಯನ್ನೇ ತಿರುಚಿ, ಶರಣ ಪರಂಪರೆಗೆ ಮಸಿ ಬಳಿಯುವ ಪ್ರಯತ್ನ ಇದಾಗಿದೆ. ಎಲ್ಲಾ ಜಾತಿಯವರನ್ನು ಶರಣಧರ್ಮ ಒಳಗೊಂಡಿತು ಎಂಬುದನ್ನೂ ಪೇಜಾವರರು ಯಾಕೆ ಮರೆಸುತ್ತಾರೆ ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಜಾತಿ ಅಸಮಾನತೆಯ ವ್ಯವಸ್ಥೆ, ಚಾತುರ್ವರ್ಣ್ಯವನ್ನೂ ಪ್ರತಿಪಾದಿಸುವ ವೈದಿಕಶಾಹಿಯು ಅದಕ್ಕೆ ವಿರುದ್ಧವಾಗಿರುವ ಶರಣ ಪರಂಪರೆಯ ಮಠಗಳನ್ನು ತಮ್ಮೊಂದಿಗೆ ಸೆಳೆಯುವ ಸಮೀಕರಣದ ಪ್ರಯತ್ನದ ಬಗ್ಗೆ ಎಚ್ಚರದಿಂದ ಇರಬೇಕಾಗಿದೆ.

ಭಾರತದಲ್ಲಿ ಪ್ರಜಾಪ್ರಭುತ್ವ ಪೂರ್ಣವಾಗಿ ಸಾಕಾರಗೊಳ್ಳದಿರುವುದಕ್ಕೆ ಪೇಜಾವರರಂತಹ ಮಠಾಧೀಶರು ಮತ್ತು ಅಂತಹ ಮಠಗಳು ಅಡ್ಡಿಯೆಂಬುದನ್ನು ಇವರ ಹೇಳಿಕೆ ಸಾಬೀತು ಮಾಡುತ್ತಿದೆ. ಇಂತಹ ಜಾತಿಬೇಧವನ್ನು, ಮಾನವ ವಿರೋಧಿ ಮೌಲ್ಯಗಳನ್ನು ಬೆಳೆಸುವ ಮಠಗಳನ್ನು ತಿರಸ್ಕರಿಸಿ ಎಂದು ಜನತೆಗೆ ಸಿಪಿಐ(ಎಂ) ಕರೆ ನೀಡಿದೆ. ಎಲ್ಲಾ ಮಾನವ ಪ್ರೇಮಿ, ಪ್ರಗತಿಪರರು ಒಂದಾಗಿ ಕಾರ್ಯ ಪ್ರವೃತ್ತರಾಗಬೇಕಾಗಿದೆ. ಸಹ ಪಂಕ್ತಿ ಭೋಜನ ಜಾರಿಗೆ ತರಲು ಹೋರಾಟಕ್ಕೆ ಮುಂದಾಗಬೇಕಾಗಿದೆ.

ನಿಜಕ್ಕೂ ಮನುಷ್ಯತ್ವದಲ್ಲಿ ಕಾಳಜಿಯಿದ್ದರೆ, ಪೇಜಾವರರೇ ಸ್ಪಷ್ಟನೆ ನೀಡಿದಂತೆ ಪಂಕ್ತಿ ಭೋಜನಕ್ಕೆ ವಿರೋಧವಿಲ್ಲ ಎಂಬುದಕ್ಕೆ ಬದ್ಧವಾಗಿದ್ದರೆ, ಅಂತಹ ಪದ್ಧತಿ ವಿರುದ್ಧ ಅವರು ಪ್ರತಿಭಟನೆ ನಡೆಸಬೇಕು. ಉಡುಪಿ ಮಠದಲ್ಲಿ ಅದನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ಅದು ಕೇವಲ ಗೊಡ್ಡು ಹೇಳಿಕೆ ಎಂಬುದು ಜಗಜ್ಜಾಹೀರಾಗುತ್ತದೆ.

ಒಂದೊಮ್ಮೆ ಮಂಸಾಹಾರಿಗಳೊಂದಿಗೆ ಸಸ್ಯಾಹಾರಿಗಳು ಕುಳಿತು ಊಟ ಮಾಡಿದರೆ ಪರಿಣಾಮ ಬೀರುವುದಾದಲ್ಲಿ ಸಸ್ಯಹಾರಿಗಳ ಪ್ರಭಾವ ಮಾಂಸಾಹಾರಿಗಳ ಮೇಲೆ ಯಾಕೆ ಆಗುವುದಿಲ್ಲ ಎಂದು ಪೇಜಾವರರು ಸ್ಪಷ್ಟಪಡಿಸುವರೇ? ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

2. ಮಾಫಿಯಗಳಿಂದ ಅಧಿಕಾರಿಗಳ ಹತ್ಯೆ : ಆಂತಕಕಾರಿ ಬೆಳವಣಿಗೆ :-

ರಾಜ್ಯದಲ್ಲಿ ಇತ್ತೀಚೆಗೆ ಗಣಿ, ಮರಳು, ಭೂ ಮಾಫಿಯಾಗಳ ಅಕ್ರಮಗಳನ್ನು ದೃಡವಾಗಿ ವಿರೋಧಿಸಿದ ದಕ್ಷ ಅಧಿಕಾರಿಗಳನ್ನು ಬೆದರಿಸುವ, ಹತ್ಯೆಗೈಯುವ ಕೃತ್ಯಗಳು ಹೆಚ್ಚುತ್ತಿರುವುದರ ಬಗ್ಗೆ ಸಿಪಿಐ(ಎಂ) ತನ್ನ ತೀವ್ರ ಕಳವಳ, ಆತಂಕವನ್ನು ವ್ಯಕ್ತಪಡಿಸಿದೆ.

ಈ ಮಾಫಿಯಾಗಳೇ ರಾಜ್ಯ ಸರಕಾರವನ್ನು ಹಿಡಿತದಲ್ಲಿಟ್ಟುಕೊಂಡು, ಅಪಾರ ನೈಸರ್ಗಿಕ ಸಂಪನ್ಮೂಲಗಳ ಲೂಟಿ ನಡೆಸುತ್ತಿರುವುದು ಬಹಿರಂಗವಾಗಿದೆ. ಇದರ ವಿರುದ್ಧ ದನಿ ಎತ್ತಿದ, ಮಾಫಿಯಾಗಳಿಗೆ ಸಹಕರಿಸದ ಅಧಿಕಾರಿಗಳನ್ನು ಬೆದರಿಸಿದ ಪ್ರಕರಣಗಳು ಮತ್ತೆ ಮತ್ತೆ ಕಂಡು ಬರುತ್ತಿವೆ. ಹಿಂದೆ ಬಳ್ಳಾರಿಯಲ್ಲಿ ಜನಾರ್ದನರೆಡ್ಡಿ ಮತ್ತಿತರೆ ಗಣಿ ಮಾಫಿಯಗಳಿಂದ ಲೋಕಾಯುಕ್ತ ತನಿಖೆಯಲ್ಲಿ ತೊಡಗಿದ್ದ ಅಧಿಕಾರಿಗಳನ್ನು ಕೊಲೆ ಮಾಡುವ ಬೆದರಿಕೆ ಹಾಕಲಾಗಿತ್ತು.

ಶಿವಮೊಗ್ಗದಲ್ಲಿ ಐಪಿಎಸ್ ಅಧಿಕಾರಿಯೊಬ್ಬರನ್ನು ಮೋಟಾರು ಅಪಘಾತ ನಡೆಸಿ ಕೊಲೆ ನಡೆಸುವ ಯತ್ನ ನಡೆಯಿತು. ಇತ್ತೀಚೆಗೆ ಬೆಂಗಳೂರಿನಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧಕ ಇಲಾಖೆಯಲ್ಲಿ ಉಪನಿರ್ದೇಶಕರಾಗಿದ್ದ ಕೆಎಎಸ್ ಅಧಿಕಾರಿ ಮಹಾಂತೇಶ್‌ರವರ ಕಗ್ಗೊಲೆಯಾಗಿದೆ. ಇದು ತೀವ್ರ ಖಂಡನೀಯ. ಭೂ ಮಾಫೀಯಾಗಳ ಹಿಡಿತ ಬಲವಾಗಿದ್ದು, ಅದಕ್ಕೆ ತಡೆಯೇ ಇಲ್ಲದಂತಾಗಿದೆ. ಜೆಕ್ ನಿರ್ಮಿತ ಟ್ರಟ್ರಾ ವಾಹನ ಖರೀದಿ ಮತ್ತು ಬೆಮೆಲ್ ನೌಕರರ ಸೊಸೈಟಿಯನ್ನೂ ಒಳಗೊಂಡು, ಹಲವು ಸಹಕಾರ ಸಂಘಗಳ ಭೂ ಹಂಚಿಕೆ ಅಕ್ರಮಗಳನ್ನು ಪ್ರಶ್ನಿಸಿದರೆಂಬ ಕಾರಣಗಳು ಕೊಲೆಯ ಹಿಂದಿದೆ ಎಂಬ ಅನುಮಾನಗಳು ವ್ಯಕ್ತಗೊಂಡಿವೆ. ಇವುಗಳ ಕುರಿತು ಆಳವಾದ ತನಿಖೆ ನಡೆಸಬೇಕು. ಮಹಾಂತೇಶರ ಕೊಲೆಯ ಹಿಂದಿನ ಸಂಚು, ಶಕ್ತಿಗಳನ್ನು ಪತ್ತೆ ಹಚ್ಚಿ ಮಟ್ಟಹಾಕಬೇಕು.

ಈ ಎಲ್ಲಾ ಘಟನೆಗಳು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಷ್ಟು ಶಿಥಿಲವಾಗಿ, ದುರ್ಬಲವಾಗಿದೆ ಎಂಬುದನ್ನು ತೋರಿಸುತ್ತದೆ. ಕಾನೂನು ಜಾರಿ ಮಾಡುವ ಕರ್ತವ್ಯ ನಿರತರು ಹೆದರುವಂತಹ 'ಮಾಫಿಯಾ ರಾಜ್ಯಭಾರ' ಸೃಷ್ಟಿಯಾಗಿದೆ.

3. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ, ಖಂಡನೆ, ಪ್ರತಿಭಟನೆಗೆ ಕರೆ

ಮೂರು ವರ್ಷದ ಅವಧಿ ಮುಗಿಯುತ್ತಿದ್ದಂತೆಯೇ ಪೆಟ್ರೋಲಿನ ಬೆಲೆಯನ್ನು ಲೀಟರಿಗೆ ಸುಮಾರು 8.ರೂಗಳನ್ನು ಹೆಚ್ಚಿಸಿದ ಮತ್ತು ಡಿಸೆಲ್, ಗ್ಯಾಸ್‌ನಂತಹ ಇತರೆ ಉತ್ಪನ್ನಗಳನ್ನು ಬೆಲೆ ಏರಿಸಲು ನಿರ್ಧರಿಸಿರುವ ಕೇಂದ್ರದ ಯುಪಿಎ-2 ಸರ್ಕಾರದ ಕ್ರಮವನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸುತ್ತದೆ.

ಈಗಾಗಲೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರ ಮೇಲೆ ಕೇಂದ್ರ ಸರಕಾರ ನಡೆಸಿರುವ ಕ್ರೂರ ಧಾಳಿ ಇದಾಗಿದೆ.

ಈ ಏರಿಕೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಮತ್ತು ಡಿಸೆಲ್, ಗ್ಯಾಸ್ ಬೆಲೆಗಳನ್ನು ಹೆಚ್ಚಿಸಕೂಡದೆಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಇಂತಹ ಧಾಳಿಗಳನ್ನು ಕೇಂದ್ರ ಸರ್ಕಾರ ನಿರಂತರವಾಗಿ ನಡೆಸುತ್ತಿದೆ. ಈ ಹೆಚ್ಚಳ ಹಿಂತೆಗೆದುಕೊಳ್ಳಲು ಮತ್ತು ದರ ಏರಿಕೆ ವಿರೋಧಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಸಿಪಿಐ(ಎಂ) ಹಾಗೂ ಎಡ ಪಕ್ಷಗಳು ಕರೆ ನೀಡಿವೆ.

(ಮಾಧ್ಯಮಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ಮಾರುತಿ ಮಾನ್ಪಡೆ, ಎಸ್.ವೈ. ಗುರುಶಾಂತ್ ಹಾಜರಿದ್ದರು.)

ಕೆ.ಎಸ್. ಲಕ್ಷ್ಮಿಯವರನ್ನು ಬೆಂಬಲಿಸಿ.....


ಪುಟ 2 ರಿಂದ

ಬೆಂಗಳೂರು ವಿಶ್ವ ವಿದ್ಯಾಲಯದಿಂದ ಕೆ.ಎಸ್.ಲಕ್ಷ್ಮಿಯವರು ಅರ್ಥಶಾಸ್ತ್ರದ ಸ್ನಾತಕೋತ್ತರ ಪದವಿ ಹೊಂದಿದ್ದಾರೆ. ವಿದ್ಯಾರ್ಥಿಯಿಂದಲೇ ಕ್ರಿಯಾಶೀಲರಾಗಿದ್ದ ಲಕ್ಷ್ಮಿಯವರು ಜ್ಞಾನಭಾರತಿ ವಿದ್ಯಾರ್ಥಿ ಸಂಘದ (JBSU) ಕಾರ್ಯದರ್ಶಿಯಾಗಿದ್ದರು. 2ಬಾರಿ ಬೆಂಗಳೂರು ವಿಶ್ವವಿದ್ಯಾಲಯದ ಪದವೀಧರರ (ಮಹಿಳಾ ಮೀಸಲು) ಕ್ಷೇತ್ರದಿಂದ ಚುನಾಯಿತ ಸೆನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಗತಿಪರ ವಿದ್ಯಾರ್ಥಿ ಸಂಘಟನೆಯಾದ ಭಾರತ ವಿದ್ಯಾರ್ಥಿ ಫೆಡರೇಷನ್(SFI)ನ ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾಗಿದ್ದರು. ಇದೀಗ ಮಹಿಳಾ ಚಳುವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(AIDWA)ಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದಾರೆ. ಮೂಲತಃ ಕೋಲಾರ ಜಿಲ್ಲೆಯ ಮುಳಬಾಗಿಲಿನವರಾದ ಇವರು, ತಮ್ಮ ಶಾಲಾ ಶಿಕ್ಷಣವನ್ನು ಅಲ್ಲಿನ ಶಾರದ ಶಾಲೆಯಲ್ಲಿ ಮುಗಿಸಿ ಆನಂತರದ ಪದವಿ ಪೂರ್ವ ಮತ್ತು ಪದವಿ ಶಿಕ್ಷಣವನ್ನು ಬೆಂಗಳೂರಿನ ವಾಸವಿ ಶಿಕ್ಷಣ ಸಂಸ್ಥೆಯಲ್ಲಿ ಮುಗಿಸಿರುತ್ತಾರೆ. ಸದ್ಯ ಬೆಂಗಳೂರಿನಲ್ಲಿ ವಾಸವಿದ್ದಾರೆ.



ವರದಿ : ವಾ.ಉ.

ಆದಿವಾಸಿಗಳ ಭೂಮಿ ಹಕ್ಕಿಗೆ ಮಾನ್ಯತೆ ಅಗತ್ಯ : ಪ್ರಕಾಶ್ ಕಾರಟ್



ರಾಷ್ಟ್ರೀಯ ಉದ್ಯಾನವನ ನಿರ್ಮಾಣ ಸ್ಥಳದಲ್ಲಿ ವಾಸವಾಗಿದ್ದ ಆದಿವಾಸಿಗಳ ಭೂಮಿಯ ಹಕ್ಕಿಗೆ ಸರಕಾರ ಮಾನ್ಯತೆ ನೀಡುವುದು ಅಗತ್ಯ ಎಂದು ಸಿಪಿಐ(ಎಂ) ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಪ್ರಕಾಶ್ ಕಾರಟ್ ನುಡಿದರು. ಮಂಗಳೂರಿನ ಮಾನವತಾ ವೇದಿಕೆಯು ಮೇ 20, 2012 ರಂದು ಮಂಗಳೂರಿನಲ್ಲಿ ಏರ್ಪಡಿಸಿದ ವಿಚಾರ ಗೋಷ್ಠಿಯಲ್ಲಿ ನಕ್ಸಲ್ ಪಿಡುಗು ಮತ್ತು ಆದಿವಾಸಿ ಬುಡಕಟ್ಟು ಜನರ ಮಾನವ ಹಕ್ಕುಗಳ ಮೇಲೆ ಪ್ರಭುತ್ವದ ದೌರ್ಜನ್ಯಗಳು ವಿಷಯದಲ್ಲಿ ಅವರು ವಿಚಾರ ಮಂಡಿಸಿದರು.

. ಆದಿವಾಸಿ ಬುಡಕಟ್ಟುಗಳು ವಾಸವಾಗಿರುವ ಪ್ರದೇಶಗಳಲ್ಲಿ ಸರಕಾರವು ಯಾವುದಾದರೂ ಯೋಜನೆಯನ್ನು ಹಮ್ಮಿಕೊಳ್ಳುವುದಾದಲ್ಲಿ, ಯೋಜನೆಯ ಅನುಷ್ಠಾನ ಪೂರ್ವದಲ್ಲಿ ಸರಕಾರ ತಜ್ಞರ ಸಮಿತಿ ರಚಿಸಬೇಕು. ಪ್ರಸ್ತಾವಿತ ಪ್ರದೇಶದಲ್ಲಿ ನೆಲೆಸಿರುವ ಆದಿವಾಸಿಗಳ ಜತೆ ಸಮಾಲೋಚನೆ ನಡೆಸಬೇಕು. ಪರಿಹಾರ ಮತ್ತು ಪುನರ್ವಸತಿ ಕುರಿತು ನ್ಯಾಯಪರವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಈ ರೀತಿಯ ಕ್ರಮಗಳನ್ನು ಕೈಗೊಳ್ಳದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡು ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯಲ್ಲಿ ಮಾಡುತ್ತಿರುವಂತೆ 10 ಲಕ್ಷ ರೂಪಾಯಿ ಪರಿಹಾರ ನೀಡಿ ಆದಿವಾಸಿಗಳನ್ನು ಅವರು ನೆಲೆಸಿರುವ ಭೂಮಿಯಿಂದ ಹೊರ ದಬ್ಬಲು ಸರಕಾರಕ್ಕೆ ಅವಕಾಶವಿಲ್ಲ ಎಂದು ಅವರು ಹೇಳಿದರು.

ಆದಿವಾಸಿಗಳು ಪರಿಸರದ ಭಾಗ:

ಭೂ ಒಡೆತನದ ಸಮಸ್ಯೆ ವಿಠಲ ಮಲೆಕುಡಿಯ ಓರ್ವನ ಸಮಸ್ಯೆಯಾಗಿರದೆ, ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ 8 ಕೋಟಿಗೂ ಅಧಿಕ ಜನಸಂಖ್ಯೆಯಲ್ಲಿ ಇರುವ ಆದಿವಾಸಿಗಳ ಮೂಲಭೂತ ಸಮಸ್ಯೆಯಾಗಿದೆ. ಪರಿಸರ ರಕ್ಷಣೆಗೆ ಆಪತ್ತು ಉಂಟಾಗಿರುವುದು ಅಧಿಕಾರಿಗಳು, ಕಳ್ಳಸಾಗಾಣಿಕೆದಾರರು, ಗುತ್ತಿಗೆದಾರರು ಮುಂತಾದ ವರ್ಗಗಳಿಂದ. ಪರಿಸರದ ಭಾಗವಾಗಿ ಬದುಕುತ್ತಾ ಬಂದಿರುವ ಆದಿವಾಸಿಗಳಿಂದ ಪರಿಸರಕ್ಕೆ ಯಾವತ್ತೂ ಸಮಸ್ಯೆಯಾಗಿಲ್ಲ ಎಂದರು.

ಮಾವೋವಾದ ಪ್ರಭುತ್ವದ ವಿರುದ್ಧ ಶಸ್ತ್ರಾಸ್ತ್ರ ಹೋರಾಟಕ್ಕೆ ಪ್ರೇರೇಪಣೆ ನೀಡುತ್ತದೆ. ನಕ್ಸಲ್ ಚಳವಳಿ ಬಗ್ಗೆ ಸಹಾನುಭೂತಿ ಇರುವವರನ್ನು ನಕ್ಸಲರೆಂದು ಪರಿಗಣಿಸುವುದು ಅಸಾಧ್ಯ. ಇಂಥ ಸೂಕ್ಷ್ಮ ಮೂಲಭೂತ ಸಮಸ್ಯೆಗಳನ್ನು ಸರಕಾರ ಅರ್ಥೈಯಿಸಿಕೊಳ್ಳಬೇಕು. ನಕ್ಸಲ್ ಚಳವಳಿ ಹಾಗೂ ಶಸ್ತ್ರಾಸ್ತ್ರ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲವಿಲ್ಲ. ಕರಾಳ ಕಾನೂನಿನ ದುರ್ಬಳಕೆ ಮೂಲಕ ಭೂಮಿಯ ಹಕ್ಕಿಗಾಗಿ ಹೋರಾಡುವ ಆದಿವಾಸಿಗಳನ್ನು ದಮನಿಸುವ ಪ್ರಭುತ್ವದ ವಿರುದ್ಧ ತಮ್ಮ ಪಕ್ಷ ಹೋರಾಟ ನಡೆಸುವುದು ಎಂದರು.

ರಾಜದ್ರೋಹ ಕಾಯ್ದೆ ದುರ್ಬಳಕೆ:

ನಕ್ಸಲ್ ನಂಟು ಆರೋಪದ ಮೇಲೆ ಬಂಧನಕ್ಕೊಳಗಾದ ಮಂಗಳೂರು ವಿಶ್ವವಿದ್ಯಾಲಯ ವಿದ್ಯಾರ್ಥಿ ವಿಠಲ ಮಲೆಕುಡಿಯ ವಿರುದ್ಧ ರಾಜದ್ರೋಹದ ಪ್ರಕರಣ ದಾಖಲಿಸಲಾಗಿದೆ. ಪೋಲೀಸರು ಯಾವ ಆಧಾರದಲ್ಲಿ ಈ ಪ್ರಕರಣ ದಾಖಲಿಸಿದರು



ಎಂಬುದನ್ನು ಪ್ರಶ್ನಿಸಬೇಕಾಗಿದೆ. ರಾಜದ್ರೋಹದ ಪ್ರಕರಣ ದುರ್ಬಳಕೆಯಿಂದ ಬುಡ ಕಟ್ಟು ಜನರು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಳೆದು ಕೊಳ್ಳುತ್ತಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಎಲ್ಲರೂ ಇದರ ಬಿಸಿ ಎದುರಿಸಬೇಕಾಗುತ್ತದೆ. ಹಾಗಾಗಿ ಜನರೆಲ್ಲ ಎಚ್ಚೆತ್ತು ಇದಕ್ಕೆ ಪ್ರತಿರೋಧ ಒಡ್ಡಬೇಕಾಗಿದೆ ಎಂದರು.

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ರಾಜದ್ರೋಹದ ಆರೋಪದಲ್ಲಿ ಬಂಧನಕ್ಕೊಳಗಾಗಿದ್ದರು. ಭಗತ್‌ಸಿಂಗ್ ಅವರನ್ನು ಇದೇ ಆರೋಪದಲ್ಲಿ ಗಲ್ಲಿಗೇರಿಸಲಾಗಿತ್ತು. ಭಗತ್‌ಸಿಂಗ್ ಕುರಿತು ಕುಲ್‌ದೀಪ್ ನಯ್ಯರ್ ಬರೆದ ಪುಸ್ತಕ ವನ್ನು ಇಟ್ಟುಕೊಂಡಿದ್ದ ಕಾರಣಕ್ಕೆ ವಿಠಲನ ಮೇಲೆ ರಾಜದ್ರೋಹದ ಆಪಾದನೆ ಹೊರೆಸಿ ಜೈಲಿಗೆ ಹಾಕಲಾಗಿದೆ. ಬ್ರಿಟಿಷ್ ಕಾಲದ ಕರಾಳ ಕಾನೂನಿನ ಪಳೆಯುಳಿಕೆ ಉಳಿದಿರುವುದಕ್ಕೆ ಇದು ಸಾಕ್ಷಿ ಎಂದರು.

ದಲಿತನ ಮೇಲೆ ದೌರ್ಜನ್ಯ ನಡೆಸಿದರೆ, ಮರ್ಯಾದಾ ಹತ್ಯೆ ಹೆಸರಿನಲ್ಲಿ ಮಗಳನ್ನೇ ಕೊಂದರೆ ಅದು ರಾಜದ್ರೋಹ ಆಗುವುದಿಲ್ಲ. ಆದರೆ ಆದಿವಾಸಿಗಳು ನಕ್ಸಲರ ಜೊತೆ ನಂಟು ಹೊಂದಿದರೆ ಅದು ರಾಜದ್ರೋಹ ಆಗುತ್ತದೆ. ಅವರಿಗೆ 6 ತಿಂಗಳು ಜಾಮೀನು ನಿರಾಕರಿಸಲಾಗುತ್ತದೆ. ಪೋಲೀಸರು ಹಾಗೂ ಸರಕಾರ ಆದಿವಾಸಿಗಳ ವಿರುದ್ಧ ಈ ಕಾನೂನನ್ನು ದುರ್ಬಳಕೆ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ಎಡಪಕ್ಷಗಳ ಹೋರಾಟದ ಫಲ:

ಈ ಹಿಂದೆ ಅಸ್ತಿತ್ವದಲ್ಲಿದ್ದ ಭಯೋತ್ಪಾದನಾ ಚಟುವಟಿಕೆ ತಡೆ ಕಾಯ್ದೆ (ಪೋಟಾ) ಅಮಾಯಕ ಮುಸ್ಲಿಮರ ವಿರುದ್ಧ ದುರ್ಬಳಕೆ ಆಗುತ್ತಿತ್ತು. ಎಡಪಕ್ಷಗಳ ಹೋರಾಟದಿಂದಾಗಿ ಆ ಕಾಯ್ದೆಯನ್ನು ರದ್ದುಪಡಿಸಲಾಯಿತು. ಅಂತಹದೇ ಆದ ರಾಜದ್ರೋಹದ ಕಾಯ್ದೆ ಈಗಲೂ ದುರ್ಬಳಕೆ ಆಗುತ್ತಿರುವುದು ದುರಂತ ಎಂದರು.

ದೇಶದಲ್ಲಿ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ಸಂರಕ್ಷಣೆಯ ಜೊತೆಗೆ ಅರಣ್ಯದಲ್ಲಿರುವ ಅಮೂಲ್ಯವಾದ ಕಬ್ಬಿಣ, ಬಾಕ್ಸೈಟ್ ಅದಿರಿನ ನಿಕ್ಷೇಪವನ್ನು ಪಡೆಯಲು ಬಹುರಾಷ್ಟ್ರೀಯ ಹಾಗೂ ಖಾಸಗಿ ಕಂಪೆನಿಗಳು ಸರಕಾರದೊಂದಿಗೆ ಸೇರಿ ಆದಿವಾಸಿಗಳ ಹಕ್ಕುಗಳ ಮೇಲೆ ದಾಳಿ ನಡೆಸುತ್ತಿವೆ. ಜಾರ್ಖಂಡ್, ಒಡಿಶಾ, ಛತ್ತೀಸ್‌ಗಢ್ ಮೊದಲಾದ ರಾಜ್ಯಗಳಲ್ಲಿ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳದ ದಮನಿತ ವರ್ಗದ ಆದಿವಾಸಿಗಳ ಹಕ್ಕುಗಳ ಮೇಲೆ ದಾಳಿ ನಡೆದಿದೆ. ಆದಿವಾಸಿಗಳ ಹಕ್ಕುಗಳ ರಕ್ಷಣೆ ಮಾಡಬೇಕಾದ ರಾಜ್ಯ ಸರ್ಕಾರಗಳು ಅದರಲ್ಲಿ ವಿಫಲಗೊಂಡಿದೆ. ಸುಪ್ರೀಂಕೋರ್ಟ್ ತೀರ್ಪೊಂದರಲ್ಲಿ ತಿಳಿಸಿದಂತೆ ಅರಣ್ಯವಾಸಿಗಳಲ್ಲದವರಿಗೆ ಅರಣ್ಯದೊಳಗೆ ಚಟುವಟಿಕೆ ನಡೆಸಲು ರಾಜ್ಯಪಾಲರ ಅನುಮತಿ ಪಡೆಯಬೇಕಾಗಿದೆ ಎಂದು ಪ್ರಕಾಶ್ ಕಾರಾಟ್ ತಿಳಿಸಿದರು.


ಪ್ರೊ. ಗೋವಿಂದರಾವ್, ಮುನೀರ್ ಕಾಟಿಪಳ್ಳ, ಮಾವಳ್ಳಿ ಶಂಕರ್ ಜೈಲಿಗೆ ಭೇಟಿ ನೀಡಿದಾಗ

ಅರಣ್ಯ ಭೂಮಿಯೊಂದಿಗೆ ತಲೆತಲಾಂತರದಿಂದ ಸಂಬಂಧ ಹೊಂದಿರುವ, ಅದರ ರಕ್ಷಣೆಯ ಜೊತೆಗೆ ಹೊಂದಾಣಿಕೆಯೊಂದಿಗೆ ಬದುಕುತ್ತಿರುವ ಆದಿವಾಸಿ ಬುಡಕಟ್ಟು ಜನರ ಹಕ್ಕನ್ನು ಕಸಿದುಕೊಳ್ಳುತ್ತಿರುವ ಸರಕಾರದ ನೀತಿ ನಕ್ಸಲ್ ಸಮಸ್ಯೆ ಸೃಷ್ಟಿಯಾಗಲು ಕಾರಣವಾಗಿದೆ ಎಂದು ಅವರು ಖಂಡಿಸಿದರು.

ಅರಣ್ಯವನ್ನೇ ನಂಬಿ ಬದುಕುತ್ತಿರುವ ಅರಣ್ಯವಾಸಿಗಳಿಗೆ ಸಂಬಂಧಿಸಿದಂತೆ ಎಡಪಕ್ಷಗಳ ಒತ್ತಡದಿಂದ ಬುಡಕಟ್ಟು ಜನರ ಅರಣ್ಯ ಹಕ್ಕು ಕಾಯ್ದೆ 2007 ರಲ್ಲಿ ಜಾರಿಗೆ ಬಂದಿದೆ. ಈ ಕಾಯ್ದೆಯ ಪ್ರಕಾರ ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಜನರು ಅರಣ್ಯ ಪ್ರದೇಶದಲ್ಲಿ ಐದು ಹೆಕ್ಟೇರ್ ಭೂಮಿ ಹೊಂದಬಹುದಾಗಿದೆ. ಆದರೆ ಈ ಹಕ್ಕಿನ ರಕ್ಷಣೆಯಾಗುತ್ತಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಆದಿವಾಸಿಗಳನ್ನು ಸಂಕಷ್ಟದಲ್ಲಿ ಸಿಲುಕಿಸಿದ ಮಾವೋವಾದಿಗಳು:

ಕುದುರೆಮುಖ ಉದ್ಯಾನವನದ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ ವಿಠಲ ಮಲೆಕುಡಿಯ ಸೇರಿದಂತೆ ಕುತ್ಲೂರಿನ 32 ಕುಟುಂಬಗಳು ಅರಣ್ಯ ಭೂಮಿಯಿಂದ ಹೊರಹೋಗಲು ಒಪ್ಪದೇ, ಸರಕಾರ ನೀಡಿದ ತಲಾ 10 ಲಕ್ಷ ರೂ.ಗಳ ಪರಿಹಾರವನ್ನು ಸ್ವೀಕರಿಸಲು ನಿರಾಕರಿಸಿದ ಕಾರಣ ಅವರನ್ನು ಬಲವಂತವಾಗಿ ಹೊರದಬ್ಬಲು ಕಿರುಕುಳ ನೀಡಲಾಗುತ್ತಿದೆ.

ಮಾವೋವಾದಿಗಳು ಆದಿವಾಸಿಗಳ ಹಕ್ಕಿಗಾಗಿ ಹೋರಾಡುತ್ತಿಲ್ಲ. ಅವರ ಹಕ್ಕು ರಕ್ಷಿಸುವ ಚಳುವಳಿಯನ್ನೇ ಅವರು ಹಾದಿ ತಪ್ಪಿಸಿದ್ದಾರೆ. ಅರೆಸೇನಾ ಪಡೆಗಳು ದಾಳಿ ಮಾಡಿದಾಗ ಆದಿವಾಸಿಗಳನ್ನು ಮುಂದೆ ಬಿಟ್ಟು ಅವರು ಪಲಾಯನ ಮಾಡುತ್ತಾರೆ. ಆದಿವಾಸಿಗಳನ್ನು ಮುಂದಿಟ್ಟು ಮಾವೋವಾದಿ ನಕ್ಸಲ್ ಗುಂಪುಗಳು ಸರಕಾರದ ವಿರುದ್ಧ ಸಶಸ್ತ್ರ ಹೋರಾಟ ನಡೆಸುತ್ತಿವೆ. ಇವರ ಮಧ್ಯೆ ಸಿಲುಕಿಕೊಳ್ಳುವ ಆದಿವಾಸಿಗಳು ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ. ಸಿಪಿಐ(ಎಂ) ಇಂಥ ಮಾವೋವಾದಿಗಳ ಹೋರಾಟವನ್ನು ಬೆಂಬಲಿಸುವುದಿಲ್ಲ ಎಂದು ಕಾರಟ್ ನುಡಿದರು.

ಪ್ರಕಾಶ್ ಕಾರಾಟ್ ಉಪನ್ಯಾಸಕ್ಕೆ ಸಭಾಂಗಣ ತುಂಬಾ ಕೇಳುಗರು:

ಮಾನವತಾ ವೇದಿಕೆಯು ಏರ್ಪಡಿಸಿದ ವಿಚಾರಗೋಷ್ಠಿಗೆ ಮಂಗಳೂರಿನ ಮಧ್ಯಮ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ-2 ಸರಕಾರದ ಮೂರು ವರ್ಷಗಳು

ಸಂಭ್ರಮ ಪಡಲು ಜನತೆಗೆ ಏನಿದೆ?

ಯುಪಿಎ-2 ಸರಕಾರದ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ 'ರಿಪೋರ್ಟ್ ಕಾರ್ಡ್' ದಾಖಲೆ ಕಲ್ಲಿದ್ದಲು ಉತ್ಪಾದನೆಯಾಗಿದೆ, ವಿದ್ಯುತ್ ವಲಯದಲ್ಲಿ ಅತ್ಯುನ್ನತ ಸಾಮರ್ಥ್ಯ ಸೇರಿಕೆಯಾಗಿದೆ, ಜವಹರಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಶನ್ ಅಡಿಯಲ್ಲಿ 559 ಪ್ರಾಜೆಕ್ಟ್ ಗಳನ್ನು ಮಂಜೂರು ಮಾಡಲಾಗಿದೆ ಎಂದೆಲ್ಲ ಹೇಳುತ್ತದೆ. ಆದರೆ ಈ ದಾವೆಗಳು ಮತ್ತು ವಾಸ್ತವಿಕ ಸಾಧನೆಗಳ ನಡುವಿನ ಅಂತರದ ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು. ಈ ಪಟ್ಟಿಯಲ್ಲಿನ ಅತ್ಯಂತ ಕ್ರಿಮಿನಲ್ ಅಂಶವೆಂದರೆ, 25 ಕೋಟಿ ಟನ್‌ಗಳಷ್ಟು ದಾಖಲೆ ಆಹಾರಧಾನ್ಯ ಉತ್ಪಾದನೆಯಾದರೂ ಜನತೆ ಈಗಲೂ ಹಸಿದೇ ಇದ್ದಾರೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ನವ-ಉದಾರವಾದಿ ದಿಕ್ಪಥಕ್ಕೆ ಬದ್ಧವಾಗಿರುವ ಈ ಯುಪಿಎ-2 ಸರಕಾರ ತನ್ನ ಉಳಿದೆರಡು ವರ್ಷಗಳಲ್ಲಾದರೂ ಇದನ್ನು ಕೈಬಿಟ್ಟು, ಸಾರ್ವಜನಿಕ ಹೂಡಿಕೆಗಳ ಮೂಲಕ ತಾಳಿಕೆಯ ಬೆಳವಣಿಗೆಯ ಚಕ್ರಕ್ಕೆ ಚಾಲನೆ ನೀಡುವ ದಾರಿಯನ್ನು ಹಿಡಿಯುವಂತೆ ಸಾರ್ವಜನಿಕ ಒತ್ತಡವನ್ನು ಹೆಚ್ಚಿಸಬೇಕು.

ಯುಪಿಎ-2 ಸರಕಾರದ ಮೂರನೇ ವಾರ್ಷಿಕೋತ್ಸವದ ಅಧಿಕೃತ ಆಚರಣೆಯೇನೋ ಬಹಳ ಆಡಂಬರದಿಂದ ನಡೆದಿದೆ. ಆದರೆ ಬಹುಪಾಲು ಭಾರತೀಯ ಜನತೆಗೆ ಆಚರಿಸಲು ಇರುವ ಸಂಗತಿ ಅತ್ಯಲ್ಪ.

ಇದರ ಒಂದು ಸೂಚನೆಯೆಂದರೆ, ಯುಪಿಎ-2 ಸರಕಾರದ ಪ್ರತಿಯೊಂದು ವಾರ್ಷಿಕೋತ್ಸವದ ಸಂದರ್ಭದಲ್ಲೂ ಒಂದು ಮಾನವ ದುರಂತದ ಕ್ರೂರ ಆಕಸ್ಮಿಕ. 2010ರಲ್ಲಿ ಮೊದಲ ವಾರ್ಷಿಕೋತ್ಸವ ಮಂಗಳೂರಿನ ವಿಮಾನ ಅಪಘಾತದೊಂದಿಗೆ ಬಂತು. ಎರಡನೆಯದ್ದು ಬಿಹಾರದ ಒಂದು ರೈಲ್ವೆ ಅಪಘಾತದೊಂದಿಗೆ ಬಂತು. ಈ ಮೂರನೇ ವಾರ್ಷಿಕೋತ್ಸವ ಆಂಧ್ರಪ್ರದೇಶದಲ್ಲಿ ಕನಿಷ್ಟ 25 ಜನರನ್ನು ಬಲಿ ತೆಗೆದುಕೊಂಡ ಹಂಪಿ ಎಕ್ಸ್‌ಪ್ರೆಸ್‌ನ ರೈಲ್ವೆ ಅಪಘಾತದ ದುರಂತದೊಂದಿಗೆ ಬಂದಿದೆ. ಈ ಮೂರು ವರ್ಷಗಳಲ್ಲಿ, 36ತಿಂಗಳಲ್ಲಿ 36 ರೈಲು ಅಪಘಾತಗಳು ನಡೆದಿವೆ. ಇದರಿಂದ 'ಅಧಿಕೃತವಾಗಿ' ಸುಮಾರು 500 ಜನ ಸತ್ತಿದ್ದಾರೆ ಮತ್ತು ಸುಮಾರು 1,200 ಮಂದಿ ಗಾಯಗೊಂಡಿದ್ದಾರೆ.


ಈ ಮೂರನೇ ವಾರ್ಷಿಕೋತ್ಸವ ಮತ್ತು ಸರಕಾರದ ಆಡಂಬರದ ದಾವೆಗಳು ಪ್ರಖ್ಯಾತ ಇಂಗ್ಲಿಷ್ ನಾಟಕಕಾರ ಮತ್ತು ವಿಡಂಬನಕಾರ ಆಸ್ಕರ್ ವೈಲ್ಡ್‌ನ ಜೀವನಕ್ಕೆ ಸಂಬಂಧಪಟ್ಟ ಒಂದು ಕತೆಯನ್ನು ನೆನಪಿಗೆ ತರುತ್ತವೆ. ಆತ ನೌಕರನಾಗಿದ್ದಾಗ, ಒಂದು ದಿನ ಆತನ ಬಾಸ್ ಪ್ರತಿದಿನ ಕೆಲಸಕ್ಕೆ ವಿಳಂಬವಾಗಿ ಬರುತ್ತಿದ್ದೀಯಾ ಎಂದು ಆಪಾದಿಸಿದ. ಈ ಚ್ಯುತಿಯನ್ನು ಸರಿಪಡಿಸಲು ಪ್ರತಿದಿನ ಬೇಗನೇ ಹೋಗುತ್ತಿದ್ದೇನಲ್ಲ ಎಂದು ಶ್ರೀಯುತ ವೈಲ್ಡ್ ಪ್ರತ್ಯುತ್ತರ ನೀಡಿದ! ಕಳೆದ ಮೂರು ವರ್ಷಗಳಲ್ಲಿ ಬಹು ಪಾಲು ಜನತೆಯ ಜೀವನಾಧಾರ ಮಟ್ಟಗಳು ಎರಡೂ ಕಡೆಗಳಿಂದ ಅಕ್ಷರಶಃ ಕ್ಷಯಿಸುತ್ತಿವೆ.

ಜನಗಳ ಹೆಚ್ಚುತ್ತಿರುವ ಹೊರೆಗಳು ಮತ್ತು ಬವಣೆಗಳ ಬಗ್ಗೆ ಬರುವ ಮೊದಲು, ಈ ಸರಕಾರ ಅಧಿಕಾರ ವಹಿಸಿಕೊಂಡಾಗ ನೀಡಿದ ಭರವಸೆಗಳೆಲ್ಲಾ ಈಡೇರದೆ ಉಳಿದುಕೊಂಡಿವೆ ಎಂಬುದನ್ನು ನೆನಪಿಸಿಕೊಳ್ಳಿ. ಮೊದಲ ನೂರು ದಿನಗಳೊಳಗೆ, ರಾಜ್ಯದ ಶಾಸನ ಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿ ನೀಡುವ ಮಹಿಳಾ ಮೀಸಲಾತಿ ಮಸೂದೆಯನ್ನು ಪಾಸು ಮಾಡುವುದಾಗಿ ಭಾರತದ ರಾಷ್ಟ್ರಪತಿಗಳು ಭರವಸೆ ನೀಡಿದ್ದರು. ಇನ್ನೂ ಇದು ಬೆಳಕು ಕಂಡಿಲ್ಲ. ಅದೇ ರೀತಿ ಆಹಾರ ಭದ್ರತಾ ಮಸೂದೆ, ಭೂಸ್ವಾಧೀನ ಮಸೂದೆ, ಕೋಮುವಾದಿ ಹಿಂಸಾಚಾರ ಮಸೂದೆ, ಲೋಕಪಾಲ ಮಸೂದೆ ಇತ್ಯಾದಿಗಳೆಲ್ಲಾ ಜಾರಿಗೆ ಬರದೆ ಉಳಿದುಕೊಂಡಿವೆ. ವಾರ್ಷಿಕೋತ್ಸವ ಆಚರಣೆಯ ಬಗ್ಗೆ ಇಷ್ಟು ಹೇಳಿದರೆ ಸಾಕಾಗಬಹುದು.

ಗುರಿಗಳೆಲ್ಲೋ, ಸಾಧನೆಗಳೆಲ್ಲೋ

ಅದೇ ರೀತಿ ಆರ್ಥಿಕಕ್ಕೆ ಸಂಬಂಧಪಟ್ಟಂತೆಯೂ ಈ ಸರಕಾರದ ಹೆಚ್ಚಿನ ದಾವೆಗಳು ಘೋಷಿತ ಗುರಿಗಳಿಗಿಂತ ಇನ್ನೂ ಎಷ್ಟೋ ದೂರದಲ್ಲಿಯೇ ಉಳಿದಿವೆ. ನಮ್ಮ ದೇಶ 9ಶೇ. ಜಿಡಿಪಿ ಬೆಳವಣಿಗೆ ದಾಖಲಿಸುತ್ತದೆ ಎಂದು ಹೇಳಿಕೊಳ್ಳುತ್ತಲೇ ಈ ಮೂರನೇ ವರ್ಷವನ್ನು ಆರಂಭಿಸಿತು. ಆದರೆ ವರ್ಷ ಕೊನೆಯಾಗುವ ವೇಳೆಗೆ ಬೆಳವಣಿಗೆ ದರ 6.9ಶೇ. ಕೈಗಾರಿಕಾ ಬೆಳವಣಿಗೆ ದರ ಕಳೆದ ವರ್ಷ 8.2ಶೇ. ಇದ್ದದ್ದು ಈ ವರ್ಷ ಕೇವಲ 2.8ಶೇ. ಕ್ಕೆ ಇಳಿದಿದೆ. ಈ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ 'ರಿಪೋರ್ಟ್ ಕಾರ್ಡ್' ದಾಖಲೆ ಕಲ್ಲಿದ್ದಲು ಉತ್ಪಾದನೆಯಾಗಿದೆ ಎಂದು ಹೇಳಿಕೊಂಡಿದೆ. ಕಲ್ಲಿದ್ದಲಿನ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವೂ ದಾಖಲೆ ಮಟ್ಟ ತಲುಪಿದೆ, ಅದು ಕೂಡ ನಮ್ಮ ಅಪಾರ ಕಲ್ಲಿದ್ದಲು ಸಂಚಯದ ನಡುವೆಯೂ, ಎಂದು ಮಾತ್ರ ಅದು ಹೇಳಿಲ್ಲ. ಅದೇ ರೀತಿ ವಿದ್ಯುತ್ ವಲಯದಲ್ಲಿ ಅತ್ಯುನ್ನತ ಸಾಮರ್ಥ್ಯ ಸೇರಿಕೆಯಾಗಿದೆ ಎಂಬ ಹೇಳಿಕೆಯನ್ನೂ ವಾಸ್ತವತೆಯೊಂದಿಗೆ ಹೋಲಿಸಿ ನೋಡಬೇಕು- ಈ ಸಾಮರ್ಥ್ಯದ 60ಶೇ.ಕ್ಕಿಂತಲೂ ಹೆಚ್ಚು ಭಾಗಕ್ಕೆ ತೀವ್ರ ಇಂಧನ ಕೊರತೆಯಿಂದಾಗಿ ಸಾಮಾನ್ಯ ನಿರ್ವಹಣೆಯನ್ನು ನಡೆಸಲೂ ಆಗುತ್ತಿಲ್ಲ. ಜವಹರಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಶನ್ ಅಡಿಯಲ್ಲಿ 559 ಪ್ರಾಜೆಕ್ಟ್ ಗಳನ್ನು ಇದುವರೆಗೆ ಮಂಜೂರು ಮಾಡಲಾಗಿದೆ ಎಂದು ಈ 'ರಿಪೋರ್ಟ್ ಕಾರ್ಡ್' ಹೇಳುತ್ತದೆ. ಆದರೆ, ಇವುಗಳಲ್ಲಿ ಇದುವರೆಗೆ ಪೂರ್ಣಗೊಂಡಿರುವುದು 128 ಮಾತ್ರ ಎಂದು ಅದು ಹೇಳುವುದಿಲ್ಲ. ದಾವೆಗಳು ಮತ್ತು ಸಾಧನೆಗಳ ನಡುವಿನ ವಿಷಮತೆಯ ಈ ಪಟ್ಟಿ ಹೀಗೆಯೇ ಸಾಗುತ್ತದೆ.

ಅತ್ಯಂತ ಕ್ರಿಮಿನಲ್ ಅಂಶವೆಂದರೆ, 25 ಕೋಟಿ ಟನ್‌ಗಳಷ್ಟು ದಾಖಲೆ ಆಹಾರಧಾನ್ಯ ಉತ್ಪಾದನೆಯಾದರೂ ಜನತೆ ಈಗಲೂ ಹಸಿದೇ ಇದ್ದಾರೆ. ಈ ಅಂಕಣದಲ್ಲಿ ಹಿಂದೆ ಗಮನಿಸಿದಂತೆ, ಕೇಂದ್ರ ಸರಕಾರದ ಗೋದಾಮುಗಳಲ್ಲಿ ಆಹಾರಧಾನ್ಯಗಳ ದಾಸ್ತಾನು ಅಗತ್ಯವಾದ ಮಟ್ಟಕ್ಕಿಂತ ಎಷ್ಟೋ ಹೆಚ್ಚಿದೆ. ಇನ್ನಷ್ಟು ದಾಸ್ತಾನು ಮಾಡುವ ಸಾಮರ್ಥ್ಯ ಇಲ್ಲವಷ್ಟೇ ಅಲ್ಲ, ಬಹಳಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳು ಗೋದಾಮುಗಳ ಹೊರಗೇ



ಬಿದ್ದಿದ್ದು ಕೊಳೆಯುತ್ತಿವೆ ಕೂಡ. ಈ ವರ್ಷ ಎಂದಿನಂತೆ ಆಹಾರಧಾನ್ಯಗಳ ಸಂಗ್ರಹ ನಡೆದರೆ, ಅವನ್ನು ದಾಸ್ತಾನು ಮಾಡಲೆಂದೇ ಸರಕಾರ 20,000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ ಎಂದು ಹಣಕಾಸು ಮಂತ್ರಿಗಳು ಸಂಸತ್ತಿಗೆ ಹೇಳಿದ್ದಾರೆ. ಆದರೆ ನಮ್ಮ ರೈತರ ಹತಾಶ ಆತ್ಮಹತ್ಯೆಗಳು ಮುಂದುವರೆಯುತ್ತಲೇ ಇರುವ ಸಂದರ್ಭದಲ್ಲಿ ಆಹಾರಧಾನ್ಯಗಳನ್ನು ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸದಿರಲೂ ಸಾಧ್ಯವಿಲ್ಲ. ಆದರೂ ಈ ಹೆಚ್ಚುವರಿ ಆಹಾರಧಾನ್ಯಗಳ ದಾಸ್ತಾನುಗಳನ್ನು ರಾಜ್ಯಗಳಿಗೆ ಬಿಪಿಎಲ್ ಬೆಲೆಗಳಲ್ಲಿ ಹಂಚಿ, ರಾಜ್ಯಗಳು ಅವನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಸಿದ ಜನಗಳಿಗೆ ತಲುಪಿಸಲು ಅನುವು ಮಾಡಿಕೊಡುವ ಬದಲು, ಸರಕಾರ ಈ ದಾಸ್ತಾನುಗಳನ್ನು ಗೋದಾಮುಗಳಲ್ಲಿ ಕೊಳೆಯಲು ಬಿಡುವುದೇ ವಾಸಿಯೆಂದು ಬಗೆದಿದೆ. ಶೀಘ್ರದಲ್ಲೇ ಅವುಗಳ ರಫ್ತನ್ನೂ ಆರಂಭಿಸುತ್ತಾರೆ, ಇಲ್ಲಿ ತಮ್ಮದೇ ಜನಗಳು ಹಸಿದುಕೊಂಡಿದ್ದರೂ ಕೂಡ.

ಕ್ರೌರ್ಯ ಮರೆಸಲಾಗದ ಟೊಳ್ಳು ಮಾತುಗಳು

ಈ ಎಲ್ಲವುಗಳ ಕ್ರೌರ್ಯವನ್ನು ರಾಷ್ಟ್ರೀಯ ಮಾದರಿ ಸರ್ವೆಯ ಇತ್ತೀಚಿನ ಮಾಹಿತಿಗಳ ಹಿನ್ನೆಲೆಯಲ್ಲಿ ನೋಡಬೇಕು. 'ಭಾರತದಲ್ಲಿ ಕುಟುಂಬಗಳ ಖರ್ಚಿನ ಪ್ರಮುಖ ಸೂಚಕಗಳು' ಎಂಬ ವರದಿ ನೀಡುವ ಮಾಹಿತಿಗಳ ಒಂದು ಅಧ್ಯಯನದಲ್ಲಿ ಕಂಡು ಬಂದಿರುವ ಸಂಗತಿಯೆಂದರೆ, ಯೋಜನಾ ಆಯೋಗ ನಿರೂಪಿಸಿರುವ ಅತ್ಯಂತ ಕೆಳಮಟ್ಟದ ಬಡತನದ ರೇಖೆಯನ್ನು ಪರಿಗಣಿಸಿದರೂ, ದೇಶದ ಎಲ್ಲಾ ರಾಜ್ಯಗಳಲ್ಲಿ 60ಶೇ.ದಷ್ಟು ಜನಸಂಖ್ಯೆ ಈ ರೇಖೆಯ ಕೆಳಗೆಯೇ ಇದೆ (ಟೈಮ್ಸ್ ಆಫ್ ಇಂಡಿಯ, ಎಪ್ರಿಲ್ 29, 2012). ವಾಸ್ತವವಾಗಿ ಇದು, ನಮ್ಮ 80 ಕೋಟಿಗೂ ಹೆಚ್ಚು ಜನತೆ ದಿನಕ್ಕೆ 20ರೂ.ಗಿಂತಲೂ ಕಡಿಮೆ ಖರ್ಚಿನಲ್ಲಿ ಹೇಗೋ ಬದುಕು ಸಾಗಿಸುತ್ತಿದ್ದಾರೆ ಎಂಬ ಅರ್ಜುನ್ ಸೇನ್‌ಗುಪ್ತ ಸಮಿತಿಯ ಲೆಕ್ಕಾಚಾರವನ್ನು ದೃಢಪಡಿಸುತ್ತದೆ.

ಇಷ್ಟೇ ಸಾಲದೆಂಬಂತೆ, ಎಲ್ಲ ಆವಶ್ಯಕ ಸರಕುಗಳ ನಿರಂತರ ಬೆಲೆಯೇರಿಕೆ. ಒಟ್ಟಾರೆ ಹಣದುಬ್ಬರ ಎಪ್ರಿಲ್ 2012ರಲ್ಲಿ ಮತ್ತೆ ವೇಗ ಪಡೆದಿದೆ, ಎರಡಂಕಿಯ ಹಣದುಬ್ಬರದ ಪ್ರವೃತ್ತಿಯನ್ನು ದೃಢಪಡಿಸಿದೆ. ಯುಪಿಎ-2 ಸರಕಾರ ತಾನು 'ಆಮ್ ಆದ್ಮಿ'ಗಾಗಿ ಎಷ್ಟೊಂದು - ಪ್ರಮುಖ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇನೆ ಎಂದು ಡಂಗುರ ಸಾರುತ್ತಿದ್ದರೂ, 'ಎಲ್ಲರನ್ನೂ ಒಳಗೊಳ್ಳುವ' ಬೆಳವಣಿಗೆಯ ಅದರ ಮಾತೆಲ್ಲಾ ಟೊಳ್ಳಾಗಿಯೇ ಉಳಿದಿದೆ.

ಇನ್ನೂ ಕೆಟ್ಟ ಸಂಗತಿಯೆಂದರೆ, ಜನತೆಯ ಮೇಲೆ ಇನ್ನಷ್ಟು ಹೊರೆಗಳು ಭವಿಷ್ಯದ ಗರ್ಭದಲ್ಲಿ ಇವೆ. ನಮ್ಮ ಆರ್ಥಿಕದ ಇಳಿಗತಿಯ ಬಗ್ಗೆ ಯುಪಿಎ-2 ರ ದೋಷಪೂರ್ಣ ಕಾರಣ-ವಿಶ್ಲೇಷಣೆ ಹಾಗೆಯೇ ಮುಂದುವರೆದಿದೆ. ಹೆಚ್ಚಿನ ಮಟ್ಟದ ಹೂಡಿಕೆಗಳನ್ನು ಆಕರ್ಷಿಸಿದರೆ ಬೆಳವಣಿಗೆ ದರಗಳನ್ನು ಮೇಲಕ್ಕೇರಿಸಬಹುದು ಎಂಬ ನವ-

ಪುಟ 14 ಕ್ಕೆ

"ದಂಧೆಕೋರರು, ಲೂಟಿಕೋರ ಕಂಪನಿಗಳಿಗಲ್ಲ... ದುಡಿಯುವ ಜನರಿಗೆ ಕೊಡಿ"

ಮೊಳಗಿತು ಭೂಮಿ ಹೋರಾಟದ ಕಹಳೆ

ಸರಕಾರ ರೈತರ ನುಂಗ್ಬೈತೋ ಈ ದೇಶದಾಗ ಬರಗಾಲ ಎದ್ದು ನಿಂತ್ಬೈತೋ...... .ಅಂತ ಜನರ ನೋವಿನಿಂದ ಹಾಡುವ ಹಾಡು ಕರ್ನಾಟಕ ರಾಜ್ಯ ಇಂದಿನ ಪರಿಸ್ಥಿತಿಗೇ ಹೇಳಿ ಮಾಡಿಸಿದಂತೆ ಇದೆ. ಸರ್ಕಾರದ ಅಧಿಕೃತ ಘೋಷಣೆಯು ಪ್ರಕಾರವೇ ರಾಜ್ಯದ ಮೂರನೇ ಎರಡು ಭಾಗದ ಪ್ರದೇಶ ಭೀಕರ ಬರಗಾಲದಲ್ಲಿ ಬೇಯುತ್ತಿದೆ.. ಚುನಾವಣೆಯ ಸಮಯದಲ್ಲಿ ...ನಾವು ರೈತಪರ ಸರ್ಕಾರ ಕೊಡುತ್ತೇವೆ.... ಭ್ರಷ್ಟಾಚಾರ ರಹಿತ ಸರ್ಕಾರಕ್ಕಾಗಿ ನಮ್ಮನ್ನು ಆರಿಸಿ.. ಎಂದು ಬೊಬ್ಬೆ ಹೊಡೆದು ರೈತರಿಂದ, ಜನರಿಂದ ಓಟು ಪಡೆದು ಅಧಿಕಾರಕ್ಕೇರಿದವರು ನಿಜಕ್ಕೂ ಈಗೇನು ಮಾಡುತ್ತಿದ್ದಾರೆ. ?? ಅವರಿಗೆ ಜನರ ಸಮಸ್ಯೆಗಳ ಬಗೆಗೆ ಖಬರೇ ಇಲ್ಲ. !!

ದೊಡ್ಡ ರೈತ ನಾಯಕ, ರೈತರ ಉದ್ಧಾರಕ ಎಂದು ಸ್ವಯಂ ತನಗೆ ತಾನೇ ಹಣೆ ಪಟ್ಟಿ ಹಚ್ಚಿಕೊಂಡಿರುವ ರಾಜ್ಯದ ಬಿಜೆಪಿಯ ಅತ್ಯುನ್ನತ ನಾಯಕರೊಬ್ಬರು ರೈತರ ಭೂಮಿಯನ್ನು ಮನಸೋ ಇಚ್ಛೆ ಕಬಳಿಸಿ.ಸಾಲು ಸಾಲು ಡಿನೋಟಿಫೈ ಹಗರಣಗಳನ್ನು ನಡೆಸಿ ಜೈಲು, ಬೇಲು ಎಂದು ಒದ್ದಾಡುತ್ತ, ಹೇಗಾದರೂ ತನ್ನನ್ನು ಕಾಪಾಡಿಕೊಳ್ಳಲು ನಾನು ಮುಖ್ಯಮಂತ್ರಿಯಾಗದಿದ್ದರೆ ಈ ಸರ್ಕಾರವನ್ನೂ ಉಳಿಯುಗೊಡುವುದಿಲ್ಲ, ನಾನೇ ಅಲ್ಲಿ ಕೂರಬೇಕು ಎಂದು ರಚ್ಚೆ ಹಿಡಿದು ಕೂತಿದ್ದಾರೆ. ಇನ್ನು ಬಿಜೆಪಿ ಸರ್ಕಾರದ ಸಚಿವರುಗಳು ತಮ್ಮ ಪಕ್ಷದ ಕಚೇರಿಯೊಳಗೆ ನಡೆಸ ಬೇಕಾದ ಕುರ್ಚಿ ಎಳೆದಾಟದ ಚರ್ಚೆಯನ್ನು ಬೀದಿಗೆ ತಂದು ಗುಂಪು ಗುಂಪುಗಳಾಗಿ ಪರಸ್ಪರ ಕಚ್ಚಾಟದಲ್ಲಿ ತೊಡಗಿದ್ದಾರೆ. ರಾಜ್ಯದ ಮುಖ್ಯ ಮಂತ್ರಿ ನಾನೇನು ಅದರಲ್ಲಿ ಕಡಿಮೆ ಇಲ್ಲ ಎಂದು ತಾವೂ ಕೈಜೋಡಿಸಿದ್ದಾರೆ.

ಆಳುವ ಜನರು ಇಂಥಾ ಘೋರ ಹೊಣೆಗೇಡಿತನದಲ್ಲಿ ಮುಳುಗಿರುವಾಗ ಇಂತಹ ಜನರಿಗೆ ಚಾಟಿ ಏಟು ಕೊಟ್ಟು ಜನರ ಬದುಕಿನ



ಕಡೆಗೆ ಕೊಂಚ ಕಣ್ಣು ಹಾಯಿಸಿ ಎಂದು ಎಚ್ಚರಿಕೆ ನೀಡಿದ ಒಂದು ಬೃಹತ್ ಹೋರಾಟ.ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ನಡೆಯಿತು.

ಕೂಲಿಕಾರರು, ಬಡ ರೈತರು ಬಂದರು ಬೆಂಗಳೂರಿಗೆ

ಹೌದು ಅದು ರೈತರ, ಕೂಲಿಕಾರರ , ಮನೆ ನಿವೇಶನ ಇಲ್ಲದ ಬಡವರ ಬೃಹತ್ ರ್‍ಯಾಲಿ. ಬೃಹತ್ ಸಮಾವೇಶ. ಅನಿರ್ಧಿಷ್ಟ ಮಹಾ ಧರಣ. ಇಂತಹ ಪ್ರಶ್ನೆಗಳ ಆಧಾರದಲ್ಲಿ ಇತ್ತೀಚಿನ ಕೆಲವು ದಶಕಗಳಲ್ಲಿ ನಡೆದ ಒಂದು ಗಮನಾರ್ಹ ಹೋರಾಟ ಎಂದರೂ ಸರಿಯೇ.

ಭೂಮಿ ಪ್ರಶ್ನೆ ಜನರ ಬದುಕನ್ನೇ ಬದಲಿಸ ಬಲ್ಲ ಒಂದು ಪ್ರಮುಖ ಪ್ರಶ್ನೆ. ಕರ್ನಾಟಕ ರಾಜ್ಯದಲ್ಲಿ ಭೂಮಿ ಪ್ರಶ್ನೆಯನ್ನು ಜನಪರವಾಗಿ ಇತ್ಯರ್ಥ ಮಾಡಬೇಕು. ರಾಜ್ಯದಲ್ಲಿ ಭೂಹೀನರಿಗೆ ಭೂಮಿ ನೀಡುವ ಭೂ ಸುಧಾರಣೆ ಎಂಬುದು ನನಸಾಗದ ಕನಸಾಗಿ ಬಾಕಿ ಉಳಿದಿದೆ. ಈಗಲಾದರೂ ಈ 'ತನ್ನದೆನ್ನುವ ತುಂಡು ಪಡೆದುಕೊಳ್ಳಬೇಕು' ಎನ್ನುವ ರಾಜ್ಯದ ಲಕ್ಷ ಲಕ್ಷ ಜನರ ಕನಸನ್ನು ನನಸು ಮಾಡಲೇ ಬೇಕು ಎಂದು ಬೃಹತ್ ಹೋರಾಟ ಆಗ್ರಹಿಸಿತು.

ಆ ಸೋಮವಾರ ಬೆಳಿಗ್ಗೆ ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಜನ ಜಾತ್ರೆ. ರೈತ ಮಹಿಳೆಯರು ಕೂಲಿಕಾರರು ಮಕ್ಕಳು ಪುರುಷರು. ಮಕ್ಕಳು ದುಡಿದು ದುಡಿದು ಹಣ್ಣಾಗಿ ಈಗಲೂ ದುಡಿಯುತ್ತಿರುವ ಮುದುಕರು, ಮುದುಕಿಯರು ದಂಡು ದಂಡಾಗಿ ಅಲ್ಲಿ ಬಂದು ಸೇರಿದ್ದರು.

ಎಲ್ಲರ ಕೈಯಲ್ಲಿ ಕೆಂಬಾವುಟ. 30–40 ವರ್ಷಗಳಿಂದ ಉಳುಮೆ ಮಾಡುತ್ತಿರುವ ನಮ್ಮ ಭೂಮಿಗೆ ಹಕ್ಕು ಪತ್ರ ಕೊಡಿ ಎಂದು ಆಗ್ರಹಿಸುವ ಫಲಕಗಳು. ರೈಲು, ಬಸ್ಸು, ಲಾರಿ ಸ್ವಂತ ವಾಹನ ಹಿಡಿದು ದೌಡಾಯಿಸಿ ಬಂದ ಜನರು ಒಂದೆಡೆ ನೆರೆದು ಜನರ ಸಮಸ್ಯೆಗಳನ್ನು ಮರೆತು ಕಣ್ಣು ಮುಚ್ಚಿ ಕುಳಿತಿರುವ ಬೇಜವಾಬ್ದಾರಿ ಸರ್ಕಾರದ ಕಿವಿ ಹಿಂಡಲು ಸಜ್ಜಾಗಿದ್ದರು. ಅವರು ಬೇಡಿಕೆ ಈಡೇರುವ ವರೆಗೆ ಇಲ್ಲಿ ತಳವೂರಲು ಸಿದ್ದವಾಗೇ ಬಂದಿದ್ದರು.



ಬಗರ್ ಹುಕುಂ ಸಾಗುವಳಿ ಮತ್ತು ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕೆ ಆಗ್ರಹಿಸಿ ಮತ್ತು ಮನೆ ನಿವೇಶನ ಇಲ್ಲದ ಬಡವರಿಗೆ ಮನೆ ನಿವೇಶನ ಒದಗಿಸಬೇಕೆಂದು ಒತ್ತಾಯಿಸಿ ಮೇ 21, 2012 ರಂದು ಸುಮಾರು ಹದಿನೈದು ಸಾವಿರಕ್ಕೂ ಅಧಿಕ ಬಡ ರೈತರು, ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿಯಲ್ಲಿ ಕೃಷಿ ನಡೆಸುತ್ತಿರುವ ಬೇಸಾಯಗಾರರರು, ಅಲ್ಲದೇ ಭೂ ಹೀನ ಕೃಷಿ ಕೂಲಿಕಾರರರು ಮತ್ತು ನಿವೇಶನ ರಹಿತರು ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ಬೃಹತ್ ರ್‍ಯಾಲಿ ನಡೆಸಿ ಅನಿರ್ದಿಷ್ಟಾವಧಿ ಧರಣ ಆರಂಭಿಸಿದರು.

ಬೃಹತ್ ಮೆರವಣಿಗೆ

ಬೆಂಗಳೂರು ನಗರದ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವನದವರೆಗೆ ಘೋಷಣೆ ಕೂಗುತ್ತಾ ಮೆರೆಯುತ್ತ ಬಂದ ರೈತ, ಕೂಲಿಕಾರರು ಸ್ವಾತಂತ್ರ್ಯ ಉದ್ಯಾನವನದಲ್ಲಿ ನೆರೆದು ಧರಣಿ ಆರಂಭಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ, ನಿವೇಶನ ರಹಿತರ ಹೋರಾಟ ಸಮಿತಿ ಮುಂತಾದ ಸಂಘಟನೆಗಳ ನೇತೃತ್ವದಲ್ಲಿ ಈ ಅಹೋ ರಾತ್ರಿ ಅನಿಧಿಷ್ಟ ಮಹಾ ಧರಣಿ ಭೂಹೀನ ಬಡವರ ದಶಕಗಳ ಕನಸಿನ ಸಾಕಾರದ ಛಲ ಹೊತ್ತು ಆರಂಭವಾಯಿತು.

ಹೋರಾಟದ ನಗಾರಿ ಭಾರಿಸುವ ಮೂಲಕ, ಹಾಗೂ ಹೋರಾಟದ ರಣಕಹಳೆ ಊದುವ ಮೂಲಕ ಅನಿರ್ಧಷ್ಟ ಮಹಾ ಧರಣ ಉದ್ಘಾಟನೆಗೊಂಡಿತು. ರೈತ ನಾಯಕರು , ಕೃಷಿಕೂಲಿಕಾರರ ನೇತಾರರು ಸಾಮೂಹಿಕವಾಗಿ ನಗಾರಿ ಬಾರಿಸಿದರು.

ಜಾಗತಿಕ ಹೂಡಿಕೆದಾರರ ಸಮ್ಮೇಳನ ನಡೆಸಿ ರೈತರ ಭೂಮಿಯನ್ನು ಖಾಸಗಿ ಕಂಪನಿಗಳಿಗೆ ನೀಡಲು ಹೊರಟಿರುವ ನೀತಿಗೆ ರೈತರು, ಕೂಲಿಕಾರರು ಧಿಕ್ಕಾರ ಕೂಗಿದರು. ಜಾಗತಿಕ ಹೂಡಿಕೆದಾರರ ಸಮಾವೇಶ ಕೈಬಿಡಬೇಕು ಎಂದು ಈ ಸಂದರ್ಭದಲ್ಲಿ ಆಗ್ರಹಿಸಲಾಯಿತು.

ಅದೇ ರೀತಿ ವ್ಯವಸಾಯವನ್ನು ರೈತರು-ಕೂಲಿಕಾರರು-ಕೈಕಸಬುದಾರರಿಂದ ಕಸಿದುಕೊಂಡು ಬಹುರಾಷ್ಟ್ರೀಯ ಕಂಪೆನಿಗಳಿಗೆ ವಹಿಸಿಕೊಡುವ ಕ್ರಮಗಳನ್ನು ತಕ್ಷಣವೇ ಕೈಬಿಡಬೇಕು ಮತ್ತು ರಾಜ್ಯದಾದ್ಯಂತ ಬಗರ್‌ಹುಕುಂ, ಗೈರಾಣು, ಪರಾಂಬೋಕ್, ಗೋಮಾಳ, ಅರಣ್ಯಭೂಮಿಯಲ್ಲಿ 50–60 ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುವ 25 ಲಕ್ಷಕ್ಕೂ ಅಧಿಕ ಬಡರೈತ-ಕೂಲಿಕಾರರು ಅಭಿವೃದ್ಧಿಪಡಿಸಿರುವ ಸುಮಾರು 70 ಲಕ್ಷ ಎಕರೆ ಜಮೀನುಗಳಿಂದ ಅವರನ್ನು ಒಕ್ಕಲೆಬ್ಬಿಸುವ ಹಾಗೂ ಅದನ್ನು ಭೂ ಬ್ಯಾಂಕ್‌ಗೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸ್ಪರ್ಧೆ ಮಾಡಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಕ್ರಮಗಳನ್ನು ಕೈಬಿಡಬೇಕು. ಇದರಲ್ಲಿ ಅಕ್ರಮ ಸಾಗುವಳಿ ಕಾನೂನಿನ ಪ್ರಕಾರ ಫಾರಂ-50 ಹಾಗೂ ಫಾರಂ 53 ರಲ್ಲಿ ಅರ್ಜಿ ಹಾಕಿ ತಿರಸ್ಕರಿಸಲ್ಪಟ್ಟ 12, 35, 380 ಸಾಗುದಾರರ ಹಾಗೂ 4,26,411 ವಿಲೇವಾರಿ ಮಾಡದ ಬಡವರ ಅರ್ಜಿಗಳು ಸೇರಿವೆ. ಹಾಗೂ ಸದರಿ ಸಾಗುವಳಿದಾರರಿಗೆ ಫಾರಂ-53 ಹಾಕಲು ಅವಕಾಶಗಳನ್ನು ಕಲ್ಪಿಸಬೇಕು. ಅಲ್ಲದೇ ರಾಜ್ಯದಾದ್ಯಂತ ಭೂ ವಿತರಣಾ ಸಮಿತಿಗಳನ್ನು ನೇಮಿಸಿ ಅವರಿಗೆ ಹಕ್ಕು ಪತ್ರ ನೀಡಬೇಕು.

ಅದೇ ರೀತಿ ರಾಜ್ಯದಾದ್ಯಂತ ಕೇವಲ ಪ್ರತಿದಿನ ತಲಾ ಆದಾಯ 12 ರಿಂದ 35 ರೂ ಹೊಂದಿರುವ 80 ಲಕ್ಷಕ್ಕೂ ಅಧಿಕವಾಗಿರುವ ಬಡರೈತರು-ಕೂಲಿಕಾರರು, ಹಮಾಲರು, ದೇವದಾಸಿ ಮಹಿಳೆಯರು, ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಕಾರ್ಯಕರ್ತರು, ಪಂಚಾಯತ್ ನೌಕರರು, ಮಸರಾ ಕಾರ್ಮಿಕರು ಮುಂತಾದವರಿಗೆ ಇಂತಹ ಕಡಿಮೆ ಆದಾಯದಲ್ಲಿ ಬದುಕುವುದೇ ಕಷ್ಟವಾಗಿರುವಾಗ ವಿಪರೀತ ಬೆಲೆ ಏರಿದ ಈ ದಿನದಲ್ಲಿ ಅವರಿಗೆಲ್ಲಾ ನಿವೇಶನ ಖರೀದಿಸಲಾಗದ ಸಂದರ್ಭ ಇರುವುದರಿಂದ ಅವರಿಗೆಲ್ಲಾ ಉಚಿತವಾಗಿ ಮನೆ ನಿವೇಶನ ದೊರೆಯುವಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ರಾಜ್ಯ ಸರ್ಕಾರವು ಕಳೆದ ಬಜೆಟ್ ಅಧಿವೇಶನದಲ್ಲಿ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ವಿಧೇಯಕ ಮಂಡಿಸಿದ್ದು, 'ವ್ಯವಸಾಯ' ಎಂಬ ಪದದ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿ, ವ್ಯವಸಾಯ ಆಧಾರಿತ ಕೈಗಾರಿಕೆಗಳನ್ನು ಅಂದರೆ, ಶೇಂಗಾ, ಸೂರ್ಯಕಾಂತಿ, ಮತ್ತಿತರೇ ಎಣ್ಣೆಕಾಳು ಆಧಾರಿತ ಎಣ್ಣೆಮಿಲ್ಲುಗಳು, ಭತ್ತ ಆಧಾರಿತ ರೈಸ್‌ಮಿಲ್ಲುಗಳು, ಕಬ್ಬು ಆಧಾರಿತ ಸಕ್ಕರೆ ಕಾರ್ಖಾನೆಗಳು, ಹತ್ತಿ ರೇಷ್ಮೆ ಆಧಾರಿತ ಜವಳಿ ಮಿಲ್ಲುಗಳು, ಬಾರೀ ಕೋಳಿಫಾರಂಗಳು, ತೊಗರಿ ಆಧಾರಿತ ದಾಲ್‌ಮಿಲ್ಲಗಳು, ಆಹಾರ ಪ್ರಕ್ರಿಯೆ ಘಟಕಗಳು ಬಿಸ್ಕತ್ ಫ್ಯಾಕ್ಟರಿಗಳು ಮುಂತಾಗಿ ಮೂಲ ಸೌಕರ್ಯದ ವ್ಯವಹಾರವನ್ನು ಮತ್ತು ವ್ಯವಸಾಯದ ವ್ಯಾಪಾರವನ್ನು ಸೇರಿಸಿ, ಅದೆಲ್ಲಾ ವ್ಯವಸಾಯ' ಎಂದು ಬದಲಾಯಿಸಲು ಹೊರಟಿದೆ. ಈ ಮೂಲಕ ಇಲ್ಲಿಯವರೆಗೆ ರೈತರಿಗೆ-ಕೂಲಿಕಾರರಿಗೆ-ಕಸಬುದಾರರಿಗೆ ಮಾತ್ರವೆ ಇದ್ದ ಕೃಷಿ ಭೂಮಿಯ ಮೇಲಿನ ಹಕ್ಕನ್ನು ಕೈಗಾರಿಕೆಗಳನ್ನು ನಡೆಸುವ ವ್ಯಾಪಾರಿ'ದ'ಲ್ಲಿ ತೊಡಗಿರುವವರನ್ನು ಬೇಸಾಯಗಾರನೆಂದು ಬದಲಾಯಿಸಿ, ಭೂ ಸುಧಾರಣಾ ಅಧಿನಿಯಮದ ಎಲ್ಲಾ ಲಾಭಗಳನ್ನು ಹೊಂದಲು ಅವಕಾಶ ನೀಡಲಾಗಿದೆ. ಮತ್ತು ಇಂತಹವರಿಗೆ, ಹೂ ಬೇಸಾಯ, ಹಣ್ಣು ಬೇಸಾಯ, ಮೀನುಗಾರಿಕೆ-ಕೃಷಿ ವ್ಯಾಪಾರ-ಮೂಲಸೌಕರ್ಯ-ವ್ಯವಸಾಯ ಆಧಾರಿತ ಕೈಗಾರಿಕೆ ಅಗ್ರಿಕಲ್ಚರ್ ಮತ್ತಿತರೇ ಹೆಸರಿನಲ್ಲಿ ಇವರು ಇವರ ಕುಟುಂಬ ಸಾವಿರಾರು ಎಕರೆ ಜಮೀನು ಹೊಂದಲು, ಅಲ್ಲದೇ ಈ ತಿದ್ದುಪಡಿಯು ಸಾವಿರಾರು ಎಕರೆ ಬಾಡಿಗೆಗೆ ಪಡೆಯಲು ಅವಕಾಶ ನೀಡುತ್ತದೆ.









ಇದರಿಂದಾಗಿ ವ್ಯವಸಾಯೇತರ ಆದಾಯ 3 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಜಮೀನು ಖರೀದಿಸಲು ಬಾರದೆಂಬ ನಿಯಮ ಗಾಳಿಗೆ ತೂರಲ್ಪಟ್ಟು, ರೈತರು-ಕೂಲಿಕಾರರು-ಕಸುಬುದಾರರಿಗೆ ಜಮೀನು ದೊರೆಯುವಂತೆ, ದೊಡ್ಡ ಬಂಡವಾಳದಾರರ ಕೈಯಲ್ಲಿ ಭೂಮಿ ಕೇಂದ್ರೀಕರಣವಾಗುವಂತೆ ಮಾಡುವ ಹುನ್ನಾರವು ತಿದ್ದುಪಡಿ ವಿಧೇಯಕ್ಕದ್ದಾಗಿದ್ದು, ಮುಂಗಡ ವ್ಯಾಪಾರ-ಗುತ್ತಿಗೆಕೃಷಿ ಸೇರಿದಲ್ಲಿ ರೈತ-ಕೂಲಿಕಾರರನ್ನು ವ್ಯವಸಾಯದಿಂದ ಹೊರ ಹಾಕುವ ಸಂಚನ್ನು ಹೊಂದಿದ್ದು ಅದನ್ನು ವಿಫಲಗೊಳಿಸಲು ಎಲ್ಲಾ ರೈತರು ಕೂಲಿಕಾರರು-ಪ್ರಗತಿಪರ ಸಂಘ ಸಂಸ್ಥೆಗಳು-ಶಕ್ತಿಗಳು-ವ್ಯಕ್ತಿಗಳು ಮುಂದಾಗುವಂತೆ ಕರ್ನಾಟಕ ಪ್ರಾಂತ ರೈತ ಸಂಘ-ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ರಾಜ್ಯ ಸಮಿತಿಗಳ ಮುಖಂಡರು ಈ ಸಂದರ್ಭದಲ್ಲಿ ಕರೆ ನೀಡಿದರು.

ಕರ್ನಾಟಕ ರಾಜ್ಯವನ್ನು ಕಳೆದ 2 ವರ್ಷಗಳಿಂದ ಬರಗಾಲ ಆವರಿಸಿದ್ದರೂ ಇಲ್ಲಿಯವರೆಗೆ ಯಾವುದೇ ಪರಿಹಾರದ ಕ್ರಮಕೈಗೊಳ್ಳದೇ ಅಧಿಕಾರದ ಕುರ್ಚಿಯ ಜಗಳವನ್ನು ಮುಂದೆ ಮಾಡಿ ಬರದ ನೋವನ್ನು ಮುಚ್ಚಿಹಾಕುವ ತಂತ್ರವನ್ನು ಸದಾನಂದಗೌಡರು ಮಾಡುತ್ತಾ ಬಂದಿದ್ದಾರೆ. ಬರಗಾಲ ಈಗ ಪ್ರಕೃತಿ ವಿಕೋಪವಾಗಿ ಉಳಿದಿಲ್ಲ, ಸರ್ಕಾರಗಳು ಶಾಶ್ವತ ಪರಿಹಾರಕ್ಕೆ ಅವಕಾಶಗಳಿದ್ದರೂ, ಅವುಗಳನ್ನು ಜಾರಿಗೊಳಿಸುತ್ತಿಲ್ಲ. ಕೂಲಿಕಾರರು-ರೈತರ ವಲಸೆ ತಡೆಯಲು ಉದ್ಯೋಗ ಖಾತ್ರಿ ಬಳಸಲು ಸಾಧ್ಯವಿದ್ದರೂ, ಉದ್ಯೋಗಖಾತ್ರಿ ಹಣವನ್ನು ಲೂಟಿ ಮಾಡಲು ಬಿಟ್ಟು ಜನರು ಗುಳೇ ಹೋಗುವಂತೆ ಮಾಡಲಾಗಿದೆ.

ಗೋವಿನ ಬಗ್ಗೆ ಭಾರೀ ರಕ್ಷಣೆಯ ಮಾತನಾಡುವ ಸರ್ಕಾರ ಈಗ ಮಾರಾಟವಾಗುತ್ತಿದ್ದು ಅದನ್ನು ತಡೆಯಲು ಕ್ರಮಗಳಿಲ್ಲ. ಇಂತಹ ಭೀಕರ ಬರಗಾಲದಲ್ಲೂ ರಾಜ್ಯ ಸರ್ಕಾರ 50% ಸಬ್ಸಿಡಿ ದರದಲ್ಲಿ ಮೇವು ಒದಗಿಸುವ ಲೇವಡಿ/ಉಡಾಫೆ ಮಾತುಗಳನ್ನಾಡುತ್ತಿದೆ. ಬಡರೈತ-ಕೂಲಿಕಾರರ ಸಾಲಮನ್ನಾ ಹಾಗೂ ಸಾಲಪಡೆಯುವವರ ರೈತ-ಕೂಲಿಕಾರರಿಗೆ ಬೆಳೆನಷ್ಟ ಪರಿಹಾರ ನೀಡುವ ಬಗ್ಗೆ ಮಾತನಾಡುತ್ತಿಲ್ಲ. ಈ ಬಗ್ಗೆ ತಕ್ಷಣವೇ ಕ್ರಮವಹಿಸಬೇಕು. ಮೇವಿನ ಬ್ಯಾಂಕ್ ತೆರೆಯಬೇಕು ಬರಗಾಲ ಕಾಮಗಾರಿ ಕೂಡಲೇ ಆರಂಭಿಸಬೇಕು. ಭ್ರಷ್ಟಾಚಾರ ತಡೆಲು ಸೂಕ್ತ ಕ್ರಮಗಳನ್ನು ವಹಿಸಬೇಕೆಂದು ಒತ್ತಾಯಿಸಲಾಯಿತು.



ಮಾತುಕತೆಗಾಗಿ ಜೂನ್ 15 ಕ್ಕೆ ಸಭೆ ನಿಗದಿ : ಮೇ 21ರ ಸಂಜೆ ಸರ್ಕಾರದ ಪರವಾಗಿ ಧರಣಿ ಸ್ಥಳಕ್ಕೆ ಆಗಮಿಸಿದ ವೈದ್ಯಕೀಯ ಶಿಕ್ಷಣ ಸಚಿವ ಎ. ರಾಮದಾಸ್, ಪೌರಾಡಳಿತ ಖಾತೆ ಸಚಿವ ಜಾರಕಿಹೋಳಿ ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಬೇಡಿಕೆ ಈಡೇರಿಕೆಯ ಭರವಸೆ ನೀಡಿದರು. ರೈತರ ಬೇಡಿಕೆಗಳ ಕುರಿತು ಚರ್ಚಿಸಲು ಜೂನ್ 15ರಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಂಬಂಧಿಸಿದ ಸಚಿವರು, ಅಧಿಕಾರಿಗಳ, ರೈತ, ಕೂಲಿಕಾರರ, ನಿವೇಶನ ರಹಿತರ ಪ್ರತಿನಿಧಿಗಳ, ಮುಖಂಡರ ಸಭೆ ಕರೆಯಲಾಗುವುದು ಎಂದು ಖಚಿತ ಭರವಸೆ ನೀಡಿದರು. ವಿಧಾನ ಪರಿಷತ್ ಚುನಾವಣೆ ಸಂಬಂಧವಾದ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿರುವುದರಿಂದ ಅದಕ್ಕೂ ಮೊದಲು ಬೇಡಿಕೆ ಈಡೇರಿಕೆ ಸಾಧ್ಯವಿಲ್ಲವೆಂಬ ಪರಿಸ್ಥಿತಿ ಹಾಗೂ ಸಚಿವರುಗಳ ಗಂಭೀರ ಭರವಸೆ ಮತ್ತು ಹೋರಾಟ ಮುಗಿಸಬೇಕೆಂಬ ಮನವಿ ಪರಿಗಣಿಸಿ ನಂತರ ಪ್ರತಿಭಟನೆಯನ್ನು ವಾಪಸ್ ಪಡೆಯಲಾಯಿತು.

ಬೃಹತ್ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕೃಷಿಕೂಲಿಕಾರರ ಸಂಘದ ಮುಖಂಡರಾದ ನಿತ್ಯಾನಂದ ಸ್ವಾಮಿ ವಹಿಸಿದ್ದರು. ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಉಪಾಧ್ಯಕ್ಷರಾದ ಭೀಮಸಿ ಕಲಾದಗಿ, ಯು.ಬಸವರಾಜ್, ವೆಂಕಟಾಚಲಯ್ಯ, ರಾಜ್ಯ ಸಹಕಾರ್ಯದರ್ಶಿಗಳಾದ ಶಾಂತಾರಾಮ ನಾಯಕ್ , ಚಂದ್ರತೇಜಸ್ವಿ, ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಭೀಮಶೆಟ್ಟಿ ಯಂಪಳ್ಳಿ, ಗೌರಮ್ಮ ಪಾಟೀಲ್, ಮುಂತಾದವರು ಹೋರಾಟದ ನೇತೃತ್ವ ವಹಿಸಿದ್ದರು. ಹೋರಾಟ ನಿರತ ರೈತ, ಕೂಲಿಕಾರರಿಗೆ ಆಹಾರ ನೀಡುವ ಮೂಲಕ ಚಳುವಳಿ ಸೌಹಾರ್ದ ಬೆಂಬಲ ನೀಡಿದ ಬೆಂಗಳೂರಿನ ಕಾರ್ಮಿಕರ ಪರವಾಗಿ ಸಿಐಟಿಯು ಕಾರ್ಮಿಕ ಸಂಘಟನೆಯ ಮುಖಂಡರಾದ ಗೋಪಾಲಗೌಡ, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್ ಮುಂತಾದವರಲ್ಲದೇ ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್ ಅವರು ಈ ರ್‍ಯಾಲಿಯಲ್ಲಿ ಹಾಜರಿದ್ದು ಬೆಂಬಲ ನೀಡಿದರು.

ಹಿಲರಿ ಕ್ಲಿಂಟನ್ ಭೇಟಿ – ಇರಾನ್ ತೈಲ

ಅಮೆರಿಕಾದ ಬೂಟು ನೆಕ್ಕುವ ತವಕದಲ್ಲಿ ಭಾರತ ಸರ್ಕಾರ

ಲೇಖನ : ಪ್ರಕಾಶ್ ಕಾರಟ್
ಕನ್ನಡಕ್ಕೆ : ಟಿ. ಸುರೇಂದ್ರ ರಾವ್

> ಇರಾನ್ ಪರಂಪರಾಗತವಾಗಿ ಭಾರತಕ್ಕೆ ತೈಲ ಪೂರೈಕೆ ಮಾಡುತ್ತಾ ಬಂದಿದೆ. ಬೇರೆಲ್ಲಾ ದೇಶಗಳಿಗಿಂತ ಇರಾನಿನಿಂದ ತೈಲ ಆಮದು ಅಗ್ಗವಾಗಿರುತ್ತದೆ. ಭಾರತಕ್ಕೆ ತೀರ ಅಗತ್ಯವಿರುವ ಅಗ್ಗದ ಅನಿಲವನ್ನು ಇರಾನ್ ಕೊಳವೆ ಮಾರ್ಗ ಪೂರೈಸಲು ಸಾಧ್ಯವಿತ್ತು. ಮಧ್ಯ ಏಶಿಯಾ ಮತ್ತು ಆಫ್ಘಾನಿಸ್ತಾನಕ್ಕೆ ಭಾರತದ ವ್ಯಾಪಾರ ಮತ್ತು ಸರಕು ಸಾಗಣೆಗೆ ಇರಾನ್ ಪ್ರವೇಶ ದ್ವಾರ. ಅಮೆರಿಕಾದ ಜತೆ ಇರಬೇಕೆಂಬ ಒಂದೇ ಒಂದು ಕಾರಣಕ್ಕೆ ಇವೆಲ್ಲಾ ಅನುಕೂಲಗಳನ್ನು ಭಾರತ ಬಲಿಕೊಡುತ್ತಿದೆ.

ಪ್ರಾಯಶಃ ಅಮೆರಿಕಾದ ರಾಜ್ಯ ಕಾರ್ಯದರ್ಶಿಯಾಗಿ ಹಿಲರಿ ಕ್ಲಿಂಟನ್‌ರವರ ಭಾರತ ಭೇಟಿ ಇದೇ ಕೊನೆ ಇರಬೇಕು. ಆದರೆ ಅವರಂತಿರುವ ಇಲ್ಲಿಂಯು ಸರ್ಕಾರಿ ಅಧ್ವರ್ಯುಗಳಿಗೆ ವಿದಾಯ ಹೇಳಲಂತೂ ಅವರು ಬಂದಿದ್ದಲ್ಲ. ಭಾರತ ಮತ್ತಿತರ ದೇಶಗಳಿಗೆ ಇರಾನ್ ತೈಲ ಪೂರೈಕೆಯನ್ನು ಬಲವಂತವಾಗಿ ನಿಲ್ಲಿಸಬೇಕೆಂಬ ಅಮೆರಿಕಾದ ಯೋಜನೆಗೆ ಭಾರತವನ್ನು ಒಪ್ಪಿಸುವುದೇ ಆ ಭೇಟಿಯ ಮುಖ್ಯ ಉದ್ದೇಶವಿದ್ದಂತಿದೆ.

ಅಮೆರಿಕಾವು ಇರಾನಿನ ವಿರುದ್ಧ ಸತತವಾಗಿ ದಿಗ್ಬಂಧನಗಳನ್ನು ವಿಧಿಸುತ್ತಾ ಬಂದಿದೆ. 2011 ರ ಕೊನೆಯ ಭಾಗದಲ್ಲಿ ಅಂಗೀಕರಿಸಿದ ದಿಗ್ಬಂಧನದ ಪ್ರಕಾರ ಇರಾನ್ ಸೆಂಟ್ರಲ್ ಬ್ಯಾಂಕ್ ಮೂಲಕ ಇರಾನ್ ತೈಲವನ್ನು ಕೊಳ್ಳುವ ದೇಶದೊಂದಿಗೆ ಅಮೆರಿಕಾದ ಯಾವ ಕಂಪನಿಯೂ ವ್ಯವಹಾರ ನಡೆಸಬಾರದು. ಇರಾನಿನ ತೈಲ ರಫ್ತನ್ನು ಹಾನಿಗೊಳಿಸುವುದರ ಮೂಲಕ ಇರಾನ್ ಸೆಂಟ್ರಲ್ ಬ್ಯಾಂಕ್ ಹಾಗೂ ಆರ್ಥಿಕತೆಯನ್ನು ಹಾಳುಗೆಡಹುವುದೇ ಈ ದಿಗ್ಬಂಧನದ ಮೂಲ ಉದ್ದೇಶ. ಯಾವ ದೇಶಗಳು ಇರಾನಿನಿಂದ ಆಮದು ಮಾಡಿಕೊಳ್ಳುವ ತೈಲದ ಪ್ರಮಾಣವನ್ನು ಗಣನೀಯವಾಗಿ ಕಡಿತಗೊಳಿಸುತ್ತವೆಯೋ ಅಂತಹ ದೇಶಗಳಿಗೆ ಈ ದಿಗ್ಬಂಧನದಿಂದ ವಿನಾಯಿತಿ ನೀಡುವ ಅಧಿಕಾರವನ್ನು ಅಮೆರಿಕಾದ ಕಾಂಗ್ರೆಸ್ ಅಂಗೀಕರಿಸಿದ ಈ ಕಾನೂನು ಅಧ್ಯಕ್ಷರಿಗೆ ನೀಡುತ್ತದೆ.

ಗಮನಿಸಬೇಕಾದ ಬಹು ಮುಖ್ಯ ಅಂಶವೇನೆಂದರೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ಇರಾನಿನ ಮೇಲೆ ವಿಧಿಸಿದ ದಿಗ್ಬಂಧನವು ಇರಾನಿನ ತೈಲ ಉದ್ದಿಮೆ ಅಥವಾ ತೈಲ ವ್ಯಾಪಾರಕ್ಕೆ ಅನ್ವಯವಾಗುವುದಿಲ್ಲ. ಅಮೆರಿಕಾ ಮತ್ತು ಐರೋಪ್ಯ ಒಕ್ಕೂಟವು ಇರಾನಿನ ತೈಲ ಉದ್ದಿಮೆಯ ಮೇಲೆ ಕಣ್ಣಿಟ್ಟು ದಿಗ್ಬಂಧನವನ್ನು ಹೇರಿವೆ.

ಇರಾನಿನಿಂದ ತೈಲ ಆಮದು ಮಾಡಿಕೊಳ್ಳುತ್ತಿರುವ ದೊಡ್ಡ ದೇಶಗಳಾದ ಭಾರತ, ಚೀನಾ, ಜಪಾನ್ ಹಾಗೂ ದಕ್ಷಿಣ ಕೊರಿಯಾ ದೇಶಗಳು ತೈಲ ಆಮದನ್ನು ಕಡಿಮೆ ಮಾಡುವಂತೆ ಅಮೆರಿಕಾ ವಿಪರೀತ ಒತ್ತಾಯ ಹೇರುತ್ತಿದೆ.

ಈ ವರ್ಷದ ಮಾರ್ಚ್‌ನಲ್ಲಿ, ಇರಾನಿನಿಂದ ತೈಲ ಆಮದನ್ನು ಕಡಿತಗೊಳಿಸಲು ಕ್ರಮ ತೆಗೆದುಕೊಂಡಿರುವ ಜಪಾನ್ ಮತ್ತು ಯುರೋಪಿನ ಹತ್ತು ದೇಶಗಳಿಗೆ ದಿಗ್ಬಂಧನದಿಂದ ವಿನಾಯಿತಿ ನೀಡಲು ಒಬಾಮ ಸರ್ಕಾರ ಮುಂದಾಗಿದೆ. ಯೂರೋಪಿಯನ್ ಒಕ್ಕೂಟವು ಈ ವರ್ಷದ ಜನವರಿಯಲ್ಲಿ ಇರಾನಿನೊಂದಿಗಿನ ತೈಲ ಒಪ್ಪಂದಗಳನ್ನು ನಿಷೇಧ ಮಾಡಿದೆ. ಅದಲ್ಲದೆ ಈಗಿರುವ ತೈಲ ಒಪ್ಪಂದಗಳು ಜುಲೈ ಒಂದರಿಂದ ಸ್ಥಗಿತಗೊಳ್ಳಲಿವೆ ಎಂದೂ ಪ್ರಕಟಿಸಿದೆ.

ಇರಾನ್ ತೈಲ ಕೊಳ್ಳುವ ಪ್ರಮುಖ ದೇಶಗಳಲ್ಲಿ ಭಾರತವೂ ಒಂದು. ಇರಾನಿನಿಂದ ತೈಲ ಖರೀದಿಯನ್ನು ಕಡಿತಗೊಳಿಸಬೇಕೆಂದು ಅಮೆರಿಕಾವು ಕಳೆದ ಎರಡು ವರ್ಷಗಳಿಂದ ಭಾರತದ ಮೇಲೆ ಒತ್ತಡ ಹಾಕುತ್ತಿದೆ. ಭಾರತವು 2010 ರಲ್ಲಿ ತನ್ನ ಅಗತ್ಯದ ಶೇಕಡಾ 12 ರಷ್ಟು ತೈಲವನ್ನು ಇರಾನಿನಿಂದ ಆಮದುಮಾಡಿಕೊಂಡಿದೆ. ಪ್ರತಿ ವರ್ಷವೂ 7.1 ಮಿಲಿಯನ್ ಟನ್ನುಗಳ ತೈಲವನ್ನು ಇರಾನಿನಿಂದ ತರಿಸಿಕೊಳ್ಳುವ ಮೂಲಕ ಮಂಗಳೂರು ತೈಲ ಸಂಸ್ಕರಣಾ ಕೇಂದ್ರವು(ಮಂಗಳೂರು ರಿಫೈನರೀಸ್) ಅತ್ಯಂತ ದೊಡ್ಡ ಗ್ರಾಹಕನಾಗಿ ಹೊರಹೊಮ್ಮಿದೆ.

ಒಂದೊಂದಾಗಿ ಅಮೆರಿಕಾದ ಒತ್ತಡಕ್ಕೆ ಬಲಿಬೀಳುತ್ತಿರುವ ಮನಮೋಹನ್ ಸಿಂಗ್ ಸರ್ಕಾರವು ಅನೈತಿಕ ದಿಗ್ಬಂಧನಕ್ಕೆ ಒಳಗಾಗುತ್ತಿರುವುದು ಶೋಚನೀಯ ಸಂಗತಿ. ಇರಾನಿನ ಬ್ಯಾಂಕ್‌ಗಳು ಮತ್ತು ಅದರ ತೈಲೋದ್ಯಮದೊಂದಿಗೆ ಅಂತರ್‍ರಾಷ್ಟ್ರೀಯ ಕಂಪನಿಗಳು ವ್ಯವಹಾರ ನಡೆಸುವುದನ್ನು ನಿಷೇಧಿಸುವ ಅಮೆರಿಕಾದ ಕಾನೂನನ್ನು, ಇರಾನಿನೊಂದಿಗೆ ಹಣಕಾಸು ವ್ಯವಹಾರಕ್ಕಾಗಿ ಏಶಿಯನ್ ಕ್ಲಿಯರಿಂಗ್ ಯೂನಿಯನ್ ಬಳಸುವ ಭಾರತೀಯ ಕಂಪನಿಗಳು ಉಲ್ಲಂಘಿಸುತ್ತಿವೆ ಎಂದು 2010 ರಲ್ಲಿ ಅಮೆರಿಕಾವು ಎಚ್ಚರಿಕೆ ನೀಡಿದೆ. ಇದರಿಂದಾಗಿ, ಇರಾನಿನೊಂದಿಗೆ ಏಶಿಯನ್ ಕ್ಲಿಯರಿಂಗ್ ಯೂನಿಯನ್ ಮೂಲಕ ನಡೆಸುವ ವ್ಯವಹಾರಕ್ಕೆ ಭಾರತದ ರಿಸರ್ವ್ ಬ್ಯಾಂಕ್ ನಿರ್ಬಂಧ ಹಾಕಿತು. ತದನಂತರ, ತೈಲ ಪೂರೈಕೆಗಾಗಿ ಹಣ ಸಂದಾಯವನ್ನು ಮೂರನೇ ದೇಶಗಳ ಮೂಲಕ ಮಾಡುವುದರಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಭಾರತ ಮತ್ತು ಇರಾನ್ ದೇಶಗಳು ಪ್ರಯತ್ನಪಟ್ಟವು. ಮೊದಲು ಜರ್ಮನಿಯ ಒಂದು ಬ್ಯಾಂಕ್ ವ್ಯವಹಾರ ನಡೆಸಿತು. ಆದರೆ ಅಮೆರಿಕಾದ ಒತ್ತಡದಿಂದಾಗಿ ಜರ್ಮನಿಯ ಆಡಳಿತವೂ ಇದಕ್ಕೆ ತಡೆ ಒಡ್ಡಿತು. ಆ ನಂತರ ಟರ್ಕಿಯ ಬ್ಯಾಕೊಂದನ್ನು ಆಯ್ಕೆ ಮಾಡಲಾಯಿತು. ಆದರೆ ಆ ವ್ಯವಸ್ಥೆಯನ್ನೂ ಕೈಬಿಡಬೇಕಾಯಿತು.

ಈಗ, ಭಾರತದ ಬ್ಯಾಂಕಾಗಿರುವ ಯೂನಿಯನ್ ಬ್ಯಾಂಕನ್ನು ನಿಯೋಜಿಸಲಾಗಿದ್ದು ರೂಪಾಯಿ ಹಣದಲ್ಲೇ ಭಾರತೀಯ ತೈಲ ಕಂಪನಿಗಳು ಸಂದಾಯ ಮಾಡುತ್ತಿವೆ. ಇದಲ್ಲದೆ, ಇರಾನಿನ ಪರ್ಶಿಯನ್ ಎಂಬ ಖಾಸಗಿ ಬ್ಯಾಂಕ್ ಶಾಖೆಯೊಂದನ್ನು ಮುಂಬಯಿಯಲ್ಲಿ ತೆರೆಯಲು ಭಾರತ ಸರ್ಕಾರ ಅನುಮತಿ ನೀಡಲಿಲ್ಲ. ವ್ಯಾಪಾರ ಮತ್ತು ಹಣ ಸಂದಾಯಕ್ಕೆ ಅಂಥದೊಂದು ಬ್ಯಾಂಕ್ ಶಾಖೆ ಸಹಾಯಕವಾಗಬಹುದಿತ್ತು.



ಅಮೆರಿಕಾದ ಪಟ್ಟುಬಿಡದ ಒತ್ತಡದಿಂದಾಗಿ, ಇರಾನಿನ ತೈಲ ಆಮದು ಮಾಡಿ ಕೊಳ್ಳುತ್ತಿದ್ದ ತೈಲ ಕಂಪನಿಗಳು ತೈಲ ಖರೀದಿ ಕಡಿತಗೊಳಿಸ ಬೇಕೆಂದು ಭಾರತ ಸರ್ಕಾರ ನಿರ್ದೇಶಿಸಿತು. ಇದರ ಪರಿಣಾಮವಾಗಿ ಮಂಗಳೂರು ರಿಫೈನರೀಸ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಗಳು ತಮ್ಮ ತೈಲ ಕೋರಿಕೆಯನ್ನು ಕಡಿತಗೊಳಿಸಿದವು. ಎಸ್ಸಾರ್ ಕಂಪನಿ ಕೂಡ ತನ್ನ ಕೋರಿಕೆಯನ್ನು ಕಡಿತಮಾಡಿತು.

ಇತ್ತ ಈ ಬೆಳವಣಿಗೆಗಳು ಆಗುತ್ತಿರುವಾಗಲೇ, ಅತ್ತ ಮನಮೋಹನ್ ಸಿಂಗ್ ಸರ್ಕಾರವು, ಭಾರತದ ಇಂಧನ ಅಗತ್ಯತೆಗಳಿಗೆ ಇರಾನ್ ತೈಲ ಅವಶ್ಯಕ ಎಂಬ ಅಧಿಕೃತ ನಿಲುವನ್ನು ತಾಳಿತು. ಇರಾನಿನಿಂದ ತೈಲ ಪೂರೈಕೆಯಲ್ಲಿ ಕಡಿತ ಮಾಡಲು ಸಾಧ್ಯವಿಲ್ಲ ಎಂದು ಅಮೆರಿಕಾಕ್ಕೆ ಭೇಟಿ ನೀಡಿದ್ದ ಹಣಕಾಸು ಸಚಿವ ಪ್ರಣಬ್ ಮುಖರ್ಜಿಯವರು ಘೋಷಿಸಿದರು.

ಆದರೆ ನಿಜ ಸಂಗತಿ ಬೇರೆಯೇ ಇದೆ. 2008–09ರಲ್ಲಿ ಇರಾನಿನಿಂದ ಭಾರತದ ತೈಲ ಆಮದು 21.8 ಮಿಲಿಯನ್ ಟನ್ ಇದ್ದದ್ದು 2010–11ರಲ್ಲಿ 18.5 ಮಿಲಿಯನ್ ಟನ್ನಿಗೆ ಇಳಿದು, 2011–12ರಲ್ಲಿ 14 ಮಿಲಿಯನ್ ಟನ್ನಿಗೆ ಕುಸಿಯಿತು. ಹಿಂದಿನ ವರ್ಷಕ್ಕೆ ಹೋಲಿಸಿದರೆ 2011–12ರ ಆಮದು ಶೇಕಡಾ 20 ರಷ್ಟು ಇಳಿದಿದೆ.


ಭಾರತವು ಇರಾನಿನ ತೈಲವಿಲ್ಲದೆ ಇರಲು ಸಾಧ್ಯವೇ ಇಲ್ಲ ಎಂಬ ಅಧಿಕೃತ ನಿಲುವನ್ನು ಭಾರತ ಸರ್ಕಾರ ಘೋಷಿಸುತ್ತಿರುವ ಸಮಯದಲ್ಲೇ ಇರಾನಿನ ತೈಲ ಆಮದನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಭರವಸೆಯನ್ನು ಅಮೆರಿಕಾಕ್ಕೆ ನೀಡುತ್ತಿದೆ.

ಈ ಹಿನ್ನೆಲೆಯಲ್ಲೇ, ಇರಾನಿನಿಂದ ತೈಲ ಖರೀದಿಯಲ್ಲಿ ಕಡಿತ ಮಾಡಬೇಕೆಂಬ ಒತ್ತಾಯಕ್ಕೆ ಭಾರತ ಸ್ಪಂದಿಸುತ್ತಿದೆ ಎಂದು ಅಮೆರಿಕಾದ ಕಾಂಗ್ರೆಸ್ ಸಮಿತಿಗೆ ಹಿಲರಿ ಕ್ಲಿಂಟನ್ ಮಾರ್ಚ್‌ನಲ್ಲೇ ಹೇಳಿದ್ದರು. ಕೊಲ್ಕತ್ತಾಕ್ಕೆ ಈ ಬಾರಿ ಭೇಟಿ ನೀಡಿದ ಸಮಯದಲ್ಲಿ, ಇರಾನಿನಿಂದ ತೈಲ ಆಮದಿನಲ್ಲಿ ಕಡಿತ ಮಾಡುತ್ತಿರುವ ಭಾರತದ ಕ್ರಮವನ್ನು ಹಿಲರಿ ಮೆಚ್ಚಿ ಮಾತನಾಡಿದ್ದರು. ದೆಹಲಿಯಲ್ಲಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಜತೆ ಮಾತನಾಡಿದ ನಂತರ ಹಿಲರಿ ಕ್ಲಿಂಟನ್ "ಇರಾನಿನಿಂದ ತೈಲ ಖರೀದಿಯಲ್ಲಿ ಕಡಿತ ಮಾಡುವ ನಿಟ್ಟಿನಲ್ಲಿ ಭಾರತದ ಪ್ರಗತಿಯನ್ನು ಸ್ವಾಗತಿಸುತ್ತೇನೆ ಮತ್ತು ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತಾರೆಂಬ ಭರವಸೆ ಇದೆ . . ." ಎಂದು ಹೇಳಿಕೆ ನೀಡಿದರು.

ಹಿಲರಿ ಕ್ಲಿಂಟನ್ ದೆಹಲಿಯಲ್ಲಿ ಇರುವಾಗಲೇ, ಅಮೆರಿಕಾ ಕಾಂಗ್ರೆಸ್ಸಿನ ಸಂಶೋಧನಾ ಸಂಸ್ಥೆಯಾಗಿರುವ ಕಾಂಗ್ರೆಸ್ ಸಂಶೋಧನಾ ಕೇಂದ್ರದ ವರದಿಯೊಂದು ಪ್ರಕಟವಾಗಿತ್ತು. 2008ರಲ್ಲಿ ಶೇಕಡಾ 16ರಷ್ಟಿದ್ದ ಇರಾನ್ ತೈಲ ಆಮದನ್ನು ಪ್ರಸ್ತುತ ಶೇಕಡಾ 10ಕ್ಕೆ ಇಳಿಸುವುದರ ಮೂಲಕ ಭಾರತವು ಗಣನೀಯವಾಗಿ ಕಡಿತ ಮಾಡಿದೆ ಎಂದು ಆ ವರದಿಯಲ್ಲಿ ಹೇಳಲಾಗಿತ್ತು.

ಇರಾನ್‌ನೊಂದಿಗಿನ ಭಾರತದ ಮುಂದುವರಿದ ತೈಲ ವ್ಯಾಪಾರ ಮತ್ತು ಸಂಬಂಧಗಳ ಬಗ್ಗೆ ಅಮೆರಿಕಾದ ಮಾಧ್ಯಮಗಳು ಹಾಗೂ ಕಾಂಗ್ರೆಸ್ ಸದಸ್ಯರು ಮಾಡಿದ ಟೀಕೆಗೆ ವಾಷಿಂಗ್‌ಟನ್ನಿನಲ್ಲಿರುವ ಭಾರತದ ರಾಯಭಾರ ಕಛೇರಿ ನೀಡಿದ ಪ್ರತಿಕ್ರಿಯೆಯು ಅಮೆರಿಕಾದ ಸತತ ಒತ್ತಡದಿಂದಾಗಿ ಸರ್ಕಾರ ಹೇಗೆ ಶಕ್ತಿಗುಂದುತ್ತಿದೆ ಎಂಬುದನ್ನು ತೋರುತ್ತದೆ. ವಾಷಿಂಗ್‌ಟನ್ನಿನಲ್ಲಿರುವ ಭಾರತದ ರಾಯಭಾರ ಕಛೇರಿಯು ಮಾರ್ಚ್ 7, 2012ರಂದು ಹೇಳಿಕೆ ನೀಡಿ ". . ಈ ವರ್ಷದ ಜನವರಿಯಲ್ಲಿ ಇರಾನ್ ತೈಲದ ಮಾಸಿಕ ಎತ್ತುವರಿ ಹೆಚ್ಚಾಗಿದೆಯೆಂಬ ವರದಿಯೊಂದರಿಂದಲೇ ಭಾರತದ ಇರಾನ್ ತೈಲ ಆಮದು ಒಟ್ಟಾರೆಯಾಗಿ ಹೆಚ್ಚಾಗುತ್ತಿದೆ ಎಂಬ ಮಾಧ್ಯಮಗಳ ವರದಿ ತಪ್ಪುಗ್ರಹಿಕೆಯದ್ದು; ಭಾರತದ ಒಟ್ಟು ತೈಲ ಆಮದಿನ ಪ್ರಮಾಣಕ್ಕೆ ಹೋಲಿಸಿದರೆ ಇರಾನಿನಿಂದ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದ ಪ್ರಮಾಣವು ಇಳಿಕೆಯಾಗುತ್ತಿದೆಯೆಂಬ ವಾಸ್ತವಕ್ಕೆ

–ಪುಟ 15 ಕ್ಕೆ



ಚಿಂತನ

ಆರ್. ರಾಮಕೃಷ್ಣ

ರಾಜ್ಯದಲ್ಲಿ ಬಲಿತು ನಿಂತಿರುವ ನಾನಾ ಮಾಫಿಯಾಗಳು ಮತ್ತು ನಡುಬೀದಿಯಲ್ಲಿ ರಕ್ತದ ಓಕುಳಿ, ಕಾರಂಜಿಗಳು

ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಯಾವ ದಿಕ್ಕಿನತ್ತ ಸಾಗುತ್ತಿದೆ ? ನಿಜಕ್ಕೂ ಇಲ್ಲಿ ಏನು ನಡೆಯುತ್ತಿದೆ ? ಎಂಬುದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರಿಗೂ ಆತಂಕಕಾರಿಯಾದ ವಿಚಾರವಾಗಿದೆ. ಪ್ರಮಾಣಿಕರಾದ ಅಧಿಕಾರಿಗಳ ಜೀವಕ್ಕೆ ಇಲ್ಲಿ ರಕ್ಷಣೆ ಇಲ್ಲ. ಭ್ರಷ್ಟಾಚಾರ, ಹಗರಣಗಳ ಬಗೆಗೆ ಹೋರಾಟ ನಡೆಸುವವರನ್ನು, ಅಕ್ರಮಗಳನ್ನು ಪ್ರಶ್ನಿಸುವವರನ್ನು ನಡು ಹಗಲಿನಲ್ಲಿ, ನಡುಬೀದಿಗಳಲ್ಲಿ ಕಗ್ಗೊಲೆ ಮಾಡಲಾಗುತ್ತಿದೆ. ಇಲ್ಲವೆ ಪ್ರಾಣ ಬೆದರಿಕೆ ಹಾಕಿ ಹೋರಾಟಗಾರರನ್ನು ಬೆದರಿಸುವ ಕೆಲಸಗಳು ಯಾವ ಎಗ್ಗಿಲ್ಲದೇ ನಡೆಯುತ್ತಿವೆ.

ಮದನ್ ನಾಯಕ್ ಹತ್ಯೆ

ಮದನ ನಾಯಕ್ ಎಂಬ ಅರಣ್ಯ ಸಂರಕ್ಷಣಾಧಿಕಾರಿ ದಾಂಡೇಲಿಯಲ್ಲಿ ಇತ್ತೀಚೆಗೆ ದುಷ್ಕರ್ಮಿಗಳ ಹಲ್ಲೆಗೆ ಗುರಿಯಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಖಾಸಗಿ ರೆಸಾರ್ಟ್ ಒಂದರೊಳಗಿನಿಂದ ಸಮೀಪದ ಸಾರ್ವಜನಿಕ ಜಲಾಶಯದ ಮೊಸಳೆಗಳನ್ನು ಆಕರ್ಷಿಸಲು ಮಾಂಸ, ಮೂಳೆಗಳನ್ನು ಹಾಕುವುದು, ಜನರಿಂದ ಹಣ ವಸೂಲಿ ಮಾಡುವುದು ಸೇರಿದಂತೆ ಹಲವು ಗಂಭೀರವಾದ ಅಕ್ರಮ ವ್ಯವಹಾರ ನಡೆಸುವುದನ್ನು ಅರಣ್ಯ ಕಾನೂನುಗಳ ಉಲ್ಲಂಘನೆಯನ್ನು ಆಕ್ಷೇಪಿಸಿದ್ದೇ ಅವರ ಮೇಲಿನ ಹಲ್ಲೆಗೆ ಕಾರಣವಾಗಿದೆ ಎಂದು ವರದಿಯಾಗಿದೆ. ಈ ಅಧಿಕಾರಿಗಳು ಅಕ್ರಮ, ಭ್ರಷ್ಟಾಚಾರಗಳ ವಿರುದ್ಧ ಇದ್ದವರಾಗಿದ್ದು ಪ್ರಮಾಣಿಕರಾಗಿದ್ದರು ಎಂದು ಜನಾಭಿಪ್ರಾಯ ಹೇಳುತ್ತಿದೆ. ಹಲ್ಲೆಗೆ ಗುರಿಯಾದ ಮದನ ನಾಯಕರನ್ನು ಆಸ್ಪತ್ರೆಗೆ ಸೇರಿಸದೆ ಅವರ ಮೇಲೇ ಪ್ರಕರಣ ದಾಖಲಿಸುವ ಬೆದರಿಕೆ ಹಾಕಿ ಪೋಲಿಸ್ ಠಾಣೆಯಲ್ಲಿಯೇ ಮೂರು ಗಂಟೆಗಳ ಕಾಲ ಕೂರಿಸಿದ್ದು ಅವರ ಸಾವಿಗೆ ಕಾರಣವಾಗಿದೆ.

ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಉಪ ನಿರ್ದೇಶಕ ಕೆಎಎಸ್ ಅಧಿಕಾರಿ ಎಸ್.ಪಿ. ಮಹಾಂತೇಶ್. ಮೇ 15, 2012 ರಂದು ಬೆಂಗಳೂರು ನಗರದ ಹೃದಯ ಭಾಗದಲ್ಲಿ ವಿಧಾನ ಸೌಧಕ್ಕೆ ಕೂಗಳತೆ ದೂರದಲ್ಲಿ ವಿಟ್ರಿಯಾ ಹೋಟೆಲ್ ಬಳಿ ದುಷ್ಕರ್ಮಿಗಳ ಮಾರಕಾಸ್ತ್ರಗಳ ದಾಳಿಗೆ ಗುರಿಯಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಅವರು ಬೆಮೆಲ್ ನೌಕರರ ಸಹಕಾರ ಸಂಘದಲ್ಲಿ ಬೆಮೆಲ್‌ನ ಉನ್ನತಾಧಿಕಾರಿಗಳು ನಡೆಸಿರುವ ಅಕ್ರಮ ನಿವೇಶನ ಹಂಚಿಕೆ ಪ್ರಕರಣ ಸೇರಿದಂತೆ ಹಲವು ಸಹಕಾರ ಸಂಘಗಳ ಅಕ್ರಮ, ಭ್ರಷ್ಟಾಚಾರಗಳ ಬಗೆಗೆ ತನಿಖೆಯಲ್ಲಿ ತೊಡಗಿಯಾಗಿದ್ದ ಅಧಿಕಾರಿ. ಕೊಲೆಯ ಕಾರಣ ತನಿಖೆಯಿಂದ ಹೊರಬರಬೇಕಿದೆ. ಆದರೆ ರಾಜ್ಯದ ಆಡಳಿತದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರು ಯಾರಾರೂ ಕೂಡ ಮಹಂತೇಶ್‌ರ ಮೇಲೆ ಹಲ್ಲೆಯಾದ ಮೇಲ ಆಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ, ತನಿಖೆಗೆ ಸಂಬಂಧಿಸಿದಂತೆ ಅಗತ್ಯ ತುರ್ತು ಕ್ರಮ ವಹಿಸಲಿಲ್ಲ ಎಂಬುದು ಹಲವು ಸಂಶಯಗಳಿಗೆ ಕಾರಣವಾಗಿದೆ.

ಮಾಫಿಯಾ ಜಾಲ ಮತ್ತು ಬೆದರಿಕೆಗಳು

ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ವಿರುದ್ಧ ದಿಟ್ಟ ಕಾನೂನು ಹೋರಾಟ ನಡೆಸುತ್ತಿರುವ ಸಮಾಜ ಪರಿವರ್ತನಾ ಸಂಸ್ಥೆಯ ಹಿರೇಮಠರಿಗೆ ಬೆದರಿಕೆ ಕರೆಗಳು ಬಂದಿರುವ ಬಗೆಗೆ ಸ್ವತಃ ಹಿರೇಮಠ್ ಬಹಿರಂಗ ಪಡಿಸಿದ್ದಾರೆ. ಕೆಲವರು ಅವರಿಗೆ ಕರೆ ಮಾಡಿ ಬಿ.ಎಸ್. ಯಡಿಯೂರಪ್ಪನವರ ಪರವಹಿಸಿ ಮಾತನಾಡಿ ಬೆದರಿಸಿದರಂತೆ. ಮಾಜಿ ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆಯವ



ಫೋನ್ ಕದ್ದಾಲಿಕೆ ನಡೆದದ್ದು, ಮತ್ತು ಲೋಕಾಯುಕ್ತ ತನಿಖಾ ತಂಡದ ಯು.ವಿ.ಸಿಂಗ್‌ರಿಗೆ ಬೆದರಿಕೆಗಳನ್ನು ಹಾಕಿದ್ದು ಇವೆಲ್ಲಾ ಹಳೆಯ ವಿಷಯ.

ಕರ್ನಾಟಕ ರಾಜ್ಯದಲ್ಲಿ ಲೋಕಾಯುಕ್ತರ ನೇಮಕವೂ ಆಗಲಿಲ್ಲ. ಉಪ ಲೋಕಾಯುಕ್ತರ ಸ್ಥಾನವೂ ಖಾಲಿ. ಗಣಿ ಅಕ್ರಮಗಳ ಕುರಿತ ಲೋಕಾಯುಕ್ತ ವರದಿಯ ಮೇಲೆ ಯಾವುದೇ ಕ್ರಮ ಇಲ್ಲ. ಇವೆಲ್ಲದರ ಅರ್ಥವೇನು ? ಸರ್ಕಾರದ ಇಂಥಾ ಧೋರಣೆ ಲೂಟಿಕೋರ ಕ್ರಿಮಿನಲ್‌ಗಳಿಗೆ ಯಾವ ಸಂದೇಶವನ್ನುಕೊಡುತ್ತದೆ. ??

ಸರ್ಕಾರ ಗಣಿ ಮಾಫಿಯಾ, ಭೂದಂಧೆಕೋರ ಮಾಫಿಯಾ, ಮರಳು ಮಾಫಿಯಾ, ಅಕ್ರಮ ರೆಸಾರ್ಟ್ ಮಾಫಿಯಾ ಸೇರಿದಂತೆ ನಾನಾ ಮಾಫಿಯಾಗಳೊಂದಿಗೆ ಕೈ ಜೋಡಿಸಿ ಶಾಮಿಲಾಗಿ ಮಾಫಿಯಾಗಳ ಅಕ್ರಮಗಳ, ಲೂಟಿಗೆ ರಕ್ಷಣೆ ನೀಡುತ್ತಾ ಬರುತ್ತಿದೆ ಎಂಬುದು ಸ್ಪಷ್ಟವಾಗಿದೆ. ಈ ಮಾತಿನ ಬಗೆಗೆ ಯಾರಿಗಾದರೂ ಅನುಮಾನವಿದ್ದರೆ ಈ ಮುಂದಿನ ಪ್ರಸಂಗವನ್ನು ನೋಡಿ ಅದರ ಅರ್ಥ ಏನೆಂದು ಹೇಳಲಿ. ದಕಿಣ ಕನ್ನಡ ಜಿಲ್ಲೆಯ ಕದ್ರಿ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕಿರಣ ಕುಮಾರ್ ಒಬ್ಬ 'ಅಪ್ರತಿಮ ಪರಾಕ್ರಮಿ'. ಈ ಮನುಷ್ಯ 'ಅಲೋಪೆರಾ ಮತ್ತು ಮೂನ್‌ಶೈನ್' ಎಂಬ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದ ಮಹಿಳೆಯರು 'ಮಾಮೂಲಿ'ನಲ್ಲಿ ಕೊಡಲಿಲ್ಲ ಎಂಬ ಕಾರಣಕ್ಕೆ ಪರಿಶೀಲನೆಯ ನೆಪದಲ್ಲಿ ಪಾರ್ಲರ್‌ಗೆ ತಂಡದೊಂದಿಗೆ ನುಗ್ಗಿ, ತಾನೇ ಕಾಂಡೋಮ್ ಇಟ್ಟು ಆ ಮೇಲೆ ಆ ಮಹಿಳೆಯರು ವೇಶ್ಯಾವಾಟಿಕೆ ನಡೆಸುತ್ತಿದ್ದಾರೆಂದು ಪ್ರಕರಣ ದಾಖಲಿಸಿ ಉದ್ಯೋಗಸ್ಥ ಮಹಿಳೆಯರನ್ನು ಬಂಧಿಸಿದ್ದ 'ಶೂರ'. ಆತನ ಅದೃಷ್ಟ ಕೈ ಕೊಟ್ಟಿತ್ತು. ಸ್ವತಃ ಇನ್ಸ್‌ಪೆಕ್ಟರ್ ಅಲ್ಲಿ ಕಾಂಡೋಮ್ ಇಟ್ಟದ್ದುದನ್ನು ಪಾರ್ಲರ್‌ನ ರಹಸ್ಯ ಕ್ಯಾಮರಾ ಸೆರೆ ಹಿಡಿದಿತ್ತು. ಈ ಸಂಬಂಧ ಕಿರಣ ಕುಮಾರ್ ಅಮಾನತ್ತು ಆಗಿತ್ತು.

ನೀತಿ, ಶೀಲ, ಸಂಸ್ಕೃತಿಯ ರಕ್ಷಣೆಗೆ ಕಟಿಬದ್ಧವಾದ ಈ ಬಿಜೆಪಿ ಸರ್ಕಾರದ ಭವ್ಯ ಆಡಳಿತದಲ್ಲಿ ಈಗ ಕಿರಣ್ ಕುಮಾರ್ ಅಮಾನತು ಆದೇಶ ವಾಪಸ್ಸಾಗಿದೆ. ಮತ್ತು ಅವರಿಗೆ ಪದೋನ್ನತಿ ಬೇರೆ ದೊರೆತಿದೆ. ಕಿರಣ ಕುಮಾರ್ ಈಗ ಸಿಐಡಿ ಇನ್ಸ್‌ಪೆಕ್ಟರ್ ಆಗಿ ನೇಮಕಗೊಂಡಿದ್ದಾರೆ.

ಭಲೇ ! ಭೇಷ್ !! ಸದಾನಂದಗೌಡರೇ... ಬಿಜೆಪಿ ಆಡಳಿತ ಹೀಗೆ ಮುಂದುವರಿದರೆ ಇನ್ನು ಕೆಲವೇ ದಿನಗಳಲ್ಲಿ ರಾಜ್ಯದಲ್ಲಿ 'ರಾಮ ರಾಜ್ಯ' ಎಂಬುದು ಜಾರಿಗೆ ಬರುವುದು ಖಚಿತವಾಗುತ್ತಿರುವಂತಿದೆ. ಅಥವಾ ಕರ್ನಾಟಕ ಈಗಾಗಲೇ 'ರಾಮರಾಜ್ಯ' ಆಗಿಬಿಟ್ಟಿದ್ದರೆ ದಯವಿಟ್ಟು ಈ ಸಾರ್ವಜನಿಕರೆಂಬ ಅಮಾಯಕ ಪಾಮರರನ್ನು ಉದಾರ ಮನಸ್ಸಿನಿಂದ ಕ್ಷಮಿಸಿ 'ರಾಮರಾಜ್ಯ'ದ ಕನಸಿನ ಸಾಕಾರದ ಬಗೆಗೆ ಅಧಿಕೃತವಾಗಿ ಘೋಷಿಸಬೇಕೆಂದು ವಿನಮ್ರ ಮನವಿ.

ಯಡಿಯೂರಪ್ಪ ನೂರಾರು ಕೋಟಿ ಖರ್ಚು ಮಾಡಿದ್ದು ಎಲ್ಲಿಂದ. ?

ಬಿಜೆಪಿ ಮುಖಂಡ ಡಾ.ಬಿ.ಎಸ್. ಯಡಿಯೂರಪ್ಪ ಅವರ ಜೊತೆ ಎಂಥೆಂಥ ಭ್ರಷ್ಟ ಶಿಖಾಮಣಿಗಳಿದ್ದಾರೆಂಬುದು ರಾಜ್ಯದ ಜನರಿಗೆ ಈಗಾಗಲೇ ತಿಳಿದಿರುವ ವಿಷಯ. ಆದರೆ ಅವರ ಜೊತೆ ಇಂಥಿಂಥ ಬುದ್ಧಿವಂತರಿದ್ದಾರೆಂಬುದು ಬಹುಶಃ ಯಡಿಯೂರಪ್ಪನವರಿಗೂ ಗೊತ್ತಿರಲಿಲ್ಲವೇನೋ? (ಗೊತ್ತಿದ್ದರೆ ಅವರ ಬಾಯಿಗೆ ಮೊದಲೇ ಬೀಗ ಹಾಕುತ್ತಿದ್ದರೇನೋ) ಯಡಿಯೂರಪ್ಪ ನವರ ಪರಮಾಪ್ತ, ಯಡಿಯೂರಪ್ಪನವರ ಬಂಡಾಯದ ಜೊತೆಗಾರ ರಾಜ್ಯ ಕೈ ಮಗ್ಗ ನಿಗಮದ ಅಧ್ಯಕ್ಷ ಎಂ.ಡಿ. ಲಕ್ಷ್ಮಿನಾರಾಯಣ ಯಡಿಯೂರಪ್ಪನವರಿಗೂ ಹೇಳದೇ ತಾವೇ ಕೆಲವು ಸ್ಫೋಟಕಗಳನ್ನು ಹಚ್ಚಿ ಬಿಟ್ಟಿದ್ದಾರೆ.

'ಆಪರೇಷನ್ ಕಮಲದ ಮೂಲಕ ಬಿಜೆಪಿಗೆ ಬಂದ ಶಾಸಕರಿಗೆ ತಲಾ 5 ಕೋಟಿ ರೂ. ಬಿಬಿಎಂಪಿ ಚುನಾವಣೆಗೆ 60 ಕೋಟಿ ರೂ. ಬಿಜೆಪಿ ಪಕ್ಷದ ಕಚೇರಿ ನಿರ್ಮಾಣಕ್ಕೆ 10 ಕೋಟಿ ರೂ. ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಮರು ಚುನಾವಣೆಗೆ 25 ಕೋಟಿ ರೂಪಾಯಿ ಕೊಟ್ಟರೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ (ಬಿಜೆಪಿ ಪಕ್ಷದಿಂದ)ಮೋಸವಾಯಿತು"ಎಂದು ಸುವರ್ಣ ಸುದ್ದಿ ವಾಹಿನಿಯೊಂದಿಗೆ ಮಾತನಾಡುತ್ತಾ ಅವರು ವಿವರಗಳನ್ನು ಬಹಿರಂಗ ಪಡಿಸಿದ್ದಾರೆ. ಅವರು ಹೇಳಿದ ಪ್ರಕಾರ 22 ಮಂದಿ ಈ ರೀತಿಯ ಆಪರೇಷನ್ ಕಮಲದ ಮೂಲಕ ಬಿಜೆಪಿ ಬಂದಿದ್ದಾರೆ. ಯಡಿಯೂರಪ್ಪ ನವರು ಪಕ್ಷಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಅವರಿಗೆ ಮೋಸವಾಗಿದೆ ಎಂದು ಅವರು ಅಲವತ್ತು ಕೊಂಡಿದ್ದಾರೆ. ಈ ಬಗೆಗೆ ಗಾಬರಿಯಿಂದ ಪ್ರತಿಕಿಯೆ ನೀಡಿದ ಯಡಿಯೂರಪ್ಪ 'ಲಕ್ಷ್ಮಿ ನಾರಾಯಣ ಅವರು ಆ ರೀತಿ ಹೇಳಿರುವುದು ಅಕ್ಷಮ್ಯ ಅಪರಾಧ" ಅದು ನಿಜವಲ್ಲ. ಇನ್ನು ಮುಂದೆ 'ನಿಜ'ವನ್ನು ಹೇಳಲು ಅಧಿಕೃತ ವಕ್ತಾರರೊಬ್ಬರನ್ನು ನೇಮಿಸಲಾಗುವುದು ಎಂದು ಘೋಷಿಸಿದ್ದಾರೆ.

ಮತ್ತೂ ಮುಂದುವರಿದು ಬಾಂಬ್‌ಗಳನ್ನು ಸಿಡಿಸಿರುವ ಲಕ್ಷ್ಮೀ ನಾರಾಯಣ್ ಅವರು "ನಾನು ಭ್ರಷ್ಟಾಚಾರ ಮಾಡುವುದಿಲ್ಲ, ಹಣ ಲೂಟಿ ಮಾಡುವುದಿಲ್ಲ, ಪ್ರಾಮಾಣಿಕತೆಯಿಂದ ಇರುತ್ತೇನೆ ಎಂದುಕೊಂಡರೂ ಮುಖ್ಯಮಂತ್ರಿಗೆ ವರ್ಷಕ್ಕೆ ಏನಿಲ್ಲವೆಂದರೂ 500 ಕೋಟಿ ಬಂದೇ ಬರುತ್ತೆ". ಎಂದಿದ್ದಾರೆ. ಬಿಜೆಪಿ ಪಕ್ಷ ಎಂದರೆ 'ಶ್ರೀರಾಮನ ಸ್ವಂತ ಪಕ್ಷ' ಎಂದೇ ತಾವು 'ನಂಬಿ' ಜನರೂ ಅದನ್ನು ನಂಬಬೇಕು ಎಂದು 'ಒತ್ತಾಯಿಸುವ' ಬಿಜೆಪಿ ಪಕ್ಷದ ಅತಿರಥ ಮಹಾರಥ ಅಖಿಲ ಭಾರತ ನೇತಾರರು, ಭ್ರಷ್ಟಾಚಾರದ ವಿರುದ್ಧ ದೇಶವ್ಯಾಪಿ ರಥಯಾತ್ರೆ ಮಾಡುವ ಉಕ್ಕಿನ ಮನುಷ್ಯರೂ ಇನ್ನೂ, ಯಾರೂ ಈ ಬಗೆಗೆ ಏನನ್ನೂ ಹೇಳಿಲ್ಲ. ಅವರು ಕೂಡ ಈ ಬಗೆಗೆ ಮಾತನಾಡಲು ಅಧಿಕೃತ ವಕ್ತಾರರನ್ನು ಹುಡುಕುತ್ತಾ ಇದ್ದಾರೇನೋ ಪಾಪ.

ಇರಾನ್ ತೈಲ-ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ:

ಹಿಲರಿ ಕ್ಲಿಂಟನ್ ಒತ್ತಡ, ಸ್ವೀಕಾರಾರ್ಹವಲ್ಲದ ವಿಷಯ

ತೀಸ್ತಾ ನದಿ ನೀರು ಹಂಚಿಕೆ ವಿಷಯ ಎರಡು ಸಾರ್ವಭೌಮ ದೇಶಗಳ ನಡುವಿನ ವಿಚಾರ

ಮೇ 6, 2012 ರಂದು ನವದೆಹಲಿಯಲ್ಲಿ ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಸಭೆ ಸೇರಿತ್ತು. ಸಭೆಯ ಬಳಿಕ ಈ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು.

ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಭಾರತ ಭೇಟಿಯನ್ನು ಕೈಗೊಂಡಿದ್ದಾರೆ. ಈ ಸಂದರ್ಭದಲ್ಲಿ ಹಿಲರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯನ್ನು ಕೊಲ್ಕತಾದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಅಲ್ಲಿ ಮುಖ್ಯವಾಗುವ ವಿಷಯ ಏನಂದರೆ, ಈ ಭೇಟಿ ವೇಳೆ ಇಬ್ಬರು ಮುಖಂಡರ ನಡುವೆ ಚರ್ಚೆಯಾಗಿರುವ ವಿಷಯಗಳು. ತೀಸ್ತಾ ನೀರಿನ ಹಂಚಿಕೆ ವಿಷಯ ಬಾಂಗ್ಲಾ ಮತ್ತು ಭಾರತ ದೇಶಗಳ ನಡುವಿನ ವಿಷಯ. ಉಭಯ ದೇಶಗಳಿಗೆ ಸಂಬಂಧಿಸಿದ ವಿಚಾರವನ್ನು ಅಮೆರಿಕ ಪ್ರಸ್ತಾಪಿಸಿರುವುದು ಅನಗತ್ಯ ಮತ್ತು ಸ್ವೀಕಾರಾರ್ಹವಲ್ಲದ ವಿಷಯ.

ಇದೇ ವೇಳೆ, ಭಾರತದ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಅಮೆರಿಕ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ಮಾಡಿಕೊಡುವ ಕುರಿತೂ ಹಿಲರಿ ಕ್ಲಿಂಟನ್ ನಡುವಿನ ಮಾತುಕತೆಯಲ್ಲಿ ಒತ್ತಡ ಹಾಕಲು ಪ್ರಯತ್ನಿಸಲಾಗಿದೆ. ಇದು ಇನ್ನೊಂದು ಗಂಭೀರ ವಿಷಯ. ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಇನ್ನಷ್ಟು ವಿದೇಶಿ ಹೂಡಿಕೆಗೆ ಅವಕಾಶ ಮಾಡಿಕೊಡದಂತೆ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಇಂತಹ ನಿರ್ಧಾರ ಕೈಗೊಂಡರೆ ಪ್ರತಿಪಕ್ಷಗಳಿಂದ ರಾಷ್ಟ್ರವ್ಯಾಪಿ ಹೋರಾಟ ನಡೆಯಲಿದೆ ಎಂದು ಅದು ಎಚ್ಚರಿಸಿದೆ.

ಇರಾನ್‌ನಿಂದ , ತೈಲ ಆಮದು ಮಾಡಬಾರದು, ಆ ರಾಷ್ಟ್ರದೊಂದಿಗಿನ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಕಡಿತಗೊಳಿಸಬೇಕೆಂಬ ಬೇಡಿಕೆಯನ್ನೂ ವಿದೇಶಾಂಗ ಕಾರ್ಯದರ್ಶಿ ತಮ್ಮ ಭಾರತ ಭೇಟಿ ವೇಳೆ ಮುಂದಿಟ್ಟಿದ್ದಾರೆ. ಭಾರತ-ಪಾಕ್-ಇರಾನ್ ನಡುವಿನ ಅನಿಲ ಕೊಳವೆ ಹಾಗೂ ಇರಾನ್ ಪರಮಾಣು ವಿಷಯಕ್ಕೆ ಸಂಬಂಧಿಸಿದಂತೆ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಅಮೆರಿಕದ ಒತ್ತಡಗಳಿಗೆ ತಲೆಬಾಗುತ್ತಲೇ ಬಂದಿದೆ. ಭಾರತಕ್ಕೆ ಇರಾನ್‌ನಿಂದ ತೈಲ ಮತ್ತು ಅನಿಲ ಬೇಕಾಗಿದೆ. ದೇಶದ ತುರ್ತು ಅಗತ್ಯಗಳಿಗೆ ಅನುಗುಣವಾಗಿ ಕೇಂದ್ರ ಸರ್ಕಾರ ಈ ಯೋಜನೆಗೆ ಸ್ಪಂದಿಸಬೇಕಾಗಿದೆ ಎಂಬುದು ದೇಶದ ಜನರ ನಿರೀಕ್ಷೆಯೂ ಆಗಿದೆ.

ರಾಷ್ಟ್ರಪತಿ ಚುನಾವಣೆ

ಮುಂಬರುವ ರಾಷ್ಟ್ರಪತಿ ಚುನಾವಣೆಯ ಬಗ್ಗೆಯೂ ಪಾಲಿಟ್ ಬ್ಯೂರೋ ಸಭೆ ಚರ್ಚೆ ನಡೆಸಿತು. ರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಯುಪಿಎ ತನ್ನ ಸ್ವಂತ ಶಕ್ತಿಯಿಂದ ಅಭ್ಯರ್ಥಿಯನ್ನು ಗೆಲ್ಲಿಸುವ ತಾಕತ್ತು ಇಲ್ಲ. ಈ ಹಿನ್ನೆಲೆಯಲ್ಲಿ ವಿಶಾಲ ತಳಹದಿಯ ಚರ್ಚೆಗಳ ಆಧಾರದಲ್ಲಿ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಾಗಿದೆ. ಈ ಕುರಿತು ಪಕ್ಷ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಡ ಮತ್ತು ಇತರ ಜಾತ್ಯತೀತ ಪ್ರತಿಪಕ್ಷಗಳ ಜೊತೆ ಸಮಾಲೋಚನೆ ನಡೆಸಲಿದೆ.

ಆಹಾರ ಭದ್ರತೆಗಾಗಿನ ಹೋರಾಟ

ಆಹಾರ ಭದ್ರತೆ ಕಾಯ್ದೆಯ ಹೆಸರಿನಲ್ಲಿ ಕೇಂದ್ರ ಸರ್ಕಾರ ಜನರ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಕಡಿತ ಮಾಡಿರುವುದನ್ನು ಪಾಲಿಟ್‌ಬ್ಯೂರೋ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಈಗ ದೇಶದ ಆಹಾರ ಧಾನ್ಯಗಳ ದಾಸ್ತಾನು 5.35 ಕೋಟಿ ಟನ್‌ಗಳಿಷ್ಟಿವೆ. ಪ್ರಸಕ್ತ ಋತುವಿನ ಬೆಳೆ ಬಳಿಕ ಈ ದಾಸ್ತಾನು ಮತ್ತಷ್ಟು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಲಿದೆ. ಆದರೂ ಕೇಂದ್ರ ಸರ್ಕಾರ ಸಾರ್ವಜನಿಕ ವಿತರಣ ವ್ಯವಸ್ಥೆ ಮೂಲಕ ಪಡಿತರ ಚೀಟಿ ಹೊಂದಿದವರಿಗೆ ಆಹಾರ ಧಾನ್ಯಗಳನ್ನು ಪೂರೈಸಲು ಕಾಳಜಿ ವಹಿಸುತ್ತಿಲ್ಲ. ಅದಕ್ಕೆ ಬದಲಾಗಿ ದಾಸ್ತಾನು ಆಗಿರುವ ಆಹಾರ ಧಾನ್ಯಗಳನ್ನು ಹಾಗೆಯೇ ಕೊಳೆಯಲು ಅಥವಾ ಹಾಳಾಗಲು ಬಿಟ್ಟಿದೆ. ಈ ಆಹಾರ ಧಾನ್ಯಗಳ ಸಂಗ್ರಹಕ್ಕೆ ಕೇಂದ್ರ ಖರ್ಚು ಮಾಡುತ್ತಿರುವ ಹಣ ಲಕ್ಷಾಂತರ ಜನರ ಹಸಿವನ್ನು ನೀಗಿಸುವುದಕ್ಕಿಂತಲೂ ಹೆಚ್ಚಾಗಿದೆ. ಸಂಸತ್ತಿನ ಮುಂದಿರುವ ಪ್ರಸ್ತಾವಿತ ಮಸೂದೆ ರಾಜ್ಯ ಸರ್ಕಾರದ ಹಕ್ಕುಗಳ ಮೇಲೆಯೂ ಅತಿಕ್ರಮಣ ಮಾಡಲಿದೆ. ನವ ಉದಾರೀಕರಣದ ನೀತಿಗಳಿಗೆ ಪ್ರೋತ್ಸಾಹ ನೀಡುವ ಇಂತಹ ಅನಗತ್ಯ ಹಾಗೂ ಅಪ್ರಸ್ತುತ ಯೋಜನೆಗಳನ್ನು ಕೈಬಿಡಬೇಕು, ಆಹಾರದಂತಹ ಗಂಭೀರ ವಿಷಯಗಳಲ್ಲಿ ಸಬ್ಸಿಡಿಯನ್ನು ಕಡಿತಗೊಳಿಸುವ ಪ್ರಸ್ತಾವವನ್ನು ಹಿಂದಕ್ಕೆ ಪಡೆಯಬೇಕೆಂದು ಪಾಲಿಟ್‌ಬ್ಯೂರೋ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಇದೇ ವೇಳೆ, ಎಡಪಕ್ಷಗಳ ನೇತೃತ್ವದಲ್ಲಿ ನಡೆಯಲಿರುವ ಪರಿಣಾಮಕಾರಿ ಆಹಾರ ಭದ್ರತೆಯ ಯೋಜನೆಗಾಗಿನ ಹೋರಾಟಕ್ಕೆ ಬೆಂಬಲ ನೀಡಲು ನಿರ್ಧರಿಸಿದೆ.



ಗಣಿ ಮತ್ತು ಆದಿವಾಸಿ ಹಕ್ಕುಗಳು

ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ 2011ದ ಕರಡು ಮಸೂದೆಗೆ ಪಾಲಿಟ್ ಬ್ಯೂರೋ ತೀವ್ರ ವಿರೋಧವನ್ನು ವ್ಯಕ್ತಪಡಿಸಿದೆ. ಈ ಮಸೂದೆಯಲ್ಲಿ ಗಣಿ ಉದ್ಯಮದ ಖಾಸಗೀಕರಣ ಮತ್ತು ನೀತಿ ನಿರೂಪಣ ಚೌಕಟ್ಟಿನಲ್ಲಿ ಈಗಿರುವ ನಿಯಂತ್ರಣವನ್ನು ತೆಗೆದುಹಾಕುವ ಪ್ರಸ್ತಾಪಗಳಿವೆ. ಈಗಾಗಲೇ ದೇಶದ ಹಲವೆಡೆ ನಡೆದಿರುವ ಗಣಿ ಹಗರಣದಲ್ಲಿ ದೇಶದ ಬೊಕ್ಕಸಕ್ಕೆ ಹಲವು ಲಕ್ಷ ಕೋಟಿಗಳ ನಷ್ಟ ಉಂಟಾಗಿರುವ ಸಂದರ್ಭದಲ್ಲೇ ಇಂತಹ ಪ್ರಸ್ತಾಪಗಳನ್ನು ಮುಂದಿಡಲಾಗಿದೆ.

ಆದಿವಾಸಿ ಸಮುದಾಯವನ್ನು ಅವರು ಬದುಕುವಂತೆ ಸ್ವತಂತ್ರವಾಗಿ ಬಿಡುವುದು ಮತ್ತು ದೇಶದ ಖನಿಜಗಳ ಫಲಾನುಭವಿಗಳನ್ನಾಗಿ ಆದಿವಾಸಿ ಸಮುದಾಯವನ್ನು ಪರಿಗಣಿಸಬೇಕು ಎಂಬ ಅಭಿಪ್ರಾಯವನ್ನೂ ಪಾಲಿಟ್‌ಬ್ಯೂರೋ ವ್ಯಕ್ತಪಡಿಸಿದೆ. ಭೋಗ್ಯ ಅಥವಾ ಲೀಸ್ ನೋಟಿಫಿಕೇಶನ್ ಮಾಡುವಾಗ ಆದಿವಾಸಿ ಸಮುದಾಯವನ್ನೂ ಪರಿಗಣನೆಗೆ ತೆಗೆದುಕೊಂಡು ಅವರ ಜೊತೆ ಚರ್ಚೆ ನಡೆಸಿ ಮುಂದುವರಿಯಬೇಕೆಂದು ಒತ್ತಾಯಿಸುತ್ತದೆ.

ಇದೇ ವೇಳೆ, ಭೂಸ್ವಾಧೀನ ಕಾಯ್ದೆಯಲ್ಲಿ ಆದಿವಾಸಿ, ಬುಡಕಟ್ಟು ಜನರು ಸೇರಿದಂತೆ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರು ಮತ್ತು ರೈತರ ಭೂಮಿಗಳನ್ನು ಕಸಿದುಕೊಳ್ಳುವ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಭೂ ಸಂಬಂಧಿ ಹಾಗೂ ಗಣಿ ಸಂಬಂಧಿ ಈ ಕಾಯ್ದೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ಸಣ್ಣ ರೈತರು ಮತ್ತು ಆದಿವಾಸಿಗಳ ಹಕ್ಕನ್ನು ರಕ್ಷಿಸುವಂತೆ ಕೇಂದ್ರ ಸರ್ಕಾರಕ್ಕೆ ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಲೋಕಪಾಲ್ ಮಸೂದೆ

ಪ್ರಸಕ್ತ ಸಂಸತ್ತಿನ ಅಧಿವೇಶನದಲ್ಲೇ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕೆಂದು ಪಾಲಿಟ್‌ಬ್ಯೂರೋ ಒತ್ತಾಯಿಸಿದೆ. ಲೋಕಪಾಲ ಸಂಸ್ಥೆಯನ್ನು ಪರಿಣಾಮಕಾರಿಗೊಳಿಸುವ ರೀತಿಯಲ್ಲಿ ಈ ಮಸೂದೆಯನ್ನು ರೂಪಿಸಬೇಕೆಂದು ತನ್ನ ಒತ್ತಾಯದಲ್ಲಿ ಹೇಳಿದೆ.

ಹಣಕಾಸು ವಲಯದ ಕಾಯ್ದೆ

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ ಮತ್ತು ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ತಿದ್ದುಪಡಿ ಮಸೂದೆಗೆ ಪಾಲಿಟ್‌ಬ್ಯೂರೋ ತನ್ನ ತೀವ್ರ ವಿರೋಧವನ್ನು ಪುನರುಚ್ಚರಿಸಿದೆ.

ಸಂಸತ್ತಿನ ಮೂಲಕ ಇಂತಹ ಜನವಿರೋಧಿ ಕಾನೂನುಗಳನ್ನು ರೂಪಿಸಲು ಮುಂದಾಗದಂತೆ ಅದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಪ್ರಸ್ತಾವಿತ ಪಿಂಚಣಿ ಕಾಯ್ದೆಯು ಈಗಿರುವ ಸರ್ಕಾರಿ ಹಾಗೂ ಇತರ ವಲಯದ ನೌಕರರ ಹಕ್ಕುಗಳನ್ನು ಮೊಟಕುಗೊಳಿಸಲಿದೆ. ಬ್ಯಾಂಕಿಂಗ್ ಮತ್ತು ವಿಮಾ ಮಸೂದೆಯು ಆರ್ಥಿಕ ರಂಗದಲ್ಲಿ ವಿದೇಶಿ ಕಂಪೆನಿಗಳಿಗೆ ಬಂಡವಾಳ ಹೂಡಲು ಮತ್ತಷ್ಟು ಪ್ರೋತ್ಸಾಹ ನೀಡಲಿದ್ದು, ಇದರಿಂದ ದೇಶದ ಆರ್ಥಿಕ ರಂಗದಲ್ಲಿ ಚಂಚಲತೆ ಮತ್ತು ಅಸ್ಥಿರತೆ ಉಂಟುಮಾಡಲಿದೆ. ಈಗ ಉಂಟಾಗಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಕೇಂದ್ರ ಸರ್ಕಾರ ಸೂಕ್ತ ಪಾಠ ಕಲಿಯಬೇಕಾಗಿದೆ.

ಸಂಘಟನಾತ್ಮಕ ವಿಷಯಗಳು

ಪಾಲಿಟ್‌ಬ್ಯೂರೋ, ಪಕ್ಷದ ಕೇಂದ್ರಕ್ಕೆ ಜವಾಬ್ದಾರಿ ಹಂಚಿಕೆ ಮತ್ತು ಕಾರ್ಯನಿರ್ವಹಣೆಯ ವಿಂಗಡನೆ ಕುರಿತು ಈ ಸಭೆಯಲ್ಲಿ ವಿವರವಾದ ಚರ್ಚೆ ನಡೆಸಲಾಯಿತು. ಮತ್ತು ಕೇಂದ್ರ ಸಮಿತಿಯ ಉಪ ಸಮಿತಿಯ ರಚನೆ ಬಗ್ಗೆಯೂ ಚರ್ಚಿಸಲಾಯಿತು. ಈ ಕುರಿತ ತನ್ನ ಪ್ರಸ್ತಾವನೆಗಳನ್ನು ಮುಂದಿನ ಕೇಂದ್ರ ಸಮಿತಿ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ನಿರ್ಧರಿಸಲಾಯಿತು.

ಕನ್ನಡಕ್ಕೆ : ಸಿಮ್ಸಿಸಿ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಕಪ್ಪು ಹಣದ ಮೇಲೆ ಶ್ವೇತಪತ್ರ : ತಿಪ್ಪೆ ಸಾರಿಸುವ ಕೆಲಸ

ಯುಪಿಎ-2 ಸರಕಾರದ ಹಣಕಾಸು ಮಂತ್ರಾಲಯ ಸಂಸತ್ತಿನಲ್ಲಿ ಕಪ್ಪು ಹಣದ ಕುರಿತು ಶ್ವೇತಪತ್ರವನ್ನು, ಅಂದರೆ ಅಧಿಕೃತ ನಿಲುವನ್ನು ಪ್ರಕಟಿಸುವ ದಸ್ತಾವೇಜನ್ನು ಮಂಡಿಸಿದೆ. ಇದರಲ್ಲಿ, ಸಿಪಿಐ(ಎಂ) ಪೊಲಿಟ್‌ಬ್ಯುರೋ ವರ್ಣಿಸಿರುವಂತೆ, ಯಾವುದೇ ರಾಜಕೀಯ ಇಚ್ಛಾಶಕ್ತಿಯಿಲ್ಲದ ಸರಕಾರದ ಚರ್ವಿತಚರ್ವಣವಲ್ಲದೆ ಬೇರೇನೂ ಇಲ್ಲ. ವಿದೇಶಗಳಲ್ಲಿ ಕಳ್ಳತನದಿಂದ ಪೇರಿಸಿಟ್ಟ ದೇಶದ ಅಪಾರ ಸಂಪತ್ತನ್ನು ದೇಶಕ್ಕೆ ವಾಪಾಸು ತರುವಲ್ಲಿ ಇರುವ ಹತ್ತು-ಹಲವು ತಾಂತ್ರಿಕ ಅಡಚಣೆಗಳನ್ನೇ ಒತ್ತಿ-ಒತ್ತಿ ಹೇಳುವ ಈ ದಸ್ತಾವೇಜು ಈ ವಿಷಯದಲ್ಲಿ ಯುಪಿಎ-2 ಸರಕಾರದ ಪ್ರಾಮಾಣಿಕತೆಯ ಬಗ್ಗೆಯೇ ಸಂದೇಹ ಮೂಡಿಸುತ್ತದೆ.

ಶ್ವೇತಪತ್ರ ಎನ್ನುವ ಈ ದಸ್ತಾವೇಜಿನಲ್ಲಿ ವಿದೇಶಗಳಲ್ಲಿ ಪೇರಿಸಿಟ್ಟಿರುವ ಕಪ್ಪು ಹಣದ ಮೊತ್ತದ ಬಗ್ಗೆ ಒಂದು ನಂಬಲರ್ಹ ಅಂದಾಜು ಕೂಡ ಇಲ್ಲ, ಆ ಅಕ್ರಮ ಸಂಪತ್ತನ್ನು ದೇಶಕ್ಕೆ ಮರಳಿ ಪಡೆಯುವ ಬಗ್ಗೆ ಮೂರ್ತ ಕ್ರಮಗಳ ಬಗ್ಗೆಯಂತೂ ಇಲ್ಲವೇ ಇಲ್ಲ.

ಸ್ವಿಸ್ ಬ್ಯಾಂಕುಗಳಲ್ಲಿ ಇಟ್ಟಿರುವ ಭಾರತೀಯ ಠೇವಣಿಗಳ ಮೊತ್ತ 2006ರಲ್ಲಿ ರೂ.23,372 ಕೋಟಿ ಇದ್ದದ್ದು, 2010ರಲ್ಲಿ ರೂ.9,295 ಕೋಟಿಗೆ ಇಳಿಯಿತು ಎನ್ನುತ್ತದೆ ಈ ಶ್ವೇತಪತ್ರ, ಆದರೆ ಉಳಿದ ಹಣವೆಲ್ಲ ಎಲ್ಲಿಗೆ ಹೋಯಿತು ಎಂಬ ಬಗ್ಗೆ ತುಸುವಾದರೂ ಸುಳಿವು ಕೂಡ ಅದಕ್ಕೆ ಸಿಕ್ಕಂತಿಲ್ಲ. ಭಾರತದ ತಟದಾಚೆಯ ಇತರ ಹಣಕಾಸು ಕೇಂದ್ರಗಳಲ್ಲಿ ಇರುವ ಭಾರತೀಯ ಠೇವಣಿಗಳ ಮೊತ್ತ ಎಷ್ಟು ಎಂಬ ಅಂದಾಜು ಕೂಡ ಅದರ ಬಳಿಯಿಲ್ಲ. ಅಲ್ಲಿಂದ ಹೊರ ಹರಿದ ಬಹುಪಾಲು ಅಕ್ರಮ ಹಣಕಾಸು ಹಲವೆಡೆ ಸುತ್ತಿ ಮಾರಿಶಸ್ ಮೂಲಕ ವಿದೇಶಿ ನೇರ ಹೂಡಿಕೆ(ಎಫ್‌ಡಿಐ) ಮೂಲಕ ಅಥವ 'ಪಾರ್ಟಿಸಿಪೇಟರಿ ನೋಟ್ಸ್' ಎಂಬ ಹಣಕಾಸು ಸಾಧನಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ)ಗಳ ಮೂಲಕ ಭಾರತದ ಒಳಕ್ಕೆ ಬರುತ್ತಿದೆ ಎಂಬ ಸಂಕೇತ ಈ ಶ್ವೇತಪತ್ರದಲ್ಲೂ ಸಿಗುತ್ತದೆ. ಆದರೆ ಈ 'ಪಾರ್ಟಿಸಿಪೇಟರಿ ನೋಟ್ಸ್'ನ್ನು ನಿಷೇಧಿಸುವ ಬಗ್ಗೆಯಾಗಲೀ, ಮಾರಿಶಸ್‌ನೊಂದಿಗೆ ಮಾಡಿಕೊಂಡಿರುವ 'ದುಪ್ಪಟ್ಟು ತೆರಿಗೆ ತಪ್ಪಿಸುವ ಒಪ್ಪಂದ' (ಡಿಟಿಎಎ)ವನ್ನು ರದ್ದು ಮಾಡುವ ಬಗ್ಗೆಯಾಗಲೀ ಯಾವುದೇ ನಿರ್ದಿಷ್ಟ ಶಿಫಾರಸು ಇಲ್ಲ.

ಭಾರತದಲ್ಲಿ 1948ರಿಂದ 2008ರ ನಡುವಿನ ಅರವತ್ತು ವರ್ಷಗಳಲ್ಲಿ ಹೊರ ಹರಿದು ಹೋಗಿರುವ ಅಕ್ರಮ ಸಂಪತ್ತಿನ ಮೊತ್ತದ ಸದ್ಯದ ಮೌಲ್ಯ 462 ಬಿಲಿಯ ಡಾಲರುಗಳು(ಸುಮಾರು 25 ಲಕ್ಷ ಕೋಟಿ ರೂ.ಗಳು) ಎಂದು 'ಗ್ಲೋಬಲ್ ಫಿನಾನ್ಶಿಯಲ್ ಇಂಟೆಗ್ರಿಟಿ' ಸಂಸ್ಥೆಯ ಅಂದಾಜನ್ನು ಈ ಶ್ವೇತಪತ್ರವೂ ಉದ್ಧರಿಸುತ್ತದೆ. ಈ ಅಂದಾಜು ಉತ್ಪ್ರೇಕ್ಷೆಯೇನೂ ಅಲ್ಲ ಎಂಬುದು ಈ ಶ್ವೇತಪತ್ರ ಕೊಟ್ಟಿರುವ ಮಾಹಿತಿಗಳಿಂದಲೂ ಶೃತಪಡುತ್ತದೆ. ಕೇವಲ ಕಳೆದ ಎರಡು ಹಣಕಾಸು ವರ್ಷಗಳಲ್ಲೇ (2010-12) ವರ್ಗಾವಣೆ ಬೆಲೆ ನಿರ್ಧಾರದ(ಟ್ರಾನ್ಸ್‌ಫರ್ ಪ್ರೈಸಿಂಗ್, ಆಮದು/ರಫ್ತು ಮಾಡುವ ಸರಕುಗಳ ಬೆಲೆಗಳನ್ನು ಪರಿಶೀಲಿಸುವ) ನಿರ್ದೇಶನಾಲಯ 1,343



ಪ್ರಕರಣಗಳಲ್ಲಿ ರೂ.48,951 ಕೋಟಿ ರೂ.ಗಳ ವಂಚನೆಯನ್ನು ಪತ್ತೆ ಮಾಡಿದೆ. ಈ ಎರಡು ವರ್ಷಗಳಲ್ಲೇ, ಅಂತರ್‍ರಾಷ್ಟ್ರೀಯ ತೆರಿಗೆ ನಿರ್ದೇಶನಾಲಯ ಕೂಡ ರೂ.48,951 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಕಳೆದೆರಡು ವರ್ಷಗಳಲ್ಲಿ ಪತ್ತೆ ಮಾಡಿದ, ಸಂಗ್ರಹಿಸಿದ ಈ ಮೊತ್ತಗಳು ಕಪ್ಪು ಹಣದ ಸಾಗರದಲ್ಲಿ ತೇಲುತ್ತಿರುವ ಬಾರಿ ಹಿಮ ಬಂಡೆಗಳ ಸಣ್ಣ ತುದಿಗಳಷ್ಟೇ ಎಂಬುದು ಸ್ಪಷ್ಟ.

ಜರ್ಮನ್ ಮತ್ತು ಫ್ರಾನ್ಸ್‌ನ ಗುಪ್ತ ಬ್ಯಾಂಕ್ ಖಾತೆದಾರರ ಪಟ್ಟಿಯಲ್ಲಿರುವ ಭಾರತೀಯರ ಪ್ರಕಟಪಡಿಸದ ಆದಾಯಗಳ ಕುರಿತಂತೆ ಅಲ್ಲಿಯ ಸರಕಾರಗಳಿಂದ ಸಿಕ್ಕಿರುವ ಮೊತ್ತಗಳನ್ನು ಈ ಶ್ವೇತಪತ್ರ ಹೊರಗೆಡಹಿದೆ. ಅವು ಅನುಕ್ರಮವಾಗಿ ರೂ. 40 ಕೋಟಿ ಮತ್ತು ರೂ.565 ಕೋಟಿ ಮಾತ್ರ. ವಿದೇಶಿ ಖಾತೆಗಳಲ್ಲಿ ಅಕ್ರಮ ಸಂಪತ್ತು ಪೇರಿಸಿರುವ ಭಾರತೀಯ ವ್ಯಕ್ತಿಗಳು ಮತ್ತು ಸಂಸ್ಥೆಗಳಲ್ಲಿ ಹೆಚ್ಚಿನವನ್ನು ಇನ್ನೂ ಗುರುತಿಸಿಲ್ಲ. ನಿರಾಶಾದಾಯಕ ಸಂಗತಿಯೆಂದರೆ ಈ ಅಪಾರ ಮೊತ್ತಗಳನ್ನು ಭಾರತಕ್ಕೆ ಮರಳಿ ಪಡೆಯಲು ಬಹಳಷ್ಟು ತಾಂತ್ರಿಕ ತೊಂದರೆಗಳಿವೆ ಎಂಬ ರಾಗವನ್ನೇ ಹಾಡುತ್ತಿರುವುದು.

ಈ ದಿಕ್ಕಿನಲ್ಲಿ ಯಾವುದೇ ಪ್ರಗತಿ ಕಾಣದಿರುವುದು ಈ ಮಹತ್ವದ ಪ್ರಶ್ನೆಯ ಮೇಲೆ ಯುಪಿಎ ಸರಕಾರದ ಪ್ರಾಮಾಣಿಕತೆಯ ಬಗ್ಗೆ ಸಂದೇಹ ಮೂಡಿಸುತ್ತದೆ ಎಂದು ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ವಿದೇಶಗಳಲ್ಲಿ ಪೇರಿಸಿರುವ ಅಕ್ರಮ ಸಂಪತ್ತಿನ ಪ್ರಮಾಣವನ್ನು ಲೆಕ್ಕ ಹಾಕಲು ಮತ್ತು ಅಕ್ರಮ ಮಾಡಿರುವವರನ್ನು ಪತ್ತೆ ಹಚ್ಚಲು ಗಂಭೀರ ಪ್ರಯತ್ನ ನಡೆಸಬೇಕು ಮತ್ತು ಆದಾಯ ತೆರಿಗೆ ಕಾನೂನಿನ ಪ್ರಕಾರ ಹೀಗೆ ವಿದೇಶಗಳಲ್ಲಿರುವ ಪ್ರಕಟಪಡಿಸದ ಭಾರತೀಯರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದೆ.

★

ವಿಪರೀತ ಪೆಟ್ರೋಲ್ ಬೆಲೆಯೇರಿಕೆಯ ಈ ಪರಿ: 'ಮಾಡಿ ತೋರಿಸುವ' ಯುಪಿಎ ಕಾರ್ಯವೈಖರಿ!

ಕೊನೆಗೂ ಪೆಟ್ರೋಲ್ ಬೆಲೆಯೇರಿಕೆ ಬಂದಿದೆ – ಬರಸಿಡಿಲಿನಂತೆ, ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದಲ್ಲಿ, ಆರು ತಿಂಗಳ ಬಾಕಿಯನ್ನೆಲ್ಲ ಬಡ್ಡಿಸಹಿತ ವಸೂಲು ಮಾಡುವ ರೀತಿಯಲ್ಲಿ ಬಂದಿದೆ. ಪೆಟ್ರೋಲ್ ಬೆಲೆಯೇರಿಕೆಯ ಮೇಲೆ ಈಗ ಸರಕಾರದ ನಿಯಂತ್ರಣವಿಲ್ಲ, ತೈಲ ಮಾರಾಟ ಕಂಪನಿಗಳು ತಮ್ಮ ನಷ್ಟದ ಲೆಕ್ಕಾಚಾರದಲ್ಲಿ ಲೀಟರಿಗೆ 7.50 ರೂ. ಹೆಚ್ಚಿಸಿವೆ, ಇದರಲ್ಲಿ ಸರಕಾರದ ಪಾತ್ರವೇನೂ ಇಲ್ಲ ಎಂಬ ಯುಪಿಎ-2 ಮುಖ್ಯಸ್ಥರುಗಳ ಗೋಸುಂಬೆ ಮಾತುಗಳು, ಜತೆಗೆ ತಮ್ಮದೇ ಅಸಮರ್ಥತೆಯಿಂದ ರೂಪಾಯಿ ಮೌಲ್ಯ ಇಳಿಯುತ್ತಿರುವುದನ್ನೂ ನೆವ ಮಾಡಿಕೊಳ್ಳುವ ಪ್ರಯತ್ನ. ಆದರೆ ಇಂತಹ ಗೋಸುಂಬೆ ಮಾತುಗಳಾಗಲೀ, ಮಮತಾ ಬ್ಯಾನರ್ಜಿ, ಕರುಣಾನಿಧಿಯವರಂತಹ ಯುಪಿಎ ಮಿತ್ರಪಕ್ಷಗಳು ಮುಖಂಡರ ನಕಲಿ ಪ್ರತಿಭಟನೆಗಳಾಗಲೀ ಈ ಬಾರಿ ಜನಗಳು ಮೋಸಹೋಗುವಂತೆ ಮಾಡುವಲ್ಲಿ ವಿಫಲವಾಗಿವೆ. ಇನ್ನೂ ಸರಕಾರದ 'ನಿಯಂತ್ರಣ'ದಲ್ಲಿಯೇ ಇರುವ ಡೀಸೆಲ್, ಸೀಮೆಎಣ್ಣೆ, ಅಡುಗೆ ಅನಿಲಗಳ ದರಗಳನ್ನೂ ಏರಿಸಬೇಕಾಗಬಹುದು ಎಂದು ಸರಕಾರದ ವಕ್ತಾರರ ಸಂಕೇತಗಳೂ ಈ ಮುಖವಾಡವನ್ನು ಬಯಲಿಗೆಳೆಯುತ್ತಿವೆ.

ಅಲ್ಲದೆ ಈ ತೈಲ ಮಾರಾಟ ಕಂಪನಿಗಳು ತಮ್ಮ 'ನಷ್ಟ'ಗಳನ್ನು ತುಂಬಿಸಿಕೊಳ್ಳುವ ಕ್ರಮಕ್ಕೆ 'ಮುಂದಾಗಲು' ಸಂಸತ್ತಿನ ಬಜೆಟ್ ಅಧಿವೇಶನ ಮುಗಿಯುವುದನ್ನೇ ಏಕೆ ಕಾಯುತ್ತಿದ್ದವೋ ಗೊತ್ತಿಲ್ಲ. ಬಜೆಟ್ ಅಧಿವೇಶನ ಮುಗಿದ ಮರುದಿನವೇ ಜನಸಾಮಾನ್ಯರ ಬೆನ್ನು ಮುರಿಯುವ ಈ ಬೆಲೆಯೇರಿಕೆ ಪ್ರಕಟವಾಗಿದೆ. ಅಲ್ಲದೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲಗಳು ಇಳಿಯುತ್ತಿರುವ ಸಂದರ್ಭದಲ್ಲಿ ಇಂತಹ ವಿಪರೀತ ಬೆಲೆಯೇರಿಕೆ ಒಂದು ಕ್ರಿಮಿನಲ್ ಕೃತ್ಯವಲ್ಲದೆ ಬೇರೇನೂ ಅಲ್ಲ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಬಲವಾಗಿ ಟೀಕಿಸಿದೆ. ಸರಕಾರ ತೈಲ ಮಾರಾಟ ಕಂಪನಿಗಳನ್ನು ತೋರಿಸಿ ಹೊಣೆ ಜಾರಿಸಿಕೊಳ್ಳುವಂತಿಲ್ಲ ಎಂದಿರುವ ಅದು ಯುಪಿಎ-2



ವೇದರಾಜ ಎನ್.ಕೆ.

ಸರಕಾರ ತನ್ನ ಮೂರನೇ ವಾರ್ಷಿಕೋತ್ಸವವನ್ನು 'ಆಮ್ ಆದ್ಮಿ'ಯ ವಿರುದ್ಧ ಈ ಆರ್ಥಿಕ ಹಿಂಸಾಚಾರದ ಮೂಲಕ ಸ್ಮರಣೀಯಗೊಳಿಸಿದೆ ಎಂದು ವರ್ಣಿಸಿದೆ.

ಈ ವಾರವಷ್ಟೇ ಯುಪಿಎ-2 ಸರಕಾರ ಮೂರು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಯುಪಿಎ ಮುಖ್ಯಸ್ಥರು, ಇನ್ನು ಉಳಿದಿರುವ ಅಧಿಕಾರಾವಧಿ ಕೇವಲ ಎರಡು ವರ್ಷಗಳು, ಅದರಲ್ಲೂ ಕೆಲಸ ಮಾಡಲು ಉಳಿದಿರುವ ಅವಧಿ ಸುಮಾರು 18-20 ತಿಂಗಳು ಮಾತ್ರ, ಆದ್ದರಿಂದ 'ಮಾಡಿ ತೋರಿಸಿ' ಎಂದು ಎಚ್ಚರಿಸಿದರಂತೆ.

ಪೆಟ್ರೋಲ್ ಬೆಲೆಯೇರಿಕೆಯ ಪ್ರಮಾಣವನ್ನು ನೋಡಿದರೆ ಹೀಗೆ 'ಮಾಡಿ ತೋರಿಸುವುದು' ಯಾರಿಗೆ ಎಂಬ ಪ್ರಶ್ನೆ ಸಹಜ. 'ಆಮ್ ಆದ್ಮಿ'ಗೆ ತೋರಿಸುವ ಆಯ್ಕೆ ಬಹುಶಃ ಈಗಲೂ ಯುಪಿಎ-2 ಸರಕಾರದ ಮುಂದೆ ಇಲ್ಲ. ಜಾಗತಿಕ ಹಣಕಾಸು ಬಂಡವಾಳದ ಒಡೆಯರಿಗೆ ಮಾಡಿ ತೋರಿಸುವ ಹಂಬಲವೇ ಈಗಲೂ ಅದರ ಆದ್ಯತೆ. ಕಳೆದ ವಾರ ಬಂಡವಾಳಶಾಹಿ ಮಾಧ್ಯಮಗಳು, ಮಿತ್ರಪಕ್ಷಗಳ ಒತ್ತಡದಿಂದ ವಿಮೆ, ಬ್ಯಾಂಕಿಂಗ್ ಮತ್ತು ಪೆನ್‌ಶನ್ ವಲಯಗಳಲ್ಲಿನ 'ಸುಧಾರಣೆ'ಗಳ ಕ್ರಮಗಳನ್ನು ಸದ್ಯಕ್ಕೆ ಈ ಸರಕಾರ ಕೈಗೊಳ್ಳಲಿಕ್ಕಿಲ್ಲ ಎಂದು ಹಲುಬಿದ್ದವು. ಬಹುಶಃ, ರೂಪಾಯಿ ಮೌಲ್ಯ ಇಳಿಯುತ್ತಿರುವುದನ್ನೇ ನೆವ ಮಾಡಿಕೊಂಡು ಅವರಿಗೂ 'ಸಮಾಧಾನ' ತರಲು ಮುಂದಾಗಬಹುದು.

ಇಷ್ಟು ಪ್ರಮಾಣದ ಪೆಟ್ರೋಲ್ ಬೆಲೆಯೇರಿಕೆಯಿಂದಲೂ ಒಟ್ಟಾರೆ ಬೆಲೆಯೇರಿಕೆಯ ಮೇಲೆ ಏನೂ ಪ್ರಭಾವ ಬೀಳದು ಎಂದು ಯೋಜನಾ ಆಯೋಗ ಭರವಸೆ ನೀಡಿದೆಯಂತೆ, 'ಸದ್ಯ'ಕ್ಕೆ ಸ್ವಲ್ಪ ಏರಬಹುದು, ಆದರೆ ದೂರಗಾಮಿಯಾಗಿ ಏನೂ ಪರಿಣಾಮವಿಲ್ಲವಂತೆ. ಬಡತನದ ರೇಖೆಯ ಬಗ್ಗೆ ಯೋಜನಾ ಆಯೋಗದ ಮಾತುಗಳನ್ನು ನಂಬುವವರು ಮಾತ್ರ ಅದರ ಈ 'ಭರವಸೆ'ಯನ್ನು ನಂಬಬಲ್ಲರು.

★

ಬುಡಕಟ್ಟು ಜನಗಳ ಹಕ್ಕುಗಳನ್ನು ಬಲಿಗೊಟ್ಟು ಗಣಿ ಖಾಸಗೀಕರಣವನ್ನು ತೀವ್ರಗೊಳಿಸುವ ಮಸೂದೆ

ಯುಪಿಎ-2 ಸರಕಾರ 'ಗಣಿಗಾರಿಕೆ ಮತ್ತು ಖನಿಜಗಳು(ಅಭಿವೃದ್ಧಿ ಮತ್ತು ನಿಯಂತ್ರಣ)

ಪುಟ 14ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ದರ್ಬಾರ್

ಪುಟ 13 ರಿಂದ

ಮಸೂದೆ: 2011'ನ್ನು ಸಿದ್ಧಪಡಿಸಿದೆ. ಆದೀಗ ಸಂಸದೀಯ ಸ್ಥಾಯಿ ಸಮಿತಿಯ ಮುಂದಿದೆ.

ಇತ್ತೀಚಿನ ವರದಿಗಳ ಪ್ರಕಾರ 2009ರ ವರೆಗೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು 23 ರಾಜ್ಯಗಳಲ್ಲಿ 4.9 ಲಕ್ಷ ಹೆಕ್ಟೇರುಗಳಷ್ಟು ಗಣಿಗಾರಿಕೆ ಲೀಸುಗಳನ್ನು ಕೊಟ್ಟಿವೆ. ಇದರಲ್ಲಿ 95ಶೇ. ಲೀಸುಗಳನ್ನು (ಒಟ್ಟು ಗಣಿಪ್ರದೇಶದ 70ಶೇ.ದಷ್ಟು ಪ್ರದೇಶ) ಟಾಟಾ, ಬಿರ್ಲಾ ಮತ್ತು ಇತರರ ದೊಡ್ಡ ಖಾಸಗೀ ಕಂಪನಿಗಳಿಗೆ ಕೊಡಲಾಗಿದೆ. ಮೇಲೆ ಹೇಳಿದ ಮಸೂದೆ ಈ ಗಣಿ ಖಾಸಗೀಕರಣವನ್ನು ಇನ್ನಷ್ಟು ಮುಂದುವರೆಸುವ, ನಿಯಂತ್ರಣಗಳನ್ನು ತೆಗೆದು ಹಾಕುವ ಹುನ್ನಾರವನ್ನು ಹೊಂದಿದೆ.

ತಾಂತ್ರಿಕ ಸ್ಥಳಾನ್ವೇಷಣೆ, ಅನ್ವೇಷಣೆ ಮತ್ತು ಪರಿಶೋಧನೆಯ ಪರವಾನಿಗೆ, ಈ ಪರವಾನಿಗೆಯನ್ನು ಸುಲಭ ಶರತ್ತುಗಳ ಮೇಲೆ ಗಣಿಗಾರಿಕೆ ಪರವಾನಿಗೆಯಾಗಿ ಪರಿವರ್ತಿಸುವುದು, ಈ ಮೂಲಕ ಎಫ್‌ಡಿಐ ಮತ್ತು ವಿದೇಶಿ ಕಂಪನಿಗಳು ಸುಲಭವಾಗಿ ಪ್ರವೇಶಿಸಲು ಅನುವಾಗುವಂತೆ ಮಾಡುವ ಹೊಸ ಪರಿಕಲ್ಪನೆಗಳನ್ನು ಈ ಮಸೂದೆಯಲ್ಲಿ ತರಲಾಗಿದೆ. ಲೀಸ್‌ಗಳನ್ನು ಕೊಡುವಲ್ಲಿ ಇಂತಹ ಕಂಪನಿಗಳಿಗೆ ಆದ್ಯತೆ ಸಿಗುವಂತೆ ಮಾಡುವ ಮಾನದಂಡಗಳನ್ನು ಇದರಲ್ಲಿ ಸೇರಿಸಲಾಗಿದೆ. ಇವೆಲ್ಲ ಸಮತ್ವ, ಪರಿಸರ ಮತ್ತು ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುವ ಅಂಶಗಳು ಎಂದು ಪರಿಣಿತರ ಅಭಿಪ್ರಾಯ.

ಬುಡಕಟ್ಟು ಜನಗಳ ಹಕ್ಕುಗಳನ್ನು ರಕ್ಷಿಸುತ್ತಿರುವುದಾಗಿ ಈ ಮಸೂದೆಯಲ್ಲಿ ಯುಪಿಎ ಸರಕಾರ ಹೇಳಿಕೊಂಡಿದೆ. ಕಲ್ಲಿದ್ದಲು ಗಣಿಗಾರಿಕೆಯಲ್ಲಿ ತೊಡಗಿರುವ ಕಂಪನಿಗಳು ತಮ್ಮ ಲಾಭದ 26ಶೇ. ವನ್ನು ಮತ್ತು ಇತರ ಗಣಿಗಾರಿಕೆಗಳಲ್ಲಿ ರಾಯಧನ(ರಾಯಲ್ಟಿ)ಕ್ಕೆ ಸಮನಾದ ಮೊತ್ತವನ್ನು ಕೊಡಬೇಕೆಂದು ಈ ಮಸೂದೆಯಲ್ಲಿ ಹೇಳಲಾಗಿದೆ. ಆದರೆ ಈ ನಿಧಿಯ ನಿರ್ವಹಣೆ 'ಜಿಲ್ಲಾ ಖನಿಜ ದತ್ತಿ'ಯ ಕೈಗಳಲ್ಲಿರುತ್ತದೆ. ಇದು ಗಣಿ ಮಾಲಿಕರ, ಅಧಿಕಾರಶಾಹಿಗಳ ಪ್ರಾಬಲ್ಯವಿರುವ ನಿಧಿ, ಸ್ಥಳೀಯ ಸಮುದಾಯಗಳ ಪ್ರಾತಿನಿಧ್ಯ ಇದರಲ್ಲಿ ಹೆಸರಿಗೆ ಮಾತ್ರ, ಇವು ಗಣಿಗಾರಿಕೆ ಬಹುವಾಗಿ ತಟ್ಟುವ ಸ್ಥಳೀಯ ಸಮುದಾಯಗಳ ಹಿತಗಳನ್ನು ಗಮನದಲ್ಲಿಟ್ಟುಕೊಳ್ಳುತ್ತವೆಂಬ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಅಲ್ಲದೆ ಭಾರತದಲ್ಲಿ ರಾಯಧನವೆಂಬುದು ಈ ಗಣಿಕಂಪನಿಗಳು ಗಳಿಸುವ ಲಾಭಕ್ಕೆ ಹೋಲಿಸಿದರೆ ಅತ್ಯಲ್ಪ.

ಅಲ್ಲದೆ ಇದು ಪೋಷಕ-ಗಿರಾಕಿ ಸಂಬಂಧಗಳನ್ನು ಬಿಂಬಿಸುವ ನಿಲುವು. ಸ್ಥಳೀಯ ಬುಡಕಟ್ಟು ಸಮುದಾಯಗಳಿಗೆ, ಅದರಲ್ಲೂ ಐದನೇ ಶೆಡ್ಯೂಲಿನ ಪ್ರದೇಶಗಳ ನಿವಾಸಿಗಳಿಗೆ ನಮ್ಮ ದೇಶದ ಸಂವಿಧಾನ ಅಲ್ಲಿಯ ನೆಲ ಮತ್ತು ಸಂಪನ್ಮೂಲಗಳ ಒಡೆತನವನ್ನು ಕೊಟ್ಟಿದೆ. ಆದರೆ ಈ ಮಸೂದೆ ರಚಿಸುವ ಜಿಲ್ಲಾ ನಿಧಿಗಳು ಸ್ಥಳೀಯ ಸಮುದಾಯಗಳು ಒಡೆಯರು, ಯಾರದೇ ಆಶ್ರಯದಲ್ಲಿರುವ ಫಲಾಪೇಕ್ಷಿಗಳು ಅಲ್ಲ ಎಂಬುದನ್ನೇ ಮರೆತು ಬಿಟ್ಟಿದೆ. ಸಮತಾ ಪ್ರಕರಣದಲ್ಲಿ ಸುಪ್ರಿಂ ಕೋರ್ಟಿನ ತೀರ್ಪನ್ನೂ ಇದು ಕಡೆಗಣಿಸಿದೆ ಎಂಬುದು ಪರಿಣಿತರ ಅಭಿಪ್ರಾಯ.

ಖಾಸಗಿಯವರಿಗಾಗಿ ಈ ಯುಪಿಎ-2 ಸರಕಾರಕ್ಕೆ ದೇಶದ ಸಂವಿಧಾನ ಮತ್ತು ಕಾನೂನುಗಳ ಪರಿವೆಯೂ ಇಲ್ಲ ಎಂಬುದಕ್ಕೆ ಈ ಮಸೂದೆ ಮತ್ತೊಂದು ಉದಾಹರಣೆ.

ಕಸ್ಟಡಿಯಲ್ಲಿ ಲೈಂಗಿಕ ಹಿಂಸೆಯ ಆಪಾದಿತ ಪೋಲೀಸ್ ಅಧಿಕಾರಿಗೆ ಪರಾಕ್ರಮ ಪ್ರಶಸ್ತಿ?

ಛತ್ತೀಸ್‌ಗಡದ ದಾಂತೆವಾಡದಲ್ಲಿ ಸರಕಾರೀ ಶಾಲೆಯಲ್ಲಿ ಆದಿವಾಸಿ ಶಿಕ್ಷಕಿಯಾಗಿರುವ ಮಹಿಳೆ ಸೋನಿ ಸೋರಿಗೆ ನಕ್ಸಲ್-ವಿರೋಧಿ ಕಾರ್ಯಾಚರಣೆಯ ಹೆಸರಿನಲ್ಲಿ ಕಳೆದೆರಡು ವರ್ಷಗಳಿಂದ ನೀಡುತ್ತಿರುವ ಕಿರುಕುಳ ಮತ್ತು ಕಳೆದ ಅಕ್ಟೋಬರಿನಲ್ಲಿ ಆಕೆಯನ್ನು ಬಂಧಿಸಿ, ದಿಲ್ಲಿ ಹೈಕೋರ್ಟಿನ ಆದೇಶವನ್ನೂ ನಿರ್ಲಕ್ಷಿಸಿ ಪೋಲೀಸ್ ಕಸ್ಟಡಿಯಲ್ಲಿ ನೀಡಿರುವ ಲೈಂಗಿಕ ಚಿತ್ರಹಿಂಸೆಯ ಆಪಾದನೆಯ ಮೊಕದ್ದಮೆ ಈಗ ಸುಪ್ರಿಂಕೋರ್ಟ್ ಮೆಟ್ಟಿಲೇರಿದೆ. ಆದರೆ ಈ ನಡುವೆ ಪೋಲೀಸ್. ಕಸ್ಟಡಿಯಲ್ಲಿ ಚಿತ್ರಹಿಂಸೆಯ ಉಸ್ತುವಾರಿ ವಹಿಸಿದ್ದ ಪೋಲೀಸ್ ಸೂಪರಿಂಟೆಂಡೆಂಟ್‌ಗೆ ಈ ವರ್ಷದ ರಾಷ್ಟ್ರಪತಿಗಳ ಪರಾಕ್ರಮ ಪ್ರಶಸ್ತಿ ನೀಡಿ ಗೌರವಿಸಲಾಗಿದೆ! ಈ ಬಗ್ಗೆ ವಿವಿಧ ಮಹಿಳಾ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

ಮೇ 14 ರಂದು ಮಹಿಳಾ ಆಂದೋಲನದ ಮುಖಂಡರ ನಿಯೋಗವೊಂದು ರಾಷ್ಟ್ರಪತಿ ಗಳನ್ನು ಭೇಟಿ ಮಾಡಿ ಈ ಸಂಗತಿಯನ್ನು ಅವರ ಗಮನಕ್ಕೆ ತಂದಾಗ ಅವರು ಆಶ್ಚರ್ಯ ವ್ಯಕ್ತಪಡಿಸಿದರಂತೆ. ಈ ಬಗ್ಗೆ ಒಂದು ವಿಶ್ವಾಸಾರ್ಹ ತನಿಖೆ ನಡೆಸಬೇಕು, ಗಂಭೀರ ಆಪಾದನೆಗಳನ್ನು ಎದುರಿಸುತ್ತಿರುವ ಎಸ್‌ಪಿಗೆ ನೀಡಿರುವ ಪ್ರಶಸ್ತಿಯನ್ನು ತಕ್ಷಣವೇ ವಾಪಾಸು ಪಡೆಯಬೇಕು, ಸೋನಿಯವರಂತೆ ಜೈಲಿನಲ್ಲಿ ಕೊಳೆಯುತ್ತಿರುವ ಹಲವಾರು ಬುಡಕಟ್ಟು ಮಹಿಳೆಯರ ಹಕ್ಕುಗಳು ಮತ್ತು ಘನತೆಗೆ ರಕ್ಷಣೆ ಸಿಗುವಂತೆ ಮಾಡಲು ಒಂದು ಸಮಗ್ರ ಮತ್ತು ವಿಶ್ವಾಸಾರ್ಹ ತನಿಖೆ ನಡೆಸಬೇಕು ಹಾಗೂ ಮಾವೋವಾದಿಗಳ ವಿರುದ್ಧ ಕಾರ್ಯಾಚರಣೆಗಳ ಹೆಸರಿನಲ್ಲಿ ಬುಡಕಟ್ಟು ಮಹಿಳೆಯರ ಹಕ್ಕುಗಳ ಉಲ್ಲಂಘನೆಯಲ್ಲಿ ಪೋಲೀಸ್ ಮತ್ತು ಇತರ ಭದ್ರತಾ ಪಡೆಗಳವರು ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ತೊಡಗಿರುವುದನ್ನು ತಕ್ಷಣವೇ ತಡೆಯಬೇಕು ಮತ್ತು ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ರಾಷ್ಟ್ರಪತಿಗಳನ್ನು ಆಗ್ರಹಿಸಿದೆ. ರಾಷ್ಟ್ರಪತಿಗಳು ಸಂಬಂಧಪಟ್ಟ ಸರಕಾರಗಳು ಮತ್ತು ಅಧಿಕಾರಿಗಳ ಗಮನಕ್ಕೆ ಇದನ್ನು ತರುವುದಾಗಿ ಆಶ್ವಾಸನೆ ನೀಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಮುಖಂಡರು ಹಾಗು ಸಂಸತ್ ಸದಸ್ಯೆ ಬೃಂದಾ ಕಾರಟ್, ಎನ್‌ಎಫ್‌ಐಡಬ್ಲ್ಯುನ ಉಮಾ ಚಕ್ರವರ್ತಿ, ನ್ಯಾಯವಾದಿಗಳಾದ ವೃಂದಾ ಗ್ರೋವರ್ ಮತ್ತು ಇಂದಿರಾ ಸಿ ಈ ನಿಯೋಗ ದಲ್ಲಿದ್ದರು. ಅವರು ರಾಷ್ಟ್ರಪತಿಗಳಿಗೆ ಸಲ್ಲಿಸಿದ ಮನವಿಪತ್ರಕ್ಕೆ ರಾಷ್ಟ್ರೀಯ ಸಲಹಾ ಸಮಿತಿಯ ಸದಸ್ಯೆ ಅರುಣಾ ರಾಯ್, ಪಿಯುಸಿಎಲ್ ನ ಕವಿತಾ ಶ್ರೀವಾಸ್ತವ ಮತ್ತು 'ಸಹೇಲಿ'ಯ ವಾಣಿ ಎಸ್ ಕೂಡ ಸಹಿ ಮಾಡಿದ್ದಾರೆ.

ಯುಪಿಎ-2 ಸರಕಾರದ ಮೂರು ವರ್ಷಗಳು....

ಪುಟ 7ರಿಂದ

ಉದಾರವಾದಿ ನಂಬಿಕೆಗೆ ಅದು ಈಗಲೂ ಅಂಟಿಕೊಂಡಿದೆ. ಫಲಿತಾಂಶವೆಂದರೆ, ಅದು ವಿದೇಶಿ ಮತ್ತು ದೇಶೀ ಬಂಡವಾಳಕ್ಕೆ 'ಉತ್ತೇಜಕ'ಗಳ(ಸಬ್ಸಿಡಿಗಳೆಂದೇ ಓದಿಕೊಳ್ಳಿ) ಸಂಖ್ಯೆಯನ್ನು ಹೆಚ್ಚಿಸುವುದರಲ್ಲೇ ಮಗ್ನವಾಗಿದೆ. ಹಣಕಾಸು ಮಂತ್ರಿಗಳು ಬಜೆಟ್ ಮಂಡಿಸಿದಾಗ ಮುಂದಿಟ್ಟ ಎಲ್ಲ ಪ್ರಮುಖ ತೆರಿಗೆ ಪ್ರಸ್ತಾವಗಳನ್ನು ಹಿಂತೆಗೆದುಕೊಂಡಿದ್ದಾರೆ ಅಥವ ದುರ್ಬಲಗೊಳಿಸಿದ್ದಾರೆ. ಇದರಿಂದ ವಿದೇಶಿ ಸಾಂಸ್ಥಿಕ ಹೂಡಿಕೆಗಳು ದೇಶ ಬಿಟ್ಟು ಹೋಗುವ ಪ್ರವೃತ್ತಿಯನ್ನು ಬದಲಿಸಬಹುದು ಎಂಬುದು ಸರಕಾರದ ನಿರೀಕ್ಷೆ. ರೂಪಾಯಿ ಮೌಲ್ಯ ತೀವ್ರವಾಗಿ ಇಳಿಯಲು, ಈ ಪ್ರವೃತ್ತಿಯೂ ಒಂದು ಕಾರಣ ಎನ್ನಲಾಗಿದೆ.

ಪರ್ಯಾಯ ದಾರಿ

ಇಂತಹ ವಿಚಾರಧಾರೆಯ ಒಂದು ಪ್ರಧಾನ ದೋಷವೆಂದರೆ, ಹೂಡಿಕೆಗಳು ಹೆಚ್ಚಿದರೂ, ಇಂತಹ ಹೂಡಿಕೆಗಳಿಂದ ಉತ್ಪಾದಿಸಿದ ಸರಕುಗಳು ಮಾರುಕಟ್ಟೆಯಲ್ಲಿ ಮಾರಾಟವಾಗದೇ ಆರ್ಥಿಕ ಬೆಳವಣಿಗೆ ಸುಧಾರಿಸುವುದಿಲ್ಲ (ನಿಜ, ಜೂಜುಕೋರ ಹೂಡಿಕೆಗಳು ಹೆಚ್ಚಾಗಿ, ಬೆಳವಣಿಗೆಯ ಅಂಕಿ-ಅಂಶಗಳನ್ನು ಕೃತಕವಾಗಿ ಹಿಗ್ಗಿಸಬಹುದು). ಅದು ಸುಧಾರಿಸಬೇಕಾದರೆ, ಜನತೆಯ ಕೈಗಳಲ್ಲಿ ಸಾಕಷ್ಟು ಕೊಳ್ಳುವ ಸಾಮರ್ಥ್ಯ ಬರಬೇಕು. ಈ ಸಾಮರ್ಥ್ಯವೇ ಹೆಚ್ಚುತ್ತಿರುವ ಬಡತನದ ಮಟ್ಟ ಮತ್ತು ನಿರಂತರ ಬೆಲೆಯೇರಿಕೆಯಿಂದಾಗಿ ಕುಸಿಯುತ್ತಿದೆ. ಎಲ್ಲ ಅವಶ್ಯಕ ಸರಕುಗಳ ಬೆಲೆಗಳು ಏರುತ್ತಲೇ ಇರುವುದರಿಂದ, ಜನಗಳ ಬಳಿ ಇತರ ಸರಕುಗಳನ್ನು ಖರೀದಿಸಲು ಉಳಿಯುವ ಸಂಪನ್ಮೂಲ ಅತ್ಯಲ್ಪ ಅಥವ ಇಲ್ಲವೇ ಇಲ್ಲ ಎನ್ನಬಹುದು. ಕೈಗಾರಿಕಾ ಉತ್ಪಾದನೆಯ ವಲಯದಲ್ಲಿನ ಬೆಳವಣಿಗೆ ದರ ಕುಸಿತಕ್ಕೆ ವಿವರಣೆ ಮುಖ್ಯವಾಗಿ ಇಲ್ಲೇ ಇದೆ. ಆದ್ದರಿಂದ ಈಗ ಬೇಕಾಗಿರುವುದು ಈ ನವ-ಉದಾರವಾದಿ ದಿಕ್ಪಥವನ್ನೇ ಕೈಬಿಡುವುದು.

ಹೆಚ್ಚಿನ ಮಟ್ಟಗಳ ಸಾರ್ವಜನಿಕ ಹೂಡಿಕೆಗಳು ಒಂದೆಡೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ನಿರ್ಮಿಸಿದರೆ, ಇನ್ನೊಂದೆಡೆ, ನಮಗೆ ಬಹಳಷ್ಟು ಅಗತ್ಯವಾಗಿರುವ ಮೂಲರಚನೆಗಳನ್ನು ಕೂಡ ನಿರ್ಮಿಸುತ್ತವೆ. ಇದಕ್ಕೆ, ಶ್ರೀಮಂತರಿಗೆ ಕೊಡುವ ಅಗಾಧ ತೆರಿಗೆ ರಿಯಾಯ್ತಿಗಳನ್ನು ಕೈಬಿಟ್ಟರಷ್ಟೇ ಸಾಕು, ಸಂಪನ್ಮೂಲಗಳ ಕೊರತೆ ಏನೇನೂ ಇರುವುದಿಲ್ಲ ಎಂದು ಈ ಅಂಕಣದಲ್ಲಿ ಈ ಹಿಂದೆ ಕಂಡಿದ್ದೇವೆ. ಇಂತಹ ಸಾರ್ವಜನಿಕ ಹೂಡಿಕೆಗಳಿಂದ ಜನತೆಯ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ, ಆಂತರಿಕ ಬೇಡಿಕೆಯ ಮಟ್ಟಗಳೂ ಏರುತ್ತವೆ. ಇದು ಕೈಗಾರಿಕಾ ಉತ್ಪಾದನಾ ವಲಯಕ್ಕೆ ಅಗತ್ಯವಾದ ಉತ್ತೇಜನೆಯನ್ನು ಒದಗಿಸಿ, ಪರಿಣಾಮವಾಗಿ, ಕೈಗಾರಿಕಾ ಉತ್ಪಾದನೆಯ ಮಟ್ಟಗಳು ಬೆಳೆಯುತ್ತವೆ. ಇಂತಹ ಒಂದು ದಿಕ್ಪಥ ಆರ್ಥಿಕ ಬೆಳವಣಿಗೆಯ ಒಂದು ತಾಳಿಕೆಯ ಚಕ್ರಕ್ಕೆ ಚಾಲನೆ ಕೊಡುತ್ತದೆ.

ಯುಪಿಎ-2 ಸರಕಾರದ ಉಳಿದೆರಡು ವರ್ಷಗಳಲ್ಲಿ, ಈಗಿನ ನವ-ಉದಾರವಾದಿ ದಿಕ್ಪಥವನ್ನು ಕೈಬಿಟ್ಟು, ಮೇಲೆ ಸೂಚಿಸಿದ ದಾರಿಯನ್ನು ಹಿಡಿಯುವಂತೆ ಬಲವಂತವನ್ನು ಉಂಟು ಮಾಡಲು, ಜನತೆಯನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಮೂಲಕ ಸಾರ್ವಜನಿಕ ಒತ್ತಡವನ್ನು ಹೆಚ್ಚಿಸಬೇಕು. ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ನವ-ಉದಾರವಾದಿ ದಿಕ್ಪಥಕ್ಕೆ ಬದ್ಧವಾಗಿರುವ ಈ ಯುಪಿಎ-2 ಸರಕಾರ ಜನತೆಯ ಬಲಿಷ್ಟ ಹೋರಾಟಗಳು ಬಲವಂತ ಮಾಡದೆ ತನ್ನ ಈ ದಿಕ್ಪಥವನ್ನು ತ್ಯಜಿಸುವುದಿಲ್ಲ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಯುಪಿಎ-2 ಸರಕಾರ ಪೆಟ್ರೋಲ್ ದರಗಳನ್ನು ಅತ್ಯಂತ ತೀವ್ರವಾಗಿ ಹೆಚ್ಚಿಸಿರುವ ಸುದ್ದಿ ಬಂದಿದೆ. ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಗಳನ್ನೂ ಬೇಗನೇ ಹೆಚ್ಚಿಸುವ ಅಪಾಯದ ಸೂಚನೆಯೂ ಇದೆ. ಜನತೆಯ ಮೇಲೆ ಇಂತಹ ಕ್ರಿಮಿನಲ್ ಹೊರೆಗಳ ವಿರುದ್ಧ ಜನತೆ ಬಲಿಷ್ಟ ಪ್ರತಿಭಟನೆಗಳನ್ನು ನಡೆಸಬೇಕಾಗಿದೆ.

ಹಿಲರಿ ಕ್ಲಿಂಟನ್ ಭೇಟಿ....

-ಪುಟ 10 ರಿಂದ

ದೂರವಾದದ್ದು ಅದು; ಅದೇನೇ ಇದ್ದರೂ, ಮಿಲಿಯಾಂತರ ಭಾರತೀಯರ ಇಂಧನ ಅಗತ್ಯವನ್ನು ಪೂರೈಸಬೇಕಾದ ಅನಿವಾರ್ಯತೆ ಹಿನ್ನೆಲೆಯಲ್ಲಿ, ಎಲ್ಲಾ ಇರಾನ್ ತೈಲ ಆಮದಿಗೆ ಬದಲಾದ ವ್ಯವಸ್ಥೆ ಒಂದು ಸರಳ ವಿಷಯವಲ್ಲ ಅಥವಾ ವಾಸ್ತವ ನೆಲೆಯದ್ದೂ ಅಲ್ಲ." [illegible]ಗರೆಯಿತು.

ಅಮೆರಿಕಾವು ಇರಾನಿನ ವಿರುದ್ಧ ಅನೈತಿಕ ನಿರ್ಬಂಧನ ಹೇರಿರುವುದನ್ನು ಮತ್ತು ಇತರೆ ದೇಶಗಳು ಇರಾನಿನ ಜತೆ ವ್ಯವಹಾರ ಮಾಡಬಾರದೆಂದು ಬೆದರಿಕೆ ಒಡ್ಡುತ್ತಿರುವುದನ್ನು ಯುಪಿಎ ಸರ್ಕಾರ ಆಕ್ಷೇಪಿಸಿಲ್ಲ. ಭಾರತವು ಕಡಿತಗೊಳಿಸಿದ ತೈಲ ಆಮದನ್ನು ರೂಪಾಯಿ ವಿನಿಮಯದ ಮೂಲಕ ನಡೆಸಲು ಮತ್ತು ಅದಕ್ಕೆ ಬದಲಾಗಿ ಭಾರತದಿಂದ ಸರಕುಗಳು ಹಾಗೂ ಸೇವೆಗಳನ್ನು ಪಡೆಯಲು ಇರಾನ್ ಪ್ರಯತ್ನಿಸುತ್ತಿರುವುದನ್ನೂ ಅಮೆರಿಕಾದ ಕಾಂಗ್ರೆಸ್ ಸದಸ್ಯರು ಹಾಗೂ ಮಾಧ್ಯಮಗಳು ತೀವ್ರವಾಗಿ ಟೀಕಿಸುತ್ತಿವೆ.

ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕ್ ಸಂಸ್ಥಾಪಕ ಮಹಮದ್ ಯೂನುಸ್‌ನನ್ನು ಬ್ಯಾಂಕಿನ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಿರುವ ವಿಷಯದಲ್ಲಿ ಬಾಂಗ್ಲಾದೇಶದ ಸರ್ಕಾರಕ್ಕೆ ಬುದ್ಧಿವಾದ ಹೇಳುವ ಮೂಲಕ ಹಿಲರಿ ಕ್ಲಿಂಟನ್ ದುರಹಂಕಾರ ಮೆರೆದಿದ್ದಾರೆ. ಆನಂತರ ಪಶ್ಚಿಮ ಬಂಗಾಳಕ್ಕೆ ಹೋಗಿ ಮಮತಾ ಬ್ಯಾನರ್ಜಿಗೆ ತೀಸ್ತಾ ನದಿನೀರಿನ ವಿವಾದವನ್ನು ಹೇಗೆ ಬಗೆಹರಿಸಿಕೊಳ್ಳಬೇಕೆಂದು ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಲು ಸಮ್ಮತಿಸಲು ಒತ್ತಾಯ ಮಾಡಿದ್ದಾರೆ ಹಿಲರಿ. ಇಷ್ಟಾದರೂ ಯುಪಿಎ ಸರ್ಕಾರ ಹಿಲರಿ ಉದ್ಧಟತನದ ಬಗ್ಗೆ ಒಂದೂ ಚಕಾರ ಎತ್ತಿಲ್ಲ.

ಭಾರತವು ಇರಾನ್ ವಿಷಯದಲ್ಲಿ ಅಮೆರಿಕಾದ ಒತ್ತಡಕ್ಕೆ ಮಣಿಯುತ್ತಿರುವುದು ಇಂಥು ನೆನ್ನೆಯ [illegible] ಅಲ್ಲ. ಜುಲೈ 2005 ರಲ್ಲಿ ಅಮೆರಿಕಾದ ಅಧ್ಯಕ್ಷ ಬುಷ್ ಮತ್ತು ಭಾರತದ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಜಂಟಿ ಹೇಳಿಕೆ ಕೊಟ್ಟಾಗಿನಿಂದಲೂ, ಅಮೆರಿಕಾದ ವಿದೇಶಾಂಗ ನೀತಿಗೆ ತಕ್ಕಂತೆ ತನ್ನ ವಿದೇಶಾಂಗ ನೀತಿಯನ್ನು ರೂಪಿಸುವ ಪರಿಪಾಠ ಬೆಳೆಸಿಕೊಂಡಿದೆ. ಆ ವರ್ಷದ ಸೆಪ್ಟೆಂಬರ್‌ನಲ್ಲಿ, ಐಎಇಎ (ಇಂಟರ್ ನ್ಯಾಷನಲ್ ಅಟಾಮಿಕ್ ಎನರ್ಜಿ ಏಜನ್ಸಿ) ನಲ್ಲಿ ಭಾರತವು ಮೊಟ್ಟಮೊದಲ ಬಾರಿಗೆ ಇರಾನಿನ ವಿರುದ್ಧ ಮತ ಚಲಾಯಿಸಿತು. ಇರಾನನ್ನು ಮೂಲೆಗುಂಪಾಗಿಸಲು ಅಮೆರಿಕಾದ ಜತೆ ಭಾರತವು ಸಹಕರಿಸಬೇಕಾದ ಅಗತ್ಯವಿದೆ ಎಂದು ಅಮೆರಿಕಾದ ಕಾಂಗ್ರೆಸ್ ಅಂಗೀಕರಿಸಿದ ಹೈಡ್ ಕಾಯಿದೆಯು ನಿಗದಿಪಡಿಸಿತ್ತು. ಅಮೆರಿಕಾದ ಒತ್ತಡದಿಂದಾಗಿ ಇರಾನ್-ಪಾಕಿಸ್ತಾನ್-ಭಾರತ ಅನಿಲ ಕೊಳವೆಮಾರ್ಗದ ಯೋಜನೆಯನ್ನು ಭಾರತ ಕೈಬಿಟ್ಟಿತು. ಇರಾನ್ ಜತೆಗಿನ ಅನಿಲ ಕೊಳವೆಮಾರ್ಗದ ಯೋಜನೆಯನ್ನು ಮುಂದುವರಿಸಬಾರದು ಎಂದು ಇದೇ ಹಿಲರಿ ಕ್ಲಿಂಟನ್ ಭಾರತಕ್ಕೆ ಸ್ಪಷ್ಟವಾಗಿ ಹೇಳಿದ್ದರು. ಈಗ ಸದ್ಯ, ಜೂನ್‌ನಲ್ಲಿ ಒಬಾಮಾ ವಿಧಿಸಲಿರುವ ದಿಗ್ಬಂಧನದಿಂದ ರಿಯಾಯಿತಿ ಪಡೆಯುವ ತರಾತುರಿಯಲ್ಲಿ ಮನಮೋಹನ್ ಸಿಂಗ್ ಸರ್ಕಾರವು ತೆರೆಮರೆಯ ಪ್ರಯತ್ನ ನಡೆಸಿದೆ. ಇರಾನಿನ ತೈಲ ಆಮದಿನಲ್ಲಿ ಗಣನೀಯವಾದ ಕಡಿತಮಾಡಿ ರುವುದನ್ನು ತೋರಿಸಬೇಕಾಗಿದೆ.

ಇರಾನ್ ಪರಂಪರಾಗತವಾಗಿ ಭಾರತಕ್ಕೆ ತೈಲ ಪೂರೈಕೆ ಮಾಡುತ್ತಾ ಬಂದಿದೆ. ಬೇರೆಲ್ಲಾ ದೇಶಗಳಿಗಿಂತ ಇರಾನಿನಿಂದ ತೈಲ ಆಮದು ಅಗ್ಗವಾಗಿರುತ್ತದೆ. ಭಾರತಕ್ಕೆ ತೀರ ಅಗತ್ಯವಿರುವ ಅಗ್ಗದ ಅನಿಲವನ್ನು ಇರಾನ್ ಕೊಳವೆ ಮಾರ್ಗ ಪೂರೈಸಲು ಸಾಧ್ಯವಿತ್ತು. ಮಧ್ಯ ಏಶಿಯಾ ಮತ್ತು ಆಫ್ಘಾನಿಸ್ತಾನಕ್ಕೆ ಭಾರತದ ವ್ಯಾಪಾರ ಮತ್ತು ಸರಕು ಸಾಗಣೆಗೆ ಇರಾನ್ ಪ್ರವೇಶ ದ್ವಾರ. ಅಮೆರಿಕಾದ ಜತೆ ಇರಬೇಕೆಂಬ ಒಂದೇ ಒಂದು ಕಾರಣಕ್ಕೆ ಇವೆಲ್ಲಾ ಅನುಕೂಲಗಳನ್ನು ಭಾರತ ಬಲಿಕೊಡುತ್ತಿದೆ.

ಮನಮೋಹನ್ ಸಿಂಗ್ ಸರ್ಕಾರದ ಈ ಭಾರತ-ಅಮೆರಿಕಾ ಸೇನಾ ಕಾರ್ಯಾಚರಣೆ ಒಪ್ಪಂದದಿಂದಾಗಿ ಭಾರತವು ತನ್ನೆಲ್ಲಾ ಹಿತಾಸಕ್ತಿಯನ್ನು ಬಲಿಕೊಡಬೇಕಾಗಿದೆ ಎಂಬುದಕ್ಕೆ ಈ ಮೇಲಿನ ಉದಾಹರಣೆಗಿಂತ ಉತ್ತಮವಾದ ಉದಾಹರಣೆ ಸಿಗಲಾರದು.

ಮಾಧ್ಯಮದ ಸಮಸ್ಯೆ-ಬಿಕ್ಕಟ್ಟುಗಳ ಮೂಲಬೇರು ....

-ಪುಟ 16 ರಿಂದ

ತಂದಿರುವುದು, ಇಂಟರ್ನೆಟ್ಟಿನ ಮೇಲೆ ಸರ್ಕಾರ ಮತ್ತು ಹಣಕಾಸು ಬಂಡವಾಳದ ಹಿಡಿತ ಮತ್ತು ಸೆನ್ಸಾರ್‌ಶಿಪ್ ಹೆಚ್ಚುತ್ತಿರುವುದು, ಭಾರತದಂತಹ ದೇಶದಲ್ಲಿ ಶೇ.8 ಜನರ 'ಆನ್ ಲೈನ್ ಪ್ರಜಾಪ್ರಭುತ್ವ'ದಲ್ಲಿ ಹಿಂದುತ್ವವಾದದ 'ಗಟ್ಟಿದನಿ' ಕೇಳಿಬರುತ್ತಿರುವ ವಿಪರ್ಯಾಸ – ಬಗ್ಗೆ ಅರಿವು ಈ ಆಶಾವಾದಕ್ಕೆ ಕಡಿವಾಣ ಸಹ ಹಾಕಿತು.

ಬದಲಿ ಮಾಧ್ಯಮದ ಅಗತ್ಯ

ಮಾಧ್ಯಮದ ಮತ್ತು ಸಮಾಜದ ಬಿಕ್ಕಟ್ಟುಗಳಿಗೆ ಪರಿಹಾರಗಳೇನು ಎಂಬ ಬಗ್ಗೆ ಸಹ, ಅದರ ಮೂಲಬೇರು ಬಗ್ಗೆ ಇದ್ದಷ್ಟೇ ಭಿನ್ನ ಅಭಿಪ್ರಾಯಗಳೇ ಇದ್ದಿದ್ದು ಆಶ್ಚರ್ಯವೇನಲ್ಲ. 'ಮುಖ್ಯವಾಹಿನಿ' ಮಾಧ್ಯಮದ ಪ್ರಭಾವ ಸದ್ಯಕ್ಕೆ ಹೋಗುವುದಿಲ್ಲ. ಆದ್ದರಿಂದ ಅವುಗಳ ಒಳಗಿಂದ ಎಚ್ಚೆತ್ತ ಪತ್ರಕರ್ತರು, ಹೊರಗಿಂದ ಓದುಗರು ಅದರ ಬದಲಾವಣೆಗೆ ಒತ್ತಡ ಹೇರಬೇಕು. ಹೊಸ ತಲೆಮಾರಿನ ಪತ್ರಕರ್ತರನ್ನು ಇದಕ್ಕಾಗಿ ತಯಾರು ಮಾಡಬೇಕು. ಅಣಿ ನೆರೆಸಬೇಕು ಎಂಬುದು ಒಂದು ಅಭಿಪ್ರಾಯ.. ಇಂತಹ ಸಾಧ್ಯತೆ ಕಡಿಮೆ. ವ್ಯಕ್ತಿಗಳು ಸಣ್ಣ ಗುಂಪುಗಳು ಚಳುವಳಿಗಳು ಜನಸಂಘಟನೆಗಳು; ಬದಲಿ ಮಾಧ್ಯಮಗಳನ್ನು ಕಟ್ಟಿ ಬೆಳೆಸುವುದು ಈಗಿನ ಬಿಕ್ಕಟ್ಟು ಪರಿಹಾರಕ್ಕೆ ಪ್ರಮುಖ ಸಾಧನ. ಇದಕ್ಕಾಗಿ ನವಮಾಧ್ಯಮಗಳು, ಸಮುದಾಯ ರೇಡಿಯೋ, ಸ್ಥಳೀಯ ಕೇಬಲ್ ಟಿವಿ ಮುಂತಾದ ಎಲ್ಲಾ ಸಾಧ್ಯತೆಗಳನ್ನು ಬಳಸಬೇಕು. ಇದು ಗಟ್ಟಿಯಾಗಿ ಮೂಡಿಬಂದ ಇನ್ನೊಂದು ಅಭಿಪ್ರಾಯ.

ಆದರೆ ಬದಲಿ ಮಾಧ್ಯಮ ನಿರ್ವಾತದಲ್ಲಿ ಹುಟ್ಟುವುದಿಲ್ಲ. ಅಥವಾ ಬದುಕಲು ಸಾಧ್ಯವಿಲ್ಲ. ಈಗಿನ ಮಾಧ್ಯಮ ಬಿಕ್ಕಟ್ಟುಗಳಿಗೆ ಕಾರಣವಾದ ನವ-ಉದಾರವಾದಿ ಜಾಗತೀಕರಣದ ವಿರುದ್ಧ ಹೋರಾಟದ ಭಾಗವಾಗಿ ಇದು ಆಗಬೇಕು. ಇದಕ್ಕೆ ಮಾಧ್ಯಮಗಳ 'ಒಪ್ಪಿಗೆಯ ಸಾಮೂಹಿಕ ಉತ್ಪಾದನೆ'ಯ ನವ-ಉದಾರವಾದಿ ಪಾತ್ರದ ಬಗ್ಗೆ ಈ ಚಳುವಳಿಯಲ್ಲಿ ಸೈದ್ಧಾಂತಿಕ ಸ್ಪಷ್ಟತೆ ಅಗತ್ಯ ಇದೆ. ಮಾಧ್ಯಮಗಳ ಪಾತ್ರದ ಬಗ್ಗೆ ಅರಿವು ಮೂಡಿಸುವುದು, ಪ್ರತಿರೋಧ ಒಡ್ಡುವುದು ಎಲ್ಲಾ ಸಾಮೂಹಿಕ ಸಂಘಟನೆಗಳ ಅಜೆಂಡಾದ ಭಾಗ ಆಗಬೇಕು. ಮಾಧ್ಯಮ ಶಿಕ್ಷಣ, ಮಾಧ್ಯಮ ವಿಮರ್ಶೆ ಹರಡುವ ವ್ಯಾಪಕ ಪ್ರಚಾರ-ಆಂದೋಲನ ನಡೆಸಬೇಕು. ಸಾರ್ವಜನಿಕ ಒಡೆತನ ಮತ್ತು ನಿಯಂತ್ರಣದಲ್ಲಿರುವ 'ಸಾರ್ವಜನಿಕ ಮಾಧ್ಯಮ ನೀತಿಗೆ' ಹೋರಾಡಬೇಕು. 'ಸಾರ್ವಜನಿಕ ಮಾಧ್ಯಮ' ಸರ್ಕಾರಿ ಮಾಧ್ಯಮ ಆಗಬೇಕಾಗಿಲ್ಲ. ನಿಜವಾದ 'ಸಾರ್ವಜನಿಕ ಮಾಧ್ಯಮ' ಆಗಲು ಸಾಧ್ಯವಿದೆ ಎಂಬುದಕ್ಕೆ ಹಾಲಂಡ್ ಮತ್ತು ಉತ್ತರ ಯುರೋಪಿನ ದೇಶಗಳಲ್ಲಿ 70-80 ರ ದಶಕದಲ್ಲಿ ಉತ್ತಮ ಮಾದರಿಗಳು ಇದ್ದವು. ಇವೆಲ್ಲದರ ಜತೆಗೆ, ಮುಖ್ಯವಾಹಿನಿ ಮಾಧ್ಯಮಗಳ ಒಳಗಿಂದ ಎಚ್ಚೆತ್ತ ಪತ್ರಕರ್ತರು, ಹೊರಗಿಂದ ಓದುಗರು ಅದರ ಬದಲಾವಣೆಗೆ ಒತ್ತಡ ಹೇರುವುದು ಸಾಧ್ಯವಾಗಬೇಕು. ಇದು ಮೂಡಿಬಂದ ಮತ್ತೊಂದು ಅಭಿಪ್ರಾಯ.

ಕೃಷ್ಣ ಭಂಡಾರಿ ಮತ್ತು ತಂಡದ ಪಂಚವಾದ್ಯದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಇಡೀ ಕಾರ್ಯಕ್ರಮವನ್ನು ಶ್ರೀಮತಿ ನುಗ್ಗಿಗೌಡ ತಮ್ಮ ಜಾನಪದ ಹಾಡಿನೊಂದಿಗೆ ಉದ್ಘಾಟಿಸಿದರು. ವಿಷ್ಣು ನಾಯಕ್ ಆರ್.ವಿ.ಭಂಡಾರಿಯವರನ್ನು ಭಾವಪೂರ್ಣವಾಗಿ ನೆನೆಸಿಕೊಳ್ಳುತ್ತಾ ಎಲ್ಲರನ್ನೂ ಸ್ವಾಗತಿಸಿದರು. ಹತ್ತಾರು ಕವಿಗಳು ಭಾಗವಹಿಸಿದ ಕವಿಗೋಷ್ಠಿ, ಕುಣಬಿ ನೃತ್ಯ ಸಾಹಿತ್ಯೋತ್ಸವದ ಮೆರಗನ್ನು ಹೆಚ್ಚಿಸಿದವು. ಉಡುಪಿಯ ರಥಬೀದಿಗೆಳೆಯರು ತಂಡ, ಡಾ.ಶ್ರೀಪಾದ ಭಟ್ ನಿರ್ದೇಶನದ ಸಾದತ್ ಹಸನ್ ಮಾಂಟೋ ಕತೆ ಆಧಾರಿತ 'ಮಿಸ್ಟೇಕ' ನಾಟಕ ಪ್ರದರ್ಶನ ಮಾಡಿದರು. ಡಾ.ವಿಠ್ಠಲ ಭಂಡಾರಿ ಮತ್ತು ಸಹಯಾನದ ಇತರ ಸಂಗಾತಿಗಳು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಆದಿವಾಸಿಗಳ ಭೂಮಿ ಹಕ್ಕಿಗೆ.......

-ಪುಟ 6 ರಿಂದ

[illegible]ರ್ಗದ ಹಾಗೂ ಬುದ್ಧಿಜೀವಿ ವಿಭಾಗದ ನಾಗರಿಕರಲ್ಲದೆ ಸಿಪಿಐ(ಎಂ) ಪಕ್ಷದ ಸದಸ್ಯರು ಹಿತೈಷಿಗಳು ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದರು. ವೇದಿಕೆಯ ಅಧ್ಯಕ್ಷ ನ್ಯಾಯವಾದಿ ಯಶವಂತ ಮರೋಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯ ಕಾರ್ಯದರ್ಶಿ ಯಾದವ ಶೆಟ್ಟಿ ಸ್ವಾಗತಿಸಿ, ಕೃಷ್ಣಪ್ಪ ಕೊಂಚಾಡಿ ವಂದಿಸಿದರು. ಬಿ.ಮಾಧವ ಅವರು ಕಾರಟ್ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು.

ವಿಠಲ ಮಲೆಕುಡಿಯ ಸಂರಕ್ಷಣಾ ಸಮಿತಿ ರಚನೆ

ಪ್ರಕಾಶ್ ಕಾರಟ್ ಅವರ ಸಮ್ಮುಖದಲ್ಲಿ ವಿಠಲ ಮಲೆಕಡಿಯ ಅವರಿಗೆ ನ್ಯಾಯಾಲಯದಲ್ಲಿ ರಕ್ಷಣೆ (ಡಿಫೆನ್ಸ್) ಒದಗಿಸಲು ಜಿಲ್ಲೆಯ ಗಣ್ಯರನ್ನೊಳಗೊಂಡ ಡಿಫೆನ್ಸ್ ಕಮಿಟಿಯೊಂದನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಯಶವಂತ ಮರೋಳಿ, ಉಪಾಧ್ಯಕ್ಷರಗಳಾಗಿ ಸಾಹಿತಿ ಸಾರಾ ಅಬುಬಾಕರ್, ನ್ಯಾಯವಾದಿ ದಿನೇಶ್ ಉಳೇಪಾಡಿ, ವಿದ್ವಾಂಸ ಫಾ.ಜಾನ್ ಫೆರ್ನಾಂಡೀಸ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಮುನೀರ್ ಕಾಟಿಪಳ್ಳ ಆಯ್ಕೆಯಾಗಿರುತ್ತಾರೆ.

ಕಾರಾಗೃಹದಲ್ಲಿ ವಿಠಲನನ್ನು ಭೇಟಿಯಾದ ಪ್ರಕಾಶ್ ಕಾರಾಟ್

ವಿಚಾರಗೋಷ್ಠಿಗೆ ಮೊದಲು ವಿಠಲ ಮಲೆಕಡಿಯ ಮತ್ತು ಆತನ ತಂದೆ ಲಿಂಗಣ್ಣ ಅವರನ್ನು ಪ್ರಕಾಶ್ ಕಾರಟ್ ಮಂಗಳೂರಿನ ಜಿಲ್ಲಾ ಕಾರಾಗೃಹದಲ್ಲಿ ಭೇಟಿಯಾಗಿ ಕ್ಷೇಮ ವಿಚಾರಿಸಿ ಸಂವಾದ ನಡೆಸಿದರು. ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ವಿಠಲ ಮತ್ತು ಆತನ ತಂದೆಯನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಸಂಸದರ ನಿಯೋಗವೊಂದು ಮೇ 28 ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯ ಬಳಿಗೆ ತೆರಳಲಿದೆ ಎಂದು ತಿಳಿಸಿದರು.

ವಿಠಲ ಮತ್ತು ಆತನ ತಂದೆಯ ಮೇಲೆ ಹೊರಿಸಿರುವ ಆರೋಪದ ವಿರುದ್ಧ ರಾಜ್ಯ ಹೈಕೋರ್ಟ್ , ಅಗತ್ಯ ಬಿದ್ದರೆ ಸರ್ವೋಚ್ಚ ನ್ಯಾಯಾ ಲಯದಲ್ಲೂ ಕಾನೂನು ಹೋರಾಟ ನಡೆಸಲಾಗುವುದು. ಅಲ್ಲದೇ ರಾಜಕೀಯ ವಾಗಿಯೂ ಹೋರಾಟ ನಡೆಸಲಾಗುವುದು ಎಂದು ಪ್ರಕಾಶ್ ಕಾರಾಟ್ ನುಡಿದರು.

ಕುತ್ಲೂರಿನಿಂದ ಮಂಗಳೂರಿಗೆ ಇತರ ಹತ್ತಾರು ಮಲೆಕುಡಿಯ ಬಂಧುಗಳೊಂದಿಗೆ ಮಂಗಳೂರಿನ ಕಾರ್ಯಕ್ರಮಕ್ಕೆ ಬಂದಿದ್ದ ವಿಠಲನ ತಾಯಿ ಹೊನ್ನಮ್ಮ ಮತ್ತು ಆತನ ತಂಗಿಯನ್ನೂ ಪ್ರಕಾಶ್ ಕಾರಟ್ ಮಾತನಾಡಿಸಿ ಅವರ ದು:ಖ ದುಮ್ಮಾನವನ್ನು ಆಲಿಸಿ, ಅವರಿಗೆ ಧೈರ್ಯ ಹುಟ್ಟಿಸುವ ಪ್ರೋತ್ಸಾಹದ ಮಾತುಗಳನ್ನಾಡಿದರು.

RNI No. KARKAN /2006/17926 Posted on every Satuarday
JANASHAKTHI KANNADA VARA PATRIKE JUN 3, 2012 Price : Rs. 5/- Postal Reg. No. RNP/KA/BGS/2078/2010-12 Posted at MBC Bangalore GPO

ಆರ್.ವಿ. ಭಂಡಾರಿಯವರ ನೆನಪಿನ ಸಹಯಾನ ಸಾಹಿತ್ಯೋತ್ಸವ 2012

ಮಾಧ್ಯಮದ ಸಮಸ್ಯೆ-ಬಿಕ್ಕಟ್ಟುಗಳ ಮೂಲಬೇರು ನವ-ಉದಾರವಾದ

ಮಾಧ್ಯಮದ ಸಮಸ್ಯೆಗಳು, ಬಿಕ್ಕಟ್ಟುಗಳು ಏನು? ಅವಕ್ಕೆ ಏನು ಮೂಲ ಕಾರಣ? ಸಮಾಜದ ಸಮಸ್ಯೆಗಳಿಗೆ ಮಾಧ್ಯಮ ಪರಿಹಾರ ಕೊಡಬಲ್ಲುದೆ? ಅಥವಾ



ಮಾಧ್ಯಮವೇ ಸಮಾಜ ಎದುರಿಸುತ್ತಿರುವ ಒಂದು ತೀವ್ರ ಸಮಸ್ಯೆಯೆ ? ಇವೆಲ್ಲಾ ಮಾಧ್ಯಮದಲ್ಲಿ ಹೊಸ ತಂತ್ರಜ್ಞಾನಗಳು ಸೃಷ್ಟಿ ಮಾಡಿರುವ ಸಮಸ್ಯೆಯೆ ? ಇವೆಲ್ಲದರಲ್ಲಿ ಹೊಸ ತಲೆಮಾರಿನ ಪಾತ್ರ ಏನು ? ಇವೆಲ್ಲದಕ್ಕೆ ಏನು ಪರಿಹಾರ. ?

ಮಾಧ್ಯಮದ ಬಗೆಗಿನ ಈ ಹಲವು ಹತ್ತು ಹಲವು ಪ್ರಶ್ನೆಗಳನ್ನು ಮಗ್ಗುಲುಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಎತ್ತಿ ಅದಕ್ಕೆ ಉತ್ತರ ಕಂಡುಕೊಳ್ಳಲು ಇತ್ತೀಚೆಗೆ ನಡೆದ 'ಮಾಧ್ಯಮ: ಹೊಸ ತಲೆಮಾರು' ಎಂಬ ಒಂದು ದಿನ ಸಂವಾದದಲ್ಲಿ ಪ್ರಯತ್ನಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೆರೆಕೋಣದಲ್ಲಿ ಹಿರಿಯ ಬಂಡಾಯ ಸಾಹಿತಿ ಡಾ.ಆರ್.ವಿ. ಭಂಡಾರಿ ಅವರ ನೆನಪಿನಲ್ಲಿ ರಚಿತವಾದ 'ಸಹಯಾನ ಟ್ರಸ್ಟ್' ಮೇನಲ್ಲಿ ಹಮ್ಮಿಕೊಂಡ 'ಸಹಯಾನ ಸಾಹಿತ್ಯೋತ್ಸವ-2012' ಈ ವರ್ಷ ಮಾಧ್ಯಮದ ವಿಷಯವನ್ನು ಆರಿಸಿಕೊಂಡಿತ್ತು. ಇದು 'ಸಹಯಾನ ಸಾಹಿತ್ಯೋತ್ಸವ'ದ ಮೂರನೇ ಅವತರಣಿಕೆಯಾಗಿತ್ತು.

ಮಾಧ್ಯಮದ ವರ್ತಮಾನದ ಬಿಕ್ಕಟ್ಟುಗಳು

ಈ ಸಂವಾದದ ಖ್ಯಾತ ಸಿನಿಮಾ-ಟಿವಿ ನಿರ್ದೇಶಕ ನಟ ಬಿ.ಸುರೇಶ ಅವರ ಸಾರಥ್ಯದಲ್ಲಿ ನಡೆಯಿತು. ಸಂವಾದದಲ್ಲಿ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಜಿ.ಪಿ. ಬಸವರಾಜು ಭಾಗವಹಿಸಿದ್ದರು. ಸಂವಾದದ ಪ್ರಮುಖ ಭಾಗವಾದ ವಿಚಾರ ಸಂಕಿರಣದಲ್ಲಿ 'ನವ ಮಾಧ್ಯಮಗಳ ಹಿನ್ನೆಲೆಯಲ್ಲಿ ಮುದ್ರಣ ಮಾಧ್ಯಮ' ಎಂಬ ವಿಷಯದ ಬಗ್ಗೆ ಪ್ರಜಾವಾಣಿಯ ಪತ್ರಕರ್ತ ಎನ್.ಎ.ಎಂ. ಇಸ್ಮಾಯಿಲ್ ತಮ್ಮ ವಿಚಾರಗಳನ್ನು ಮಂಡಿಸಿದರು. ವರ್ತಮಾನ ಪತ್ರಿಕೆಯ ಸಂಪಾದಕ ರವಿಕೃಷ್ಣ ರೆಡ್ಡಿ 'ದೃಶ್ಯ ಮಾಧ್ಯಮ- ವರ್ತಮಾನ ಮತ್ತು ಭವಿಷ್ಯ' ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಆ ಮೇಲೆ ನಡೆದ 'ಮಾಧ್ಯಮದ ವರ್ತ ಮಾನದ ಬಿಕ್ಕಟ್ಟುಗಳು' ಎಂಬ ಚರ್ಚೆಯಲ್ಲಿ 'ಕರಾವಳಿ ಮುಂಜಾವು' ಸಂಪಾದಕ ಗಂ ಗಾಧರ ಹಿರೇಗುತ್ತಿ, ಚಿತ್ತಾರ ಪತ್ರಿಕೆಯ ಸಂಪಾದಕ ಬಿ. ಗಣಪತಿ, ಚಿಂತನ ಪುಸ್ತಕದ ವಸಂತರಾಜ ಎನ್.ಕೆ., ಡಿವೈಎಫ್ಐ ನಾಯಕ ಮುನೀರ್ ಕಾಟಿಪಳ್ಳ, ಕಸ್ತೂರಿ ಚಾನೆಲಿನ ವರದಿಗಾರ ನವೀನ್ ಮೂಲಕ ಮಾಧ್ಯಮದ ಬಗ್ಗೆ ಚಿಂತನೆ ಮುಂದುವರೆಸಿದರು. ಕೆ.ಎಸ್.ವಿಮಲ ಚರ್ಚೆಯ ಸಂಯೋಜನೆ ಮಾಡಿದರು. ಹಿರಿಯ ಪತ್ರಕರ್ತ ಶಶಿಧರ ಭಟ್ ಸಮಾರೋಪ ಭಾಷಣದವರೆಗೂ ಚರ್ಚೆ ಮುಂದುವರೆಯಿತು. ಬಿ.ಸುರೇಶ ಈ ಸಂವಾದದ ಪ್ರತಿ ಹಂತದಲ್ಲೂ ತಮ್ಮ ಭಾಷ್ಯವನ್ನು ಕೊಟ್ಟರು.

ಮಾಧ್ಯಮ ಹೊಸ ತಲೆಮಾರಿನ ನ್ಯೂನ್ಯತೆಗಳು

ಮನುಷ್ಯ-ಮನುಷ್ಯರ ನಡುವಣ ಎಲ್ಲಾ ಸಂಪರ್ಕಗಳು ಈಗ ಮಾಧ್ಯಮಗಳ ಮೂಲಕವೇ ಆಗಬೇಕು. ಎಲ್ಲವನ್ನೂ ಮಾಧ್ಯಮದ ಮೂಲಕವೇ ಕಲಿತಿಧೆ ಹೊಸ ತಲೆಮಾರು. ದೊಡ್ಡ ಸಂಖ್ಯೆಯಲ್ಲಿ ಮಾಧ್ಯಮ ಸೇರಿಕೊಂಡಿದೆ. ಅದರಿಂದ ವಿಪರೀತವಾಗಿ ಪ್ರಭಾವಿತಗೊಂಡಿದೆ. ಸೈದ್ಧಾಂತಿಕ ಚೌಕಟ್ಟು, ನೈತಿಕತೆ, ಮೌಲ್ಯ ಪ್ರಜ್ಞೆ ಇಲ್ಲದೆ ಅದನ್ನು ಬದಲಾಯಿಸುವ ಶಕ್ತಿ ಅದಕ್ಕೆ ಇಲ್ಲ. ಮಾಧ್ಯಮ ಮಾಹಿತಿ ತಂತ್ರಜ್ಞಾನದ ಅಗಾಧ ಬೆಳವಣಿಗೆಗಳೊಂದಿಗೆ, ಮನುಷ್ಯ ಕೇಂದ್ರಿತವಾಗಿರುವ ಬದಲು ತಂತ್ರಜ್ಞಾನ-ಕೇಂದ್ರಿತವಾಗಿದೆ. ಭಾಷೆ ಹಾಳಾಗಿದೆ. ಮಾಧ್ಯಮ ಪ್ರಧಾನವಾಗಿ ಉದ್ಯಮವಾಗಿದ್ದು, ಭ್ರಷ್ಟವಾಗಿದ್ದು, ಪ್ರಜಾಪ್ರಭುತ್ವವನ್ನು ಎತ್ತಿ ನಿಲ್ಲಿಸುವ ಕರ್ತವ್ಯದಿಂದ ವಿಮುಖವಾಗಿದೆ. ಸಮಾಜವನ್ನು ತಿದ್ದುವ ಬದಲು, ಮಾಧ್ಯಮಗಳು ಮೌಢ್ಯ-ಅಜ್ಞಾನ ಬಿತ್ತುತ್ತಾ, ಸೆಕ್ಸ್-ಕ್ರೈಮ್-ಜ್ಯೋತಿಷ್ಯವನ್ನು ಬಂಡವಾಳ ಮಾಡಿಕೊಂಡಿವೆ. ಮುದ್ರಣ ಮಾಧ್ಯಮ ತನ್ನ ಪ್ರಭಾವ ಕಳೆದುಕೊಂಡಿದೆ. ಮುದ್ರಣ ಮಾಧ್ಯಮಕ್ಕಿಂತ ದೃಶ್ಯ ಮಾಧ್ಯಮ ಪ್ರಧಾನವಾಗಿರುವುದು ಈ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಬಹುಶಃ ಏನೂ ಮಾಡಲು ಸಾಧ್ಯವಿಲ್ಲ ಎಂಬ ನಿರಾಶಾವಾದ ಚರ್ಚೆ-ಸಂವಾದದಲ್ಲಿ ಮೂಡಿಬಂದ ಒಂದು ಅಭಿಪ್ರಾಯ.



ನವ-ಉದಾರವಾದ ಮೂಲಬೇರು

ಮಾಧ್ಯಮ (ಅದರಲ್ಲೂ ಪತ್ರಿಕೆಗಳು) ಯಾವಾಗಲೂ ಉದ್ಯಮವಾಗಿ ಇತ್ತು. ಮಾಧ್ಯಮ ಹಳೆಯ ತಲೆಮಾರಿನ ಪತ್ರಕರ್ತರ ಭ್ರಷ್ಟತೆ, ಹೊಸ ತಲೆಮಾರಿನ ಪತ್ರಕರ್ತರ ನ್ಯೂನ್ಯತೆಗಳು ಇಂದಿನ ಮಾಧ್ಯಮ ಅಥವಾ ಸಮಾಜದ ಸಮಸ್ಯೆಗಳ ಮೂಲ ಕಾರಣವಲ್ಲ. ಅವು ಸಮಾಜದಲ್ಲಿ ಮಾಧ್ಯಮದಲ್ಲಿ ಆದ ಮೂಲಭೂತ ಬದಲಾವಣೆಗಳ ಪರಿಣಾಮವೇ ಹೊರತು ಕಾರಣವಲ್ಲ. ಕಳೆದ 20 ವರ್ಷದಲ್ಲಿ ಮೂಲಭೂತ ಬದಲಾವಣೆ ಬಂದಿರುವುದು ಮಾಧ್ಯಮದ ಒಡೆತನದಲ್ಲಿ ಬದಲಾವಣೆ, ಜಾಹೀರಾತುದಾರರ ಪ್ರಭಾವದ ಹೆಚ್ಚಳ ಮತ್ತು ಅದರ ಜತೆಗೆ ಬಂದ ನವ-ಉದಾರವಾದ ಪೋಷಿತ ಮಾಧ್ಯಮದ ಪಾತ್ರದ ಬದಲಾವಣೆಯಿಂದ. ರೂ.8 ಉತ್ಪಾದನಾ ವೆಚ್ಚ ಇರುವ ಪತ್ರಿಕೆಯ ಬೆಲೆಯನ್ನು ಪೈಪೋಟಿಯಲ್ಲಿ ರೂ.3 ರಿಂದ ರೂ.1.50ಕ್ಕೆ ಇಳಿಸಲಾಗಿದೆ. ಇದಕ್ಕೆ ಸಬ್ಸಿಡಿ ಕೊಡುವ ಜಾಹಿರಾತುದಾರರ ಬಲ-ಪ್ರಭಾವ ವಿಪರೀತ ಹೆಚ್ಚಿದೆ. ಓದುಗರ ಪ್ರಭಾವ ತಗ್ಗಿದೆ. 'ಫೀಲ್-ಗುಡ್ ಪತ್ರಕಾರಿತೆ' ನವ-ಉದಾರವಾದದ ಉತ್ಪನ್ನ. ಚೋಮ್ಸ್ಕಿ ಹೇಳುವ ಹಣಕಾಸು ಬಂಡವಾಳದ ಪರವಾಗಿ 'ಒಪ್ಪಿಗೆಯ ಸಾಮೂಹಿಕ ಉತ್ಪಾದನೆ' ನವ-ಉದಾರವಾದದ ನೆರಳಲ್ಲಿ ಈಗ ಮಾಧ್ಯಮದ ಪ್ರಮುಖ ಪಾತ್ರ. ಈ ಮೂಲಭೂತ ಅಂಶ ಗ್ರಹಿಸದೆ ಮಾಧ್ಯಮದ ಬಿಕ್ಕಟ್ಟು ಅರ್ಥ ಮಾಡಿಕೊಳ್ಳುವುದೂ ಸಾಧ್ಯವಿಲ್ಲ. ಅದಕ್ಕೆ ಪರಿಹಾರ ಹುಡುಕುವುದೂ ಸಾಧ್ಯವಿಲ್ಲ. ಇದು ಮೂಡಿಬಂದ ಇನ್ನೊಂದು ಪ್ರಧಾನ ಅಭಿಪ್ರಾಯ.

'ಆನ್ ಲೈನ್ ಪ್ರಜಾಪ್ರಭುತ್ವ' ಬಗ್ಗೆ ಆಶಾವಾದ

ತಂತ್ರಜ್ಞಾನ ಮಾಧ್ಯಮದ ಮೂಲಭೂತ ಸ್ವಭಾವದಲ್ಲಿ ನಕಾರಾತ್ಮಕವಾದ ಬದಲಾವಣೆ ತಂದಿದೆ ನಿಜ. ಆದರೆ ಇಂಟರ್ ನೆಟ್, ಮೊಬೈಲಿನಂತಹ ಕಡಿಮೆ ಖರ್ಚಿನ ಹೆಚ್ಚು ಮುಕ್ತವಾದ ನವಮಾಧ್ಯಮಗಳು, ಟಿವಿ-ಪತ್ರಿಕೆಗಳ ಏಕಸ್ವಾಮ್ಯಕ್ಕೆ ದುಡ್ಡಿನ ಬಲಕ್ಕೆ, ವ್ಯಕ್ತಿಗಳು ಸಣ್ಣ ಗುಂಪುಗಳು ಚಳುವಳಿಗಳು ಜನಸಂಘಟನೆಗಳು, ಸವಾಲು ಹಾಕುವ ಸಾಧ್ಯತೆಯನ್ನು ಹೆಚ್ಚಿಸಿವೆ. ಈಗ ಬ್ಲಾಗುಗಳು, ಟ್ವಿಟರ್, ಎಸ್ಸೆಮ್ಮೆಸ್, ಯೂ-ಟ್ಯೂಬುಗಳಿಗೆ ಸೀಮಿತವಾಗಿದೆ ನಿಜ. ಆದರೆ ಇನ್ನಷ್ಟು ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಇಂಟರ್ನೆಟ್ ಲಭ್ಯತೆಯ ವಿಸ್ತಾರದೊಂದಿಗೆ, ಪೂರ್ಣ ಪ್ರಮಾಣದ ಟಿವಿ, ಪತ್ರಿಕೆಗಳನ್ನು ಕಡಿಮೆ ಖರ್ಚಿನಲ್ಲಿ 'ಆನ್ ಲೈನ್ ಸಿಟಿಜನ್ ಪತ್ರಕಾರಿತೆ' ಯ ಸಾಧ್ಯತೆ ಹೆಚ್ಚಲಿದೆ. ಹೆಚ್ಚು ಸಪಾಟಾದ ಮಾಧ್ಯಮ ಲೋಕ ಮತ್ತು ಗಟ್ಟಿಯಾದ 'ಆನ್ ಲೈನ್ ಪ್ರಜಾಪ್ರಭುತ್ವ' ಬರಲಿದೆ ಎಂಬ ಆಶಾವಾದ ಇನ್ನೊಂದು ಕಡೆ. ಸಾಮಾಜಿಕ-ಆರ್ಥಿಕ ಅಸಮಾನತೆ ಇಂಟರ್ನೆಟ್ ಲಭ್ಯತೆಯ ಅಸಮಾನತೆಯನ್ನೂ

-ಪುಟ 15 ಕ್ಕೆ

ವಿಚಾರ ಸಂಕಿರಣದಲ್ಲಿ ಇಸ್ಮಾಯಿಲ್, ರವಿಕೃಷ್ಣ ರೆಡ್ಡಿ, ಬಿ.ಸುರೇಶ.



JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12 18th Cross S.R.Nagar, BANGALORE-560027 Editor, S.Y.GURURSHANTH, No12, 18th Cross, S.R.Nagar, BANGALORE - 560027
Editor S.Y.GURUSHANTH